# ಅಧ್ಯಾಯ – ೮

# ಆರ್ಥಿಕ ಪ್ರವೃತ್ತಿಗಳು

ಯಾವುದೇ ಪ್ರದೇಶದ ಸಮಗ್ರ ಪ್ರಗತಿ ಅಲ್ಲಿನ ಆರ್ಥಿಕ ಅಭಿವೃದ್ಧಿಯನ್ನು ಅವಲಂಬಿಸಿರುತ್ತದೆ. ಆಯಾ ಪ್ರದೇಶಗಳಲ್ಲಿ ಲಭ್ಯವಿರುವ ನೈಸರ್ಗಿಕ ಸಂಪತ್ತು, ಮಾನವ ಸಂಪತ್ತು, ಕೃಷಿ, ಕೈಗಾರಿಕೆ, ಬ್ಯಾಂಕಿಂಗ್, ವಾಣಿಜ್ಯ–ವ್ಯಾಪಾರ, ಸಾರಿಗೆ–ಸಂಪರ್ಕ, ಉಳಿತಾಯ ಕ್ಷಮತೆ, ಬಂಡವಾಳ ಹೂಡಿಕೆ, ನಗರೀಕರಣ, ಉದ್ಯೋಗ, ಕೂಲಿ, ತಲಾದಾಯ, ಬೆಲೆ, ಮುಂತಾದ ಹತ್ತು ಹಲವು ರಂಗಗಳಲ್ಲಿ ಕಂಡುಬರುವ ಏರಿಳಿತಗಳನ್ನು ಆಧರಿಸಿದ ಆರ್ಥಿಕ ಪ್ರವೃತ್ತಿಗಳು ಆಯಾ ಪ್ರದೇಶಗಳ ಆರ್ಥಿಕ ಮುನ್ನಡೆಯನ್ನು ಸೂಚಿಸುತ್ತವೆ. ಲಭ್ಯವಿರುವ ನೈಸರ್ಗಿಕ ಹಾಗೂ ಆರ್ಥಿಕ ಸಂಪನ್ಮೂಲಗಳ ಸಮಗ್ರ ಬಳಕೆಗೆ ಪೂರಕವಾದ ಮೂಲಭೂತ ಸೌಕರ್ಯಗಳು, ತಂತ್ರಜ್ಞಾನಗಳೇ ಮುಂತಾದ ಅಂಶಗಳು ಆರ್ಥಿಕ ಪ್ರವೃತ್ತಿಯ ದಿಸೆಯನ್ನು ನಿರ್ದೇಶಿಸುವ ಪ್ರಧಾನ ಅಂಶಗಳಾಗಿದ್ದು, ಆರ್ಥಿಕ ಅಭಿವೃದ್ಧಿ ಸಾಧಿಸುವಲ್ಲಿ ನೆರವಾಗುತ್ತವೆ. ಹೀಗೆ ಸಮಾಜದ ಬದಲಾವಣೆ ಮತ್ತು ಸುಧಾರಣೆಗಳಿಗೆ ಮಾರ್ಗಸೂಚಿಗಳಾಗಬಹುದಾದ ಆರ್ಥಿಕ ಪ್ರವೃತ್ತಿಗಳು ತುಮಕೂರು ಜಿಲ್ಲೆಯ ಸರ್ವಾಂಗೀಣ ಬೆಳವಣಿಗೆಯನ್ನು ಸಾಧಿಸುವ ನಿಟ್ಟಿನಲ್ಲಿ ವಹಿಸಿರುವ ಪಾತ್ರ ಹಾಗೂ ಬೀರಿರುವ ಪ್ರಭಾವಗಳನ್ನು ಇಲ್ಲಿ ಬಿಂಬಿಸಲು ಯತ್ನಿಸಲಾಗಿದೆ.

ಬಹು ಹಿಂದಿನಿಂದಲೂ ಕೃಷಿ ಪ್ರಧಾನವಾಗಿರುವ ಈ ಜಿಲ್ಲೆಯು ೨೦೧೧ರ ಜನಗಣತಿಯಂತೆ ೨೬,೭೮,೯೮೦ ಒಟ್ಟು ಜನಸಂಖ್ಯೆಯಲ್ಲಿ ೨೦,೭೯,೯೦೨ ಮಂದಿ (ಶೇ. ೭೭.೬೪ರಷ್ಟು) ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿದ್ದರೆ, ೫೯೯,೦೭೮ ಮಂದಿ (ಶೇ ೨೨.೩೬ರಷ್ಟು) ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಜಿಲ್ಲೆಯ ಸರಾಸರಿ ವಾರ್ಷಿಕ ವಾಡಿಕೆ ಮಳೆ ೫೮೪.೪೪ ಮಿ.ಮೀ ಇದ್ದು, ಅರಣ್ಯ ಸಂಪತ್ತು ಹಾಗೂ ಖನಿಜ ಸಂಪತ್ತು ನಿರೀಕ್ಷಿತ ಪ್ರಮಾಣದಲ್ಲಿರುವುದಿಲ್ಲ. ಪ್ರಾಚೀನ ಕಾಲದಲ್ಲಿ ಕೆರೆ, ಕಟ್ಟೆ, ಕಾಲುವೆ, ಬಾವಿ ಹಾಗೂ ಕೊಳವೆ ಬಾವಿಗಳಿಂದ ನೀರಾವರಿ ಸೌಲಭ್ಯ ಪಡೆದು ಕೃಷಿ ಚಟುವಟಿಕೆಗಳಲ್ಲಿ ನಿರತವಾಗಿದ್ದು ೨೦೧೦–೧೧ರಲ್ಲಿ ೨,೪೦,೬೫೮ ಹೆಕ್ಟೇರ್ ಪ್ರದೇಶದಲ್ಲಿ ಒಟ್ಟು ಏಕದಳ ಮತ್ತು ಉಪತೃಣ ಧಾನ್ಯಗಳನ್ನೂ, ೬೭,೫೫೭ ಹೆಕ್ಟೇರ್ ಪ್ರದೇಶದಲ್ಲಿ ಒಟ್ಟು ದ್ವಿದಳ ಧಾನ್ಯಗಳನ್ನೂ, ೩,೦೭,೯೧೫ ಹೆಕ್ಟೇರ್ ಪ್ರದೇಶದಲ್ಲಿ ಒಟ್ಟು ಆಹಾರ ಧಾನ್ಯಗಳನ್ನೂ ಹಾಗೂ ೧,೧೪,೫೩೨ ಹೆಕ್ಟೇರ್ ಪ್ರದೇಶದಲ್ಲಿ ಎಣ್ಣೆ ಕಾಳುಗಳನ್ನೂ ಬೆಳೆಯಲಾಗಿತ್ತು. ಹತ್ತಿ, ಕಬ್ಬು, ತಂಬಾಕು, ಅರಳು, ಎಳ್ಳು, ಸೋಯ, ಅವರೆ, ಸೂರ್ಯಕಾಂತಿ, ಹುಚ್ಚೆಳ್ಳು ಮೊದಲಾದ ವಾಣಿಜ್ಯ ಬೆಳೆಗಳನ್ನು

ಬೆಳೆಯಲಾಗಿತ್ತು. ಹೈನುಗಾರಿಕೆ, ಕುಕ್ಕುಟ ಸಾಕಾಣಿಕೆ ಹಾಗೂ ರೇಷ್ಮೆ ಕೃಷಿಗಳು ಜನರ ಪ್ರಮುಖ ಉಪಕಸುಬುಗಳಾಗಿ ಬೆಳೆದು ಜನರ ಆರ್ಥಿಕ ಸ್ಥಿತಿಗತಿಗಳನ್ನು ಗಣನೀಯ ಪ್ರಮಾಣದಲ್ಲಿ ಸುಧಾರಿಸಿವೆ. ತುಮಕೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ಮಲ್ಲಸಂದ್ರದಲ್ಲಿ ೧೯೭೫ರಿಂದಲೂ ಕಾರ್ಯನಿರ್ವಹಿಸುತ್ತಿದ್ದು, ಹಾಲು ಉತ್ಪನ್ನಗಳ ತಯಾರಿಕೆಯ ಜೊತೆಗೆ ಜಿಲ್ಲೆಯ ಕ್ಷೀರ ಕ್ರಾಂತಿಗೆ ಪ್ರೇರಕವಾಗಿದೆ.

ಜಿಲ್ಲೆಯಲ್ಲಿ ೨೦೧೧ರ ಜನಗಣತಿಯಂತೆ ಒಟ್ಟು ೧೮,೧೩,೩೯೧ ಮಂದಿ (ಶೇ.೭೫.೧೪) ಸಾಕ್ಷರರಿದ್ದು, ರಾಜ್ಯದ್ದು ಶೇ.೭೫.೩೬ ಆಗಿತ್ತು. ಜಿಲ್ಲೆಯಲ್ಲಿ ಒಟ್ಟು ೨೦,೭೯,೯೦೨ ಗ್ರಾಮೀಣ ಜನಸಂಖ್ಯೆಯಲ್ಲಿ ೧೩,೪೪,೪೩೮ ಮಂದಿ (ಶೇ.೭೧.೬೬) ಗ್ರಾಮೀಣ ಸಾಕ್ಷರರಾಗಿದ್ದರು. ಒಟ್ಟು ೫,೫೯,೦೭೮ ನಗರ ಜನಸಂಖ್ಯೆಯಲ್ಲಿ ೪,೬೮,೯೫೩ ಮಂದಿ (ಶೇ.೮೭.೩೨) ನಗರ ಸಾಕ್ಷರರಿದ್ದರು. ಇದು ಕ್ರಮವಾಗಿ ರಾಜ್ಯದಲ್ಲಿ ಶೇ.೬೮.೭೩ ಹಾಗೂ ಶೇ.೮೫.೭೮ ಆಗಿತ್ತು. ಪುರುಷರ ಸಾಕ್ಷರತೆ ಶೇ.೮೨.೮೧ (ರಾಜ್ಯದ್ದು ಶೇ.೮೨.೪೭) ಇದ್ದು, ಇದು ರಾಜ್ಯ ಮಟ್ಟಕ್ಕಿಂತ ಹೆಚ್ಚಾಗಿದೆ. ಒಟ್ಟು ೧೩,೫೦,೫೯೪ ಪುರುಷ ಜನಸಂಖ್ಯೆಯಲ್ಲಿ ಒಟ್ಟು ೧೦,೦೬,೦೨೪ (ಶೇ.೮೨.೮೧,) ಪುರುಷ ಸಾಕ್ಷರರಿದ್ದರು. ಇವರಲ್ಲಿ ೭,೬೦,೩೨೨ (ಶೇ.೮೦.೪೮) ಮಂದಿ ಗ್ರಾಮಾಂತರದಲ್ಲೂ, ೨,೪೫,೭೦೨ (ಶೇ.೯೦.೯೩) ಮಂದಿ ನಗರದಲ್ಲಿದ್ದರು. ಹಾಗೆಯೇ ಒಟ್ಟು ೧೩,೨೮,೩೮೬ ಮಹಿಳಾ ಜನಸಂಖ್ಯೆಯಲ್ಲಿ ಒಟ್ಟು ೮,೦೭,೩೬೭(ಶೇ.೬೭.೩೮) ಮಂದಿ ಮಹಿಳಾ ಸಾಕ್ಷರರಿದ್ದರು. ಇವರಲ್ಲಿ ೫,೮೪,೧೧೬ ಮಂದಿ (ಶೇ. ೬೨.೭೧) ಗ್ರಾಮೀಣ ಪ್ರದೇಶದಲ್ಲೂ, ೨,೨೩,೨೫೧ ಮಂದಿ (ಶೇ.೮೩.೬೭) ನಗರ ಪ್ರದೇಶದಲ್ಲೂ ಇದ್ದರು.

ಜಿಲ್ಲೆಯಲ್ಲಿ ೨೦೧೧ರ ಜನಗಣತಿಯಂತೆ ೧೩,೫೪,೬೪೬ (ಶೇ.೫೦.೩೭) ಮಂದಿ ಒಟ್ಟು ಕೆಲಸಗಾರರಿದ್ದು, ಇವರಲ್ಲಿ ೧೦,೭೮,೪೩೧ (ಶೇ.೭೯.೬೧)ಮಂದಿ ಮುಖ್ಯ ಕೆಲಸಗಾರರು, ೨,೭೬,೨೧೫(ಶೇ.೨೦.೩೯) ಸೀಮಾಂತ (ಮಾರ್ಜಿನಲ್) ಕೆಲಸಗಾರರಿದ್ದರು. ಒಟ್ಟು ಕೆಲಸಗಾರರಲ್ಲಿ ೫,೦೫,೯೧೦ (ಶೇ.೩೭.೩೫) ಮಂದಿ ವ್ಯವಸಾಯಗಾರರು, ೩,೫೨,೨೮೬ (ಶೇ.೨೬.೦೧) ಮಂದಿ ಕೃಷಿ ಕಾರ್ಮಿಕರು, ೫೪,೫೨೩ (ಶೇ.೪.೦೨) ಮಂದಿ ಗೃಹ ಕೈಗಾರಿಕಾ ಕೆಲಸಗಾರರು ಹಾಗೂ ೪,೪೧,೯೨೭ (ಶೇ.೩೨.೬೨) ಮಂದಿ ಇತರೆ ಕೆಲಸಗಾರರಿರುವುದು ಅಂಕಿ ಅಂಶಗಳಿಂದ ಸ್ಪಷ್ಟವಾಗಿದೆ.

ಜಿಲ್ಲೆಯಲ್ಲಿ ೨೦೧೫ರ ಮಾರ್ಚ್ ಅಂತ್ಯಕ್ಕೆ ೨೯ ಬೃಹತ್ ಕೈಗಾರಿಕೆಗಳಿದ್ದು, ರೂ.೧೯೭೬.೫೭ ಕೋಟಿ ಬಂಡವಾಳ ತೊಡಗಿಸಲಾಗಿದೆ. ಇವು ೫,೬೯೨ ಮಂದಿಗೆ ಉದ್ಯೋಗಾವಕಾಶ ಕಲ್ಪಿಸಿವೆ. ಹಾಗೆಯೇ ಒಂಬತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿದ್ದು, ಇವುಗಳಲ್ಲಿ ರೂ.೮೪.೩೩ ಕೋಟಿ ಬಂಡವಾಳ ತೊಡಗಿಸಲಾಗಿದ್ದು, ೧೪೫೯ ಮಂದಿಗೆ ಉದ್ಯೋಗ ಒದಗಿಸಿವೆ. ಇದೇ ಅವಧಿಯಲ್ಲಿ ೨೭,೩೨೨ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿದ್ದು, ಇವುಗಳಲ್ಲಿ ರೂ. ೯೨.೨೧ ಕೋಟಿ ಬಂಡವಾಳ ತೊಡಗಿಸಲಾಗಿದ್ದು, ಇವು ೧,೫೦,೬೫೬ ಮಂದಿಗೆ ಉದ್ಯೋಗ ಒದಗಿಸಿದ್ದವು. ತುಮಕೂರು ಜಿಲ್ಲೆ ಹಲವು ವೈಶಿಷ್ಟ್ಯಗಳಿಗೆ ಹೆಸರಾಗಿದ್ದು, ಕುಣಿಗಲ್ ತಾಲೂಕಿನ ಶ್ರೀ ಎಡಿಯೂರು ಸಿದ್ದಲಿಂಗೇಶ್ವರ ಸ್ವಾಮಿ ದೇವಸ್ಥಾನ, ಕೊರಟಗೆರೆ ತಾಲೂಕಿನ ಗೊರವನಹಳ್ಳಿ ಮಹಾಲಕ್ಷ್ಮೀ ದೇವಸ್ಥಾನ, ತುಮಕೂರು ತಾಲೂಕಿನ ಸಿದ್ದಗಂಗಾ ಕ್ಷೇತ್ರ ಮೊದಲಾದವುಗಳಿವೆ. ಅಲ್ಲದೆ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಉತ್ತರ ದಕ್ಷಿಣವಾಗಿ ಬೆಟ್ಟದ ಸಾಲುಗಳು ಹಬ್ಬಿವೆ. ಅವುಗಳಲ್ಲಿ ಕುಣಿಗಲ್ ತಾಲೂಕಿನ ಹುತ್ರಿ ದುರ್ಗ ಮತ್ತು ಹುಲಿಯೂರು ದುರ್ಗ ಬೆಟ್ಟಗಳು ಮುಖ್ಯವಾದವುಗಳಾಗಿದ್ದು, ಇವುಗಳಿಗೆ ಸಮಾನಾಂತರವಾಗಿ ಉತ್ತರ ಭಾಗದಲ್ಲಿ ಮತ್ತೊಂದು ಬೆಟ್ಟದ (ಗುಡ್ಡದ) ಸಾಲು ಹಬ್ಬಿದ್ದು, ಇವುಗಳಲ್ಲಿ ಪಾವಗಡ ತಾಲೂಕಿನ ಕಾಮನದುರ್ಗ, ನಿಡಗಲ್ ದುರ್ಗಗಳು, ಮಧುಗಿರಿ ತಾಲೂಕಿನ ಮಿಡಿಗೇಶಿ ದುರ್ಗ, ಕೊರಟಗೆರೆ ತಾಲೂಕಿನ ಚನ್ನರಾಯನದುರ್ಗ, ತುಮಕೂರು ತಾಲೂಕಿನ ದೇವರಾಯನದುರ್ಗಗಳಾಗಿವೆ. ಜಿಲ್ಲೆಯಲ್ಲಿ ಒಂದು ವೈದ್ಯಕೀಯ ಕಾಲೇಜು (ಖಾಸಗಿ), ಒಂದು ದಂತವೈದ್ಯ ಕಾಲೇಜು (ಖಾಸಗಿ), ಎಂಟು ಇಂಜಿನೀಯರಿಂಗ್ ಕಾಲೇಜುಗಳು(ಖಾಸಗಿ) ಇವೆ. ಒಂದು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಇದ್ದರೆ, ೧೦ ಖಾಸಗಿ ವಲಯದ ಪಾಲಿಟೆಕ್ನಿಕ್ ಕಾಲೇಜ್‌ಗಳು, ೮೫ ಪದವಿ ಕಾಲೇಜುಗಳು, ೨೦೧ ಪದವಿಪೂರ್ವ ಕಾಲೇಜುಗಳು, ೭೦೨ ಪ್ರೌಢಶಾಲೆಗಳು ಹಾಗೂ ೩,೭೧೭ (೨,೦೪೦ ಕಿರಿಯ ಮತ್ತು ೧,೬೭೭ ಹಿರಿಯ ಪ್ರಾಥಮಿಕ ಶಾಲೆಗಳಿದ್ದವು). ಹೀಗೆ ಇವು ಜಿಲ್ಲೆಯ ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಏಳಿಗೆಗೆ ಹೊಸ ಆಯಾಮವನ್ನೇ ಉಂಟುಮಾಡಿವೆ.

ಜಿಲ್ಲೆಯಲ್ಲಿ ೨೦೧೪ರ ಮಾರ್ಚ್ ಅಂತ್ಯಕ್ಕೆ ೨,೭೦೮ ಗ್ರಾಮಗಳು ಹಾಗೂ ೩,೫೧೪ ಉಪಗ್ರಾಮಗಳು ವಿದ್ಯುತ್ ಸೌಲಭ್ಯ ಪಡೆದಿದ್ದರೆ, ಚಿಕ್ಕನಾಯಕನಹಳ್ಳಿಯ ಎರಡು ಹಾಗೂ ಗುಬ್ಬಿಯ ಎರಡು ಉಪಗ್ರಾಮಗಳು ವಿದ್ಯುತ್ ಸೌಲಭ್ಯದಿಂದ ವಂಚಿತಗೊಂಡಿದ್ದವು. ೨,೦೫,೦೪೯ ನೀರಾವರಿ ಪಂಪುಸೆಟ್ಟುಗಳು ವಿದ್ಯುತ್ ಸೌಲಭ್ಯ ಪಡೆದುಕೊಂಡಿದ್ದವು.

ಬ್ಯಾಂಕಿಂಗ್, ವಾಣಿಜ್ಯ, ವ್ಯಾಪಾರ ರಂಗಗಳಲ್ಲಿಯೂ ಜಿಲ್ಲೆಯು ಪ್ರಗತಿ ಪಥದಲ್ಲಿದೆ. ಜಿಲ್ಲೆಯಲ್ಲಿ ೨೦೧೧-೧೨ರಲ್ಲಿ ೧೬೪ ರಾಷ್ಟ್ರೀಕೃತ ಬ್ಯಾಂಕುಗಳಿದ್ದು, ರೂ. ೩,೮೪,೮೨೦ ಲಕ್ಷ ಠೇವಣಿ ಹೊಂದಿದ್ದು, ರೂ. ೧,೩೩,೩೧೦ ಲಕ್ಷ ಸಾಲ ನೀಡಿದ್ದವು. ೪೬ ಗ್ರಾಮೀಣ ಬ್ಯಾಂಕ್‌ಗಳು ರೂ ೫೧,೦೩೧ ಲಕ್ಷ ಠೇವಣಿ ಹೊಂದಿದ್ದು, ರೂ ೨೪,೮೩೮ ಲಕ್ಷ ಸಾಲ ನೀಡಿದ್ದವು. ೨೨ ಡಿ.ಸಿ.ಸಿ. ಬ್ಯಾಂಕುಗಳು ರೂ ೨೪,೩೦೬ ಲಕ್ಷ ಠೇವಣಿ ಹೊಂದಿದ್ದರೆ, ರೂ ೨೬,೩೩೦ ಲಕ್ಷ ಸಾಲ ಮಂಜೂರು ಮಾಡಿದ್ದವು. ೧೦ ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (KSCARD) ಬ್ಯಾಂಕುಗಳಿದ್ದು ರೂ. ೧೫೨೬ ಲಕ್ಷ ಸಾಲ ನೀಡಿವೆ. ೧೨ ನಗರ ಪ್ರದೇಶದ ಸಹಕಾರಿ ಬ್ಯಾಂಕುಗಳು ರೂ. ೧,೩೨,೬೭೩.೦೬ ಲಕ್ಷ ಠೇವಣಿ ಸಂಗ್ರಹಿಸಿದ್ದು, ರೂ. ೧,೦೫,೪೬೯.೯೩ ಲಕ್ಷ ಸಾಲ ನೀಡಿವೆ. ಪ್ರಾಥಮಿಕ ಭೂ-ಅಭಿವೃದ್ಧಿ ಬ್ಯಾಂಕುಗಳು ರೂ. ೪೯೦೨.೦೪ ಲಕ್ಷ ಸಾಲ ನೀಡಿ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿವೆ. ೨೩೬ ವ್ಯವಸಾಯ ಪತ್ತಿನ ಸಹಕಾರಿ ಸಂಘಗಳು, ೧೩೨ ವ್ಯವಸಾಯೇತರ ಪತ್ತಿನ ಸಹಕಾರಿ ಸಂಘಗಳು, ೧೦ ಮಾರುಕಟ್ಟೆ ಪತ್ತೇತರ ಸಹಕಾರಿ ಸಂಘಗಳು, ೩೨ ಗೃಹ ನಿರ್ಮಾಣ ಸಹಕಾರಿ ಸಂಘಗಳು, ೯೮೨ ಹಾಲು ಉತ್ಪಾದಕರ ಸಹಕಾರಿ ಸಂಘಗಳು ಹೀಗೆ ಒಟ್ಟು ೧೭೫೮ ಸಹಕಾರಿ ಸಂಘಗಳು (ಪತ್ತಿನ+ಪತ್ತೇತರ) ಜಿಲ್ಲೆಯಲ್ಲಿದ್ದು, ೮,೪೯,೮೬೬ ಮಂದಿ ಸದಸ್ಯರಿದ್ದರು. ಸಾಂಪ್ರದಾಯಿಕ ವ್ಯಾಪಾರ ಕೇಂದ್ರಗಳಾದ ಸಂತೆಗಳೊಂದಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು (ಎಪಿಎಂಸಿ) ರೈತರಿಗೆ ಉತ್ತಮ ಬೆಲೆ ದೊರಕಿಸಿ ಕೊಡುವಲ್ಲಿ ನೆರವಾಗುತ್ತಿವೆ.

ಜಿಲ್ಲೆಯಲ್ಲಿ ೨೦೧೨ರ ಮಾರ್ಚ್ ಅಂತ್ಯಕ್ಕೆ ೩೨೫.೯ ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿ, ೬೩೨.೨೧ ಕಿ.ಮೀ ಉದ್ದದ ರಾಜ್ಯ ಹೆದ್ದಾರಿ, ೩೭೩೨.೪೮ ಕಿ.ಮೀ. ಉದ್ದದ ಮುಖ್ಯ ಜಿಲ್ಲಾ ರಸ್ತೆಗಳು, ೪೭.೨ ಕಿ.ಮೀ. ಉದ್ದದ ಇತರೆ ಜಿಲ್ಲಾ ರಸ್ತೆಗಳು, ೧೨೪೯.೩೫ ಕಿ.ಮೀ. ಉದ್ದದ ಮುನಿಸಿಪಾಲಿಟಿ ರಸ್ತೆಗಳು, ೫೮೧ ಕಿ.ಮೀ. ಉದ್ದದ ನೀರಾವರಿ ಇಲಾಖಾ ರಸ್ತೆಗಳು, ೬೮.೪೨ ಕಿ.ಮೀ ಉದ್ದದ ಅರಣ್ಯ ರಸ್ತೆಗಳು, ೧೬ ಭಾರಿ ಸೇತುವೆಗಳು ಹಾಗೂ ೯೭ ಕಿ.ಮೀ.ಉದ್ದ ಬ್ರಾಡ್‌ಗೇಜ್ ರೈಲು ಮಾರ್ಗ, ೫೬೪ ಅಂಚೆ ಕಛೇರಿಗಳು, ೨ ತಂತಿ ಕಛೇರಿಗಳು, ೧೧೨ ದೂರವಾಣಿ ವಿನಿಮಯ ಕೇಂದ್ರಗಳು ಹಾಗೂ ೪೨,೮೪೯ ದೂರವಾಣಿಗಳು ಜಿಲ್ಲೆಯಲ್ಲಿದ್ದು ಉತ್ತಮ ಸಂಪರ್ಕ ಸಾಧನಗಳಾಗಿದ್ದವು.

ಜಿಲ್ಲೆಯ ಆದಾಯಕ್ಕೆ ೨೦೧೨-೧೩ರಲ್ಲಿ ಪ್ರಾಥಮಿಕ ವಲಯವಾದ ಕೃಷಿ ರೂ.೨,೭೪,೬೪೩ ಲಕ್ಷಗಳ ಕೊಡುಗೆ ನೀಡಿದ್ದರೆ, ದ್ವಿತೀಯ ವಲಯವಾದ ಕೈಗಾರಿಕೆ ರೂ. ೨,೨೪,೮೯೪ ಲಕ್ಷಗಳು ಹಾಗೂ ತೃತೀಯ ವಲಯವಾದ ಸೇವಾಕ್ಷೇತ್ರ ರೂ. ೪,೫೫,೮೬೧ ಲಕ್ಷಗಳ ಕೊಡುಗೆ ನೀಡಿವೆ. ಪ್ರಾಥಮಿಕ ಹಾಗೂ ದ್ವಿತೀಯ ವಲಯಗಳಿಗಿಂತ ತೃತೀಯ ವಲಯದಿಂದ ಜಿಲ್ಲಾದಾಯಕ್ಕೆ ಹೆಚ್ಚಿನ ಆದಾಯ ಸಂದಾಯವಾಗಿರುವುದು ಅಂಕಿಅಂಶಗಳಿಂದ ಸ್ಪಷ್ಟವಾಗಿದೆ. ಹಾಗೆಯೇ ತಲಾದಾಯ ಕೂಡ ರೂ. ೩೩,೩೬೫ ಗಳಿಗೆ ಹೆಚ್ಚಳಗೊಂಡಿದ್ದು, ಜಿಲ್ಲೆಯ ಅಭಿವೃದ್ಧಿಯ ಸಂಕೇತವಾಗಿದೆ.

ಜಿಲ್ಲೆಯಲ್ಲಿ ೨೦೧೨ರ ಮಾರ್ಚ್ ಅಂತ್ಯಕ್ಕೆ ೩೮೪೬ ಮಂದಿ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಉದ್ಯೋಗಾಕಾಂಕ್ಷಿಗಳಾಗಿ ನೋಂದಾಯಿಸಿಕೊಂಡಿದ್ದ ಅಂಶ ತಿಳಿದು ಬರುತ್ತದೆ. ಈ ಸಂಖ್ಯೆ ೨೦೧೨-೧೩ರಲ್ಲಿ ೪೧೩೩ ದಾಟಿದೆ. ಉದ್ಯೋಗ ನೀಡುವ ನಿಟ್ಟಿನಲ್ಲಿ ಸರ್ಕಾರ ಸಾಕಷ್ಟು ಯತ್ನಿಸಿದ್ದರೂ, ನಿರುದ್ಯೋಗ ಸ್ಥಿತಿ ಮುಂದುವರಿದಿದೆ.

ಜನರ ಜೀವನ ಮಟ್ಟವನ್ನು ಸುಧಾರಿಸಲು ಬಡತನ ನಿವಾರಣೆಗಾಗಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸ್ವರ್ಣಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ, ಜವಾಹರ್ ಗ್ರಾಮ ಸಮೃದ್ಧಿ ಯೋಜನೆ, ಸಂಪೂರ್ಣ ಗ್ರಾಮೀಣ ರೋಜಗಾರ್ ಯೋಜನೆ, ಉದ್ಯೋಗ ಭರವಸೆ ಯೋಜನೆ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಇಂದಿರಾ ಆವಾಸ್ ಯೋಜನೆ, ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ, ಆಶ್ರಯ (ಗ್ರಾಮೀಣ) ಯೋಜನೆ, ಅಂಬೇಡ್ಕರ್ (ಗ್ರಾಮೀಣ) ಯೋಜನೆ, ಸ್ವಚ್ಛ ಗ್ರಾಮ ಯೋಜನೆ, ನಿರ್ಮಲ ಗ್ರಾಮ ಯೋಜನೆ, ಸುವರ್ಣ ಗ್ರಾಮ ಯೋಜನೆ, ಅಕ್ಷರದಾಸೋಹ, ಸ್ತ್ರೀ-ಶಕ್ತಿಯೋಜನೆ ಮುಂತಾದ ಹತ್ತು ಹಲವು ಯೋಜಿತ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ತತ್ಪರಿಣಾಮವಾಗಿ ಜಿಲ್ಲೆಯು ಇಂದು ಅಭಿವೃದ್ಧಿಶೀಲ ಜಿಲ್ಲೆಯಾಗಿ ರೂಪುಗೊಳ್ಳುತ್ತಿದೆ.

## ನಗರೀಕರಣ

ತುಮಕೂರು ಜಿಲ್ಲಾ ಕೇಂದ್ರವಾಗಿದ್ದು, ರಾಜಧಾನಿ ಬೆಂಗಳೂರಿನಿಂದ ಸುಮಾರು ೬೬ ಕಿ.ಮೀ ದೂರದಲ್ಲಿದ್ದು, ರಾಷ್ಟ್ರೀಯ ಹೆದ್ದಾರಿ ನಾಲ್ಕರಲ್ಲಿದೆ. ಜಿಲ್ಲೆಯು ೧೦ ತಾಲ್ಲೂಕುಗಳಿಂದ ಕೂಡಿದ್ದು, ವಿಸ್ತಾರವಾದ ಜಿಲ್ಲೆ ಎನಿಸಿದ್ದರೂ, ಇಲ್ಲಿ ಪಟ್ಟಣಗಳ ಬೆಳವಣಿಗೆ ಕಡಿಮೆ ಎಂದೇ ಹೇಳಬಹುದು. ಜಿಲ್ಲೆಯಲ್ಲಿ ೧೯೦೧ರ ಜನಗಣತಿಯಂತೆ ೧೮ ಪಟ್ಟಣಗಳನ್ನು ಹೊಂದಿದ್ದರೂ, ಇವುಗಳ ಜನಸಂಖ್ಯೆ ಕೇವಲ ೫೮,೬೬೮ ಆಗಿತ್ತು. ಪಟ್ಟಣಗಳ ವರ್ಗೀಕರಣದಲ್ಲಿ ಆದ ಬದಲಾವಣೆಯಿಂದಾಗಿ ೧೯೧೧ರಲ್ಲಿ ಪಟ್ಟಣಗಳ ಸಂಖ್ಯೆ ೧೮ ರಿಂದ ೧೦ಕ್ಕೆ ಕಡಿಮೆ ಆಗಿರುವುದರ ಜೊತೆಗೆ ಜನಸಂಖ್ಯೆಯಲ್ಲಿಯೂ ೩೬,೯೮೯ ಕುಸಿತವಾಗಿರುವುದು ಅಂಕಿಅಂಶಗಳಿಂದ ವೇದ್ಯವಾಗುತ್ತದೆ. ಮತ್ತೆ ೧೯೨೧, ೧೯೩೧ ಹಾಗೂ ೧೯೪೧ರವರೆಗೆ ಪಟ್ಟಣಗಳ ಸಂಖ್ಯೆಯಲ್ಲಿ ಬದಲಾವಣೆಯಿಲ್ಲದಿದ್ದರೂ, ಜನಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದಿದೆ. ಈ ಅವಧಿಯಲ್ಲಿ ಕ್ರಮವಾಗಿ ೫೧,೫೨೮, ೬೧,೫೮೬ ಹಾಗೂ ೬೨,೧೪೨ ಜನಸಂಖ್ಯೆ ಹೆಚ್ಚಳಗೊಂಡಿದೆ. ೧೯೫೧ ಮತ್ತು ೧೯೬೧ರಲ್ಲಿ ಪಟ್ಟಣಗಳ ಸಂಖ್ಯೆ ೧೧ಕ್ಕೆ ಏರಿಕೆ ಕಂಡುಬಂದಿದ್ದು, ಕ್ರಮವಾಗಿ ೧,೦೫,೭೬೨ ಮತ್ತು ೧,೩೮,೯೮೯ ಆಗಿ ಜನಸಂಖ್ಯೆಯಲ್ಲಿ ಏರಿಕೆ ಕಂಡುಬಂದಿದೆ. ಮತ್ತೆ ೧೯೭೧, ೧೯೮೧, ೧೯೯೧ರಲ್ಲಿ ಪಟ್ಟಣಗಳ ಸಂಖ್ಯೆ ೧೨ಕ್ಕೆ ಹೆಚ್ಚಳಗೊಂಡಿದ್ದು, ಕ್ರಮವಾಗಿ ಜನಸಂಖ್ಯೆ ೧,೯೦,೬೦೭, ೨,೭೨,೨೮೪ ಹಾಗೂ ೩,೮೨,೧೬೩ ಹೆಚ್ಚಳಗೊಂಡಿರುವುದು ಗಮನಾರ್ಹವಾಗಿದೆ. ಮತ್ತೆ ೨೦೦೧ರ ಜನಗಣತಿಯಲ್ಲಿ ಪಟ್ಟಣಗಳ ಸಂಖ್ಯೆ ೧೧ಕ್ಕೆ ಕುಸಿದಿದ್ದರೂ, ಜನಸಂಖ್ಯೆ ೫,೦೭,೨೦೨ಕ್ಕೆ ಹೆಚ್ಚಳಗೊಂಡಿರುವುದನ್ನು ಗಮನಿಸಿದರೆ ಜನರು ಪಟ್ಟಣದ ಜೀವನಕ್ಕೆ ಮಾರುಹೋಗುತ್ತಿರುವುದು ಸ್ಪಷ್ಟವಾಗಿದೆ. ಹಾಗೆಯೇ ೨೦೧೧ರಲ್ಲಿ ಪಟ್ಟಣಗಳ ಸಂಖ್ಯೆ ೧೦ಕ್ಕೆ ಕುಸಿದಿದ್ದರೂ ಜನಸಂಖ್ಯೆ ೫,೯೯,೦೭೮ ಹೆಚ್ಚಳಗೊಂಡಿದೆ.

ಜಿಲ್ಲೆಯಲ್ಲಿ ೧೯೦೧ ರಿಂದ ೧೯೭೧ರವರೆಗೂ ವರ್ಗ-1ಕ್ಕೆ ಸೇರಿದ ಯಾವುದೇ ಪಟ್ಟಣಗಳಿರಲಿಲ್ಲ. ೧೯೮೧ರಲ್ಲಿ ತುಮಕೂರು ಈ ವರ್ಗಕ್ಕೆ ಬಡ್ತಿ ಹೊಂದಿತು. ೧೯೮೧, ೧೯೯೧, ೨೦೦೧ ಹಾಗೂ ೨೦೧೧ರ ಜನಗಣತಿಯಂತೆ ಈ ವರ್ಗಕ್ಕೆ ಸೇರಿದ ತುಮಕೂರು ಏಕೈಕ ನಗರವಾಗಿದ್ದು, ಜನಸಂಖ್ಯೆ ಕ್ರಮವಾಗಿ ೧,೦೮,೬೭೦, ೧,೩೮,೯೦೩, ೨,೪೮,೯೨೯ ಹಾಗೂ ೩,೦೨,೧೪೩ ಆಗಿತ್ತು. ಅದಕ್ಕೂ ಮೊದಲು ತುಮಕೂರು ೧೯೭೧ರಲ್ಲಿ ವರ್ಗ-IIಕ್ಕೆ ಬಡ್ತಿ ಪಡೆದು ೭೦,೪೭೬ ಜನಸಂಖ್ಯೆ ಹೊಂದಿತ್ತು. ೧೯೦೧, ೧೯೨೧ ಹಾಗೂ ೧೯೩೧ರಲ್ಲಿ ವರ್ಗ-IVಕ್ಕೆ ಸೇರಿ ಕ್ರಮವಾಗಿ ಜನಸಂಖ್ಯೆ ೧೧,೮೮೮, ೧೪,೨೪೬ ಹಾಗೂ ೧೮,೧೯೬ ಹೊಂದಿತ್ತು. ಆದರೆ ೧೯೧೧ರಲ್ಲಿ ೬೦೫೯ ಜನಸಂಖ್ಯೆ ಪಡೆದು ವರ್ಗ-Vಕ್ಕೆ ಕುಸಿಯಿತು. ೧೯೪೧, ೧೯೫೧ ಹಾಗೂ ೧೯೬೧ ರವರೆಗೂ ವರ್ಗ-IIIಕ್ಕೆ ಸೇರಿ, ಜನಸಂಖ್ಯೆ ಕ್ರಮವಾಗಿ ೨೧,೮೯೩, ೩೫,೯೯೯ ಹಾಗೂ ೪೭,೨೭೭ ಆಗಿತ್ತು.

ತಿಪಟೂರು ೧೯೦೧, ೧೯೧೧ ಹಾಗೂ ೧೯೨೧ರಲ್ಲಿ ವರ್ಗ-VIಕ್ಕೆ ಸೇರಿ ಜನಸಂಖ್ಯೆ ಕ್ರಮವಾಗಿ ೩,೫೬೦, ೨,೫೩೧ ಹಾಗೂ ೪,೩೧೧ ಆಗಿತ್ತು. ೧೯೩೧ ಹಾಗೂ ೧೯೪೧ರಲ್ಲಿ ಇದು ವರ್ಗ-Vಕ್ಕೆ ಸೇರಿದ್ದು ಜನಸಂಖ್ಯೆ ಕ್ರಮವಾಗಿ ೫,೧೬೦ ಹಾಗೂ ೭,೫೧೩ ಆಗಿತ್ತು. ೧೯೫೧ ಹಾಗೂ ೧೯೬೧ರಲ್ಲಿ ವರ್ಗ-IVಕ್ಕೆ ಸೇರಿದ್ದು, ಜನಸಂಖ್ಯೆ ಕ್ರಮವಾಗಿ ೧೧,೮೦೩ ಹಾಗೂ ೧೫,೫೫೮ ಆಗಿತ್ತು. ೧೯೭೧ರಿಂದ ೧೯೯೧ರವರೆಗೂ ವರ್ಗ-IIIಕ್ಕೆ ಸೇರಿದ್ದು, ಜನಸಂಖ್ಯೆ ಕ್ರಮವಾಗಿ ೨೨೫೯೨, ೩೦೪೬೮ ಹಾಗೂ ೩೬೦೫೩ ಆಗಿತ್ತು. ಈ ಪಟ್ಟಣ ೨೦೦೧ ಹಾಗೂ ೨೦೧೧ರಲ್ಲಿ ಕ್ರಮವಾಗಿ ೫೩,೧೦೪ ಹಾಗೂ ೫೯,೫೪೩ ಜನಸಂಖ್ಯೆ ಹೊಂದಿ ವರ್ಗ-IIಕ್ಕೆ ಬಡ್ತಿ ಹೊಂದಿತ್ತು.

ಶಿರಾ ಪಟ್ಟಣವು ೧೯೦೧ರಲ್ಲಿ ವರ್ಗ-VIಕ್ಕೆ ಸೇರಿ ೪೦೫೯ ಜನಸಂಖ್ಯೆಯನ್ನು ಹೊಂದಿತ್ತು. ೧೯೧೧ರಿಂದ ೧೯೪೧ರವರೆಗೆ ವರ್ಗ-Vಕ್ಕೆ ಸೇರಿ ಜನಸಂಖ್ಯೆ ಕ್ರಮವಾಗಿ ೫೫೭೩, ೫೫೯೬, ೬೮೯೪ ಹಾಗೂ ೬೯೭೭ ಆಗಿತ್ತು. ೧೯೫೧ರಿಂದ ೧೯೭೧ರ ವರೆಗೆ ವರ್ಗ-IVಕ್ಕೆ ಬಡ್ತಿ ಪಡೆದಿದ್ದು, ಜನಸಂಖ್ಯೆ ಕ್ರಮವಾಗಿ ೧೨,೧೮೨, ೧೫,೪೦೮ ಹಾಗೂ ೧೮೨೯೯ ಆಗಿತ್ತು. ೧೯೮೧ ಹಾಗೂ ೧೯೯೧ರಲ್ಲಿ ವರ್ಗ-IIIಕ್ಕೆ ಸೇರಿ, ಜನಸಂಖ್ಯೆ ಕ್ರಮವಾಗಿ ೨೭,೬೬೫ ಹಾಗೂ ೩೩,೩೯೩ ಆಗಿತ್ತು. ಆದರೆ ೨೦೦೧ ಹಾಗೂ ೨೦೧೧ರಲ್ಲಿ ಕ್ರಮವಾಗಿ ೫೦,೦೮೮ ಹಾಗೂ ೫೭,೫೫೪ ಜನಸಂಖ್ಯೆಯನ್ನು ಪಡೆದು ವರ್ಗ-IIಕ್ಕೆ ಬಡ್ತಿ ಪಡೆದಿತ್ತು.

ಕುಣಿಗಲ್ ಪಟ್ಟಣವು ೧೯೦೧ ರಿಂದ ೧೯೨೧ರವರೆಗೆ ಕ್ರಮವಾಗಿ ೧೮೦೨, ೧೪೦೫ ಹಾಗೂ ೩೦೪೪ ಜನಸಂಖ್ಯೆಯನ್ನು ಹೊಂದಿ ವರ್ಗ-VIರಲ್ಲಿತ್ತು. ೧೯೩೧ರಿಂದ ೧೯೫೧ರವರೆಗೆ ಕ್ರಮವಾಗಿ ೫,೩೪೧, ೫,೮೪೬ ಹಾಗೂ ೮,೯೦೮ ಜನಸಂಖ್ಯೆ ಪಡೆದು ವರ್ಗ-Vಕ್ಕೆ ಸೇರಿದ ಪಟ್ಟಣವಾಗಿತ್ತು. ೧೯೬೧ ರಿಂದ ೧೯೮೧ರ ವರೆಗೆ ಕ್ರಮವಾಗಿ ೧೦,೫೬೬, ೧೩,೪೩೭ ಹಾಗೂ ೧೮,೦೭೬ ಜನಸಂಖ್ಯೆ ಪಡೆದು ವರ್ಗ IVಕ್ಕೆ ಸೇರಿತ್ತು. ೧೯೯೧, ೨೦೦೧ ಹಾಗೂ ೨೦೧೧ರಲ್ಲಿ ಕ್ರಮವಾಗಿ ಜನಸಂಖ್ಯೆ ೨೩,೨೩೨, ೩೦,೩೪೩ ಹಾಗೂ ೩೪,೧೫೫ ಜನಸಂಖ್ಯೆ ಹೊಂದಿ ವರ್ಗ-III ರಲ್ಲಿತ್ತು.

ಮಧುಗಿರಿ ಪಟ್ಟಣವು ೧೯೦೧, ೧೯೧೧ ಹಾಗೂ ೧೯೪೧ರಲ್ಲಿ ಕ್ರಮವಾಗಿ ೪೦೬೦, ೪೫೪೫ ಹಾಗೂ ೧೪೬೦ ಜನಸಂಖ್ಯೆಯನ್ನು ಹೊಂದಿ ವರ್ಗ–VIರ ಪಟ್ಟಣದ ಗುಂಪಿಗೆ ಸೇರಿತ್ತು. ತದನಂತರ ೧೯೨೧, ೧೯೩೧ ಹಾಗೂ ೧೯೫೧ರಲ್ಲಿ ಕ್ರಮವಾಗಿ ೫೧೪೩, ೫೮೬೫ ಹಾಗೂ ೫೪೧೬ ಜನಸಂಖ್ಯೆ ಹೊಂದಿ ವರ್ಗ–Vಕ್ಕೂ, ೧೯೬೧ರಿಂದ ೧೯೮೧ರಲ್ಲಿ ಕ್ರಮವಾಗಿ ೧೧೨೭೫, ೧೪೧೧೭ ಹಾಗೂ ೧೮೦೮೨ ಜನಸಂಖ್ಯೆ ಹೊಂದಿ ವರ್ಗ–IVಕ್ಕೂ, ೧೯೯೧, ೨೦೦೧ ಹಾಗೂ ೨೦೧೧ರಲ್ಲಿ ಕ್ರಮವಾಗಿ ೨೧,೮೨೬, ೨೬,೩೦೪ ಹಾಗೂ ೨೯,೧೫೯ ಜನಸಂಖ್ಯೆ ಹೊಂದಿ ವರ್ಗ–IIIಕ್ಕೆ ಸೇರಿತ್ತು.

ಪಾವಗಡ ಪಟ್ಟಣವು ೧೯೦೧ ರಿಂದ ೧೯೫೧ ರವರೆಗೆ ಕ್ರಮವಾಗಿ ೨೮೪೦, ೨೫೯೪, ೨೫೨೯, ೨೭೫೦, ೩೫೩೪ ಹಾಗೂ ೪೪೮೦ ಜನಸಂಖ್ಯೆಯನ್ನು ಹೊಂದಿ ವರ್ಗ–VIರಲ್ಲಿತ್ತು. ೧೯೬೧ ಹಾಗೂ ೧೯೭೧ರಲ್ಲಿ ಕ್ರಮವಾಗಿ ೫೯೧೩ ಹಾಗೂ ೯೦೦೪ ಜನಸಂಖ್ಯೆ ಹೊಂದಿ ವರ್ಗ–V ಕ್ಕೂ, ೧೯೮೧ ಹಾಗೂ ೧೯೯೧ರಲ್ಲಿ ಕ್ರಮವಾಗಿ ೧೪,೪೩೫ ಹಾಗೂ ೧೯,೩೦೬ ಜನಸಂಖ್ಯೆ ಹೊಂದಿ ವರ್ಗ–IVಕ್ಕೂ, ೨೦೦೧ ಹಾಗೂ ೨೦೧೧ರಲ್ಲಿ ಕ್ರಮವಾಗಿ ೨೮,೦೬೮ ಹಾಗೂ ೨೮,೪೮೬ ಜನಸಂಖ್ಯೆ ಹೊಂದಿ ವರ್ಗ–III ಕ್ಕೂ ಸೇರಿತ್ತು. ಚಿಕ್ಕನಾಯಕನಹಳ್ಳಿ ಪಟ್ಟಣವು ೧೯೦೧ರಿಂದ ೧೯೩೧ ಹಾಗೂ ೧೯೫೧ರಲ್ಲಿ ಕ್ರಮವಾಗಿ ೬೧೧೩, ೫೧೮೮, ೬೪೩೨, ೬೬೧೨ ಹಾಗೂ ೮೩೮೮ ಜನಸಂಖ್ಯೆಯನ್ನು ಹೊಂದಿ ವರ್ಗ–Vಕ್ಕೆ ಸೇರಿದ್ದರೆ, ೧೯೪೧ರಲ್ಲಿ ೩೩೧೩ ಜನಸಂಖ್ಯೆ ಹೊಂದಿ ವರ್ಗ–VIಕ್ಕೆ ಕುಸಿದಿತ್ತು. ೧೯೬೧ರಿಂದ ೧೯೯೧ರವರೆಗೆ ಕ್ರಮವಾಗಿ ೧೦,೩೭೫, ೧೩,೦೬೧, ೧೫,೫೯೬ ಹಾಗೂ ೧೭,೬೬೩ ಜನಸಂಖ್ಯೆ ಹೊಂದಿ ವರ್ಗ–IVಕ್ಕೆ, ೨೦೦೧ ಹಾಗೂ ೨೦೧೧ರಲ್ಲಿ ಕ್ರಮವಾಗಿ ೨೨,೩೮೯, ೩೭,೫೧೦ ಜನಸಂಖ್ಯೆ ಹೊಂದಿ ವರ್ಗ–III ಕ್ಕೂ ಸೇರಿತ್ತು.

ಗುಬ್ಬಿ ಪಟ್ಟಣವು ೧೯೦೧ ಹಾಗೂ ೧೯೨೧ರಿಂದ ೧೯೭೧ರವರೆಗೂ ಕ್ರಮವಾಗಿ ೫೫೯೩, ೫೨೬೩, ೫೬೬೩, ೬೧೨೯, ೭೧೪೫, ೮೫೪೩ ಹಾಗೂ ೯೫೩೭ ಜನಸಂಖ್ಯೆ ಹೊಂದಿ ವರ್ಗ–Vಕ್ಕೆ ಸೇರಿತ್ತು. ಆದರೆ ೧೯೧೧ರಲ್ಲಿ ಕೇವಲ ೩೪೬೪ ಜನಸಂಖ್ಯೆ ಹೊಂದಿ ವರ್ಗ–VIಕ್ಕೆ ಸೇರಿತ್ತು. ೧೯೮೧, ೧೯೯೧ ೨೦೦೧, ಹಾಗೂ ೨೦೧೧ರಲ್ಲಿ ಕ್ರಮವಾಗಿ ೧೧೬೬೭, ೧೩,೮೧೪, ೧೬,೮೦೫ ಹಾಗೂ ೧೮,೪೪೬ ಜನಸಂಖ್ಯೆ ಹೊಂದಿ ವರ್ಗ–IV ಕ್ಕೆ ಸೇರಿತ್ತು.

ಕೊರಟಗೆರೆ ಪಟ್ಟಣವು ೧೯೦೧ರಿಂದ ೧೯೬೧ರ ವರೆಗೂ ವರ್ಗ–VIಕ್ಕೆ ಸೇರಿದ ಪಟ್ಟಣವಾಗಿದ್ದು, ಕ್ರಮವಾಗಿ ೨೮೧೧, ೨೯೬೫, ೩೦೨೮, ೨೯೬೯, ೨೯೭೯, ೩೬೯೫ ಹಾಗೂ ೪೩೦೧ ಜನಸಂಖ್ಯೆ ಹೊಂದಿತ್ತು. ೧೯೭೧ ಹಾಗೂ ೧೯೮೧ರಲ್ಲಿ ಇದು ವರ್ಗ–Vಕ್ಕೆ ಸೇರಿದ್ದು, ಕ್ರಮವಾಗಿ ೫೯೭೪ ಹಾಗೂ ೮೦೮೫ ಜನಸಂಖ್ಯೆ ಹೆಚ್ಚಳಗೊಂಡಿತು. ೧೯೯೧, ೨೦೦೧ ಹಾಗೂ ೨೦೧೧ರಲ್ಲಿ ವರ್ಗ–IVಕ್ಕೆ ಉನ್ನತೀಕರಣಗೊಂಡಿದ್ದು, ಕ್ರಮವಾಗಿ ೧೧,೫೩೧, ೧೩,೬೫೫ ಹಾಗೂ ೧೫,೨೬೫ ಜನಸಂಖ್ಯೆ ಹೊಂದಿತ್ತು.

ತುರುವೇಕೆರೆ ಪಟ್ಟಣವು ೧೯೦೧ ರಿಂದ ೧೯೬೧ರ ವರೆಗೆ ವರ್ಗ–VIರ ಪಟ್ಟಣವಾಗಿದ್ದು, ಕ್ರಮವಾಗಿ ೨೩೩೩, ೨೬೮೫, ೧೯೩೬, ೨೧೩೬, ೨೬೭೮, ೩೭೩೨ ಹಾಗೂ ೪೯೮೩ ಜನಸಂಖ್ಯೆ ಹೊಂದಿತ್ತು. ೧೯೭೧ ಹಾಗೂ ೧೯೮೧ರಲ್ಲಿ ಈ ಪಟ್ಟಣ ವರ್ಗ–Vಕ್ಕೆ ಸೇರಿದ್ದು, ಕ್ರಮವಾಗಿ ೬೫೩೬ ಹಾಗೂ ೮೯೮೮ ಜನಸಂಖ್ಯೆ ಆಗಿತ್ತು. ೧೯೯೧, ೨೦೦೧ ಹಾಗೂ ೨೦೧೧ರಲ್ಲಿ ಇದು ವರ್ಗ– IVಕ್ಕೆ ಸೇರಿದ್ದು, ಕ್ರಮವಾಗಿ ೧೧,೧೦೯, ೧೭,೫೧೭ ಹಾಗೂ ೧೬,೮೧೭ ಜನಸಂಖ್ಯೆ ಹೆಚ್ಚಳಗೊಂಡಿರುತ್ತದೆ.

ವೈ.ಎನ್.ಹೊಸಕೋಟೆ ಪಟ್ಟಣವು ೧೯೫೧ ಹಾಗೂ ೧೯೬೧ರಲ್ಲಿ ವರ್ಗ–VIಕ್ಕೆ ಸೇರಿದ ಪಟ್ಟಣವಾಗಿದ್ದು, ಕ್ರಮವಾಗಿ ೪೦೧೪ ಹಾಗೂ ೪೭೯೦ ಜನಸಂಖ್ಯೆ ಹೊಂದಿದ್ದರೆ, ೧೯೭೧ರಿಂದ ೧೯೯೧ರವರೆಗೆ ವರ್ಗ–Vಕ್ಕೆ ಸೇರಿದ್ದು, ಕ್ರಮವಾಗಿ ೬೧೭೭, ೭೫೦೮ ಹಾಗೂ ೯೪೮೬ ಜನಸಂಖ್ಯೆ ಹೊಂದಿತ್ತು. ಆದರೆ ೨೦೦೧ ಹಾಗೂ ೨೦೧೧ರಲ್ಲಿ ಇದು ನಗರವಾಗಿ ಮಾನ್ಯತೆ ಪಡೆದಿರುವುದಿಲ್ಲ. ಆದಿತ್ಯಪಟ್ಟಣವು ೧೯೭೧ ರಿಂದ ೨೦೦೧ ರವರೆಗೂ ವರ್ಗ– VIಕ್ಕೆ ಸೇರಿದ್ದು ಕ್ರಮವಾಗಿ ೧೫೭೭, ೩೦೪೪, ೪೮೭೧ ಹಾಗೂ ೪೭೩೬ ಜನಸಂಖ್ಯೆ ಹೊಂದಿತ್ತು.

ಕೋಷ್ಟಕ ೮.೧ರಲ್ಲಿ ೧೯೦೧ರಿಂದ ೨೦೧೧ರ ವರೆಗೆ ಜಿಲ್ಲೆಯಲ್ಲಿದ್ದ ಪಟ್ಟಣಗಳ ಜನಸಂಖ್ಯೆಯನ್ನು ಹಾಗೂ ಕೋಷ್ಟಕ ೮.೨ರಲ್ಲಿ ೨೦೦೧ರ ಜನಗಣತಿಯಂತೆ ನಗರ/ಪಟ್ಟಣಗಳಲ್ಲಿದ್ದ ಕೆಲಸಗಾರರ ವಿವರಗಳನ್ನು ನೀಡಲಾಗಿದೆ.

**ಕೋಷ್ಟಕ : ೮.೧ ತುಮಕೂರು ಜಿಲ್ಲೆಯಲ್ಲಿ ೧೯೦೧ ರಿಂದ ೨೦೧೧ರ ವರೆಗಿನ ಜಿಲ್ಲೆಯ ಪಟ್ಟಣಗಳು ಹಾಗೂ ಅವುಗಳ ಜನಸಂಖ್ಯೆಯ ವಿವರ**

| ಪಟ್ಟಣಗಳು | ೧೯೦೧ | ೧೯೧೧ | ೧೯೨೧ | ೧೯೩೧ | ೧೯೪೧ | ೧೯೫೧ | ೧೯೬೧ | ೧೯೭೧ | ೧೯೮೧ | ೧೯೯೧ | ೨೦೦೧ | ೨೦೧೧ |
|---|---|---|---|---|---|---|---|---|---|---|---|---|
| ೧.ತುಮಕೂರು (U/A) | ೧೧,೮೮೮ | ೬,೦೩೯ | ೧೪,೨೪೬ | ೧೮,೧೯೬ | ೨೧,೮೯೩ | ೩೫,೯೯೯ | ೪೭,೨೭೭ | ೭೦೪,೭೬ | ೧,೦೮,೬೭೦ | ೧,೭೯,೮೭೭ | – | – |
| ತುಮಕೂರು (CMC) | ೧೧,೮೮೮ | ೬,೦೩೯ | ೧೪,೨೪೬ | ೧೮,೧೯೬ | ೨೧,೮೯೩ | ೩೫,೯೯೯ | ೪೭,೨೭೭ | ೭೦,೪೭೬ | ೧,೦೮,೬೭೦ | ೧,೩೮,೯೦೩ | ೨೪೮೯೨೯ | ೩೦೨೧೪೩ |
| ii ಕ್ಯಾತ್ಸಂದ್ರ (OG) | – | – | – | – | – | – | – | – | – | ೧೦,೨೯೪ | – | – |
| iii ಮರಳೂರು (OG) | – | – | – | – | – | – | – | – | – | ೮,೪೧೭ | – | – |
| iv ದೇವರಾಯಪಟ್ಟಣ (OG) | – | – | – | – | – | – | – | – | – | ೬,೯೫೦ | – | – |
| v ಶೆಟ್ಟಿಹಳ್ಳಿ (OG) | – | – | – | – | – | – | – | – | – | ೬,೫೨೯ | – | – |
| vi ಬಟವಾಡೆ(OG) | – | – | – | – | – | – | – | – | – | ೩,೫೫೭ | – | – |
| (ii) ಬಡ್ಡಿಹಳ್ಳಿ (OG) | – | – | – | – | – | – | – | – | – | ೧,೮೫೩ | – | – |
| viii ಉಪ್ಪಾರಹಳ್ಳಿ (OG) | – | – | – | – | – | – | – | – | – | ೧,೫೧೯ | – | – |
| ix ತುಮಕೂರು (OG) | – | – | – | – | – | – | – | – | – | ೮೧೬ | – | – |
| x ವೀರಸಾಗರ (OG) | – | – | – | – | – | – | – | – | – | ೬೧೪ | – | – |
| xi ಚನ್ನನದಿಣ್ಣೆ(OG) | – | – | – | – | – | – | – | – | – | ೪೨೫ | – | – |
| ೨ ತಿಪಟೂರು (CMC) | ೩,೫೬೦ | ೨,೫೩೧ | ೪,೩೧೧ | ೫,೧೬೦ | ೭,೫೧೩ | ೧೧,೮೦೩ | ೧೫,೫೫೮ | ೨೨,೫೯೨ | ೩೦,೪೬೮ | ೩೬,೦೫೩ | ೫೩,೧೦೪ | ೫೯,೫೪೩ |
| ೩ ಶಿರಾ (CMC) | ೪,೦೫೯ | ೫,೫೭೩ | ೫,೫೯೬ | ೬,೮೯೪ | ೬,೭೯೭ | ೧೨,೧೮೨ | ೧೫,೪೦೮ | ೧೮,೨೯೯ | ೨೭,೬೬೫ | ೩೩,೩೯೩ | ೫೦,೦೮೮ | ೫೭,೫೫೪ |

**ಕೋಷ್ಟಕ : ೮.೧** (ಮುಂದು.....)

| ಪಟ್ಟಣಗಳು | ೧೯೦೧ | ೧೯೧೧ | ೧೯೨೧ | ೧೯೩೧ | ೧೯೪೧ | ೧೯೫೧ | ೧೯೬೧ | ೧೯೭೧ | ೧೯೮೧ | ೧೯೯೧ | ೨೦೦೧ | ೨೦೧೧ |
|---|---|---|---|---|---|---|---|---|---|---|---|---|
| ೪. ಕುಣಿಗಲ್ (TMC) | ೧,೮೦೨ | ೧,೪೦೫ | ೩,೦೪೪ | ೫,೩೪೧ | ೫,೮೪೬ | ೮,೯೦೮ | ೧೦,೫೫೬ | ೧೩,೪೩೭ | ೧೮,೦೭೬ | ೨೩,೨೩೨ | ೩೦,೩೪೩ | ೩೪,೧೫೫ |
| ೫ ಮಧುಗಿರಿ (TMC) | ೪,೦೬೦ | ೪,೫೪೫ | ೫,೧೪೩ | ೫,೮೬೫ | ೧,೪೬೦ | ೫,೪೧೬ | ೧೧,೨೭೫ | ೧೪,೧೧೭ | ೧೮,೦೮೨ | ೨೧,೮೨೬ | ೨೬,೩೦೪ | ೨೯,೧೫೯ |
| ೬ ಪಾವಗಡ (TMC) | ೨,೮೪೦ | ೨,೫೯೪ | ೨,೫೨೯ | ೨,೭೫೦ | ೩,೫೩೪ | ೪,೪೮೦ | ೫,೯೧೩ | ೯,೦೦೪ | ೧೪,೪೩೫ | ೧೯,೩೦೫ | ೨೮,೦೬೮ | ೨೮,೪೮೬ |
| ೭ ಚಿಕ್ಕನಾಯಕನಹಳ್ಳಿ (TMC) | ೬,೧೧೩ | ೫,೧೮೮ | ೬,೪೩೨ | ೬,೬೧೨ | ೩,೩೧೩ | ೮,೩೮೮ | ೧೦,೩೭೫ | ೧೩,೦೬೧ | ೧೫,೫೯೬ | ೧೭,೬೬೩ | ೨೨,೩೮೯ | ೨೩,೨೦೬ |
| ೮ ಹುಲಿಯೂರು (CT) | | | | | | | | | | | | ೧೪,೩೦೪ |
| ೯ ಗುಬ್ಬಿ (TP) | ೫,೫೯೩ | ೩,೪೬೪ | ೫,೨೬೩ | ೫,೬೬೩ | ೬,೧೨೯ | ೭,೧೪೫ | ೮,೫೪೩ | ೯,೫೩೭ | ೧೧,೬೬೭ | ೧೩,೮೧೪ | ೧೬,೮೦೫ | ೧೮,೪೪೬ |
| ೧೦ ಕೊರಟಗೆರೆ (TP) | ೨,೮೧೧ | ೨,೯೬೫ | ೩,೦೨೮ | ೨,೯೬೯ | ೨,೯೭೯ | ೩,೬೯೫ | ೪,೩೦೧ | ೫,೭೯೪ | ೮,೦೮೫ | ೧೧,೫೩೧ | ೧೩,೬೫೫ | ೧೫,೨೬೫ |
| ೧೧ ತುರುವೇಕೆರೆ (TP) | ೨,೩೩೩ | ೨,೬೮೫ | ೧,೯೩೬ | ೨,೧೩೬ | ೨,೬೭೮ | ೩,೭೩೨ | ೪,೯೮೩ | ೬,೫೩೬ | ೮,೯೮೮ | ೧೧,೧೦೯ | ೧೭,೫೧೭ | ೧೪೧೯೪ |
| ೧೨ ವೈ.ಎನ್.ಹೊಸಕೋಟೆ (MP) | – | – | – | – | – | ೪,೦೧೪ | ೪,೭೯೦ | ೬,೧೭೭ | ೭,೫೦೮ | ೯,೪೮೬ | – | – |
| ೧೩ ಆದಿತ್ಯಪಟ್ಟಣ (C.T) | – | – | – | – | – | – | – | ೧,೫೭೭ | ೩,೦೪೪ | ೪,೮೭೧ | – | – |

**ಆಧಾರ: ಭಾರತೀಯ ಜನಗಣತಿ .**

ಸೂಚನೆ:O.G. Out growth, C.T.: Census Town **ಸೂಚನೆ: ೨೦೧೧ರ ಜನಗಣತಿಯಂತೆ ನಗರಗಳ ಸ್ಥಿತಿಗತಿ**

## ಕೋಷ್ಟಕ : ೮.೨ ತುಮಕೂರು ಜಿಲ್ಲೆಯಲ್ಲಿ ೨೦೧೧ರ ಜನಗಣತಿಯಂತೆ ನಗರ/ಪಟ್ಟಣಗಳಲ್ಲಿದ್ದ ಒಟ್ಟು ಜನಸಂಖ್ಯೆಯಲ್ಲಿನ ಕೆಲಸಗಾರರ ಸಂಖ್ಯೆ

| ಕ್ರ.ಸಂ | ಜನಸಂಖ್ಯೆ | ಚಿಕ್ಕನಾಯಕನಹಳ್ಳಿ (TMC) | | | ಶಿರಾ (CMC) | | | ಪಾವಗಡ (TMC) | | | ಮಧುಗಿರಿ (TMC) | | |
|---|---|---|---|---|---|---|---|---|---|---|---|---|---|
| | | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು |
| ೧ | ಒಟ್ಟು ಜನಸಂಖ್ಯೆ | ೧೧,೨೦೯ | ೧೧,೧೮೦ | **೨೨,೩೮೯** | ೨೫,೮೫೫ | ೨೪,೨೩೩ | **೫೦,೦೮೮** | ೧೪,೪೧೬ | ೧೩,೬೫೨ | **೨೮,೦೬೮** | ೧೩,೫೫೦ | ೧೨,೭೫೪ | **೨೬,೩೦೪** |
| ೨ | ಒಟ್ಟು ಕೆಲಸಗಾರರು | ೬,೫೮೨ | ೨,೬೪೪ | **೯,೨೨೬** | ೧೪,೪೫೪ | ೬,೭೯೨ | **೨೧,೨೪೬** | ೭,೮೦೫ | ೧,೯೮೧ | **೯,೭೮೬** | ೭,೨೮೬ | ೩,೦೦೦ | **೧೦,೨೮೬** |
| ೩ | ಮುಖ್ಯ ಕೆಲಸಗಾರರು | ೬,೦೮೯ | ೧೯೩೬ | **೮,೦೨೫** | ೧೩,೫೩೯ | ೪,೯೪೦ | **೧,೮೪೭೯** | ೭,೪೮೯ | ೧,೫೬೬ | **೯,೦೫೫** | ೬,೬೩೦ | ೨,೦೭೧ | **೮,೭೦೧** |
| I | ವ್ಯವಸಾಯಗಾರರು | ೧,೦೮೬ | ೨೧೯ | **೧,೩೦೫** | ೫೩೦ | ೬೫ | **೫೯೫** | ೫೦೬ | ೧೩೬ | **೬೪೨** | ೪೧೪ | ೧೧೮ | **೫೩೨** |
| ii | ಕೃಷಿ ಕಾರ್ಮಿಕರು | ೧೯೦ | ೧೦೬ | **೨೯೬** | ೨೮೫ | ೧೮೪ | **೪೬೯** | ೨೧೬ | ೧೮೫ | **೪೦೧** | ೨೬೨ | ೧೪೪ | **೪೦೬** |
| iii | ಗೃಹ ಕೈಗಾರಿಕಾ ಕೆಲಸಗಾರರು | ೫೮೨ | ೪೬೦ | **೧,೦೪೨** | ೧,೪೧೧ | ೨,೬೯೨ | **೪,೧೦೩** | ೨೧೨ | ೧೨೩ | **೩೩೫** | ೧೩೧ | ೩೫೭ | **೪೮೮** |
| iv | **ಇತರೆ ಕೆಲಸಗಾರರು** | ೪,೨೩೧ | ೧,೧೫೧ | **೫,೩೮೨** | ೧೧,೩೧೩ | ೧,೯೯೯ | **೧೩,೩೧೨** | ೬,೫೫೫ | ೧,೧೨೨ | **೭,೬೭೭** | ೫,೮೨೩ | ೧,೪೫೨ | **೭,೨೭೫** |
| ೪ | **ಸೀಮಾಂತ ಕೆಲಸಗಾರರು** | ೪೯೩ | ೭೦೮ | **೧೨೦೧** | ೯೧೫ | ೧,೮೫೨ | **೨,೭೬೭** | ೩೧೬ | ೪೧೫ | **೭೩೧** | ೬೫೬ | ೯೨೬ | **೧,೫೮೫** |
| I | ವ್ಯವಸಾಯಗಾರರು | ೧೮ | ೧೯೪ | **೨೧೨** | ೧೭ | ೬೮ | **೮೫** | ೦೫ | ೦೯ | **೧೪** | ೧೧ | ೩೬ | **೪೭** |
| ii | **ಕೃಷಿ ಕಾರ್ಮಿಕರು** | ೫೧ | ೧೪೫ | **೧೯೬** | ೬೨ | ೧೭೨ | **೨೩೪** | ೮೩ | ೨೦೫ | **೨೮೮** | ೨೦೫ | ೩೮೬ | **೫೯೧** |
| iii | **ಗೃಹ ಕೈಗಾರಿಕಾ ಕೆಲಸಗಾರರು** | ೩೧ | ೧೬೫ | **೧೯೬** | ೧೬೧ | ೧,೧೨೨ | **೧,೨೮೩** | ೩೮ | ೫೦ | **೮೮** | ೨೨ | ೧೯೪ | **೨೧೬** |
| iv | **ಇತರೆ ಕೆಲಸಗಾರರು** | ೩೯೩ | ೨೦೪ | **೫೯೭** | ೬೭೫ | ೪೯೦ | **೧,೧೬೫** | ೧೯೦ | ೧೫೧ | **೩೪೧** | ೪೧೮ | ೩೧೩ | **೭೩೧** |
| ೫ | **ಕೆಲಸಗಾರರಲ್ಲದವರು** | ೪,೬೨೭ | ೮,೫೩೬ | **೧೩,೧೬೩** | ೧೧,೪೦೧ | ೧೭,೪೪೧ | **೨೮,೮೪೨** | ೬,೬೧೧ | ೧೧,೬೭೧ | **೧೮,೨೮೨** | ೬,೨೬೪ | ೯,೭೫೪ | **೧೬,೦೧೮** |

| ಕ್ರ.ಸಂ | ಜನಸಂಖ್ಯೆ | ಕೊರಟಗೆರೆ (TP) | | | ತುಮಕೂರು (CMC) | | | ಗುಬ್ಬಿ (TP) | | | ತಿಪಟೂರು (CMC) | | |
|---|---|---|---|---|---|---|---|---|---|---|---|---|---|
| | | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು |
| ೧ | ಒಟ್ಟು ಜನಸಂಖ್ಯೆ | ೬,೯೨೯ | ೬,೭೨೬ | **೧೩,೬೫೫** | ೧,೨೯,೨೭೩ | ೧,೧೯,೬೫೬ | **೨,೪೮,೯೨೯** | ೮,೬೩೫ | ೮,೧೭೦ | **೧೬,೮೦೫** | ೨೭,೩೦೧ | ೨೫,೮೦೩ | **೫೩,೧೦೪** |
| ೨ | ಒಟ್ಟು ಕೆಲಸಗಾರರು | ೩,೮೫೭ | ೧,೫೭೫ | **೫,೪೩೨** | ೬೮,೭೪೩ | ೧೯,೭೫೨ | **೮೮,೪೯೫** | ೪,೯೯೦ | ೧,೪೪೨ | **೬,೪೩೨** | ೧೫,೭೮೯ | ೪,೬೨೧ | **೨೦,೪೧೦** |
| ೩ | ಮುಖ್ಯ ಕೆಲಸಗಾರರು | ೩,೭೭೦ | ೧,೪೦೭ | **೫,೧೭೭** | ೬೫,೫೦೫ | ೧೬,೫೧೩ | **೮೨,೦೧೮** | ೪,೮೫೯ | ೧,೨೯೬ | **೬,೧೫೫** | ೧೫,೦೬೩ | ೩,೮೦೩ | **೧೮,೮೬೬** |
| I | ವ್ಯವಸಾಯಗಾರರು | ೩೩೦ | ೯೪ | **೪೨೪** | ೨,೫೩೭ | ೭೧೪ | **೩,೨೫೧** | ೭೧೭ | ೧೨೩ | **೮೪೦** | ೫೯೫ | ೧೦೨ | **೬೯೭** |
| ii | ಕೃಷಿ ಕಾರ್ಮಿಕರು | ೨೪೫ | ೨೮೩ | **೫೨೮** | ೧,೦೪೯ | ೫೬೯ | **೧,೬೧೮** | ೨೦೦ | ೧೮೫ | **೩೮೫** | ೮೭ | ೪೨ | **೧೨೯** |

**ಕೋಷ್ಟಕ : ೮.೨** (ಮುಂದು.....)

| | | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು |
|---|---|---|---|---|---|---|---|---|---|---|---|---|---|
| iii | ಗೃಹ ಕೈಗಾರಿಕಾ ಕೆಲಸಗಾರರು | ೧೦೩ | ೪೬೧ | **೫೬೪** | ೧,೧೯೧ | ೩,೨೬೯ | **೪,೪೬೦** | ೧೫೧ | ೧೭೭ | **೩೨೮** | ೧,೧೩೨ | ೭೦೫ | **೧೮೩೭** |
| iv | ಇತರೆ ಕೆಲಸಗಾರರು | ೧೦೩ | ೪೬೧ | **೫೬೪** | ೧,೧೯೧ | ೩,೨೬೯ | **೪,೪೬೦** | ೧೫೧ | ೧೭೭ | **೩೨೮** | ೧,೧೩೨ | ೭೦೫ | **೧೮೩೭** |
| ೪ | ಸೀಮಾಂತ ಕೆಲಸಗಾರರು | ೩,೦೯೨ | ೫೬೯ | **೩,೬೬೧** | ೬೦,೭೨೮ | ೧೧,೯೬೧ | **೭೨,೬೮೯** | ೩,೭೯೧ | ೮೧೧ | **೪,೬೦೨** | ೧೩,೨೪೯ | ೨,೯೫೪ | **೧೬,೨೦೩** |
| I | ವ್ಯವಸಾಯಗಾರರು | ೦೫ | ೦೬ | **೧೧** | ೧೩೬ | ೨೧೧ | **೩೪೭** | ೦೮ | ೦೩ | **೧೧** | ೧೨ | ೧೦ | **೨೨** |
| ii | ಕೃಷಿ ಕಾರ್ಮಿಕರು | ೦೫ | ೦೬ | **೧೧** | ೧೩೬ | ೨೧೧ | **೩೪೭** | ೦೮ | ೦೩ | **೧೧** | ೧೨ | ೧೦ | **೨೨** |
| iii | ಗೃಹ ಕೈಗಾರಿಕಾ ಕೆಲಸಗಾರರು | ೧೨ | ೬೬ | **೭೮** | ೩೦೮ | ೪೭೮ | **೭೮೬** | ೩೭ | ೬೯ | **೧೦೬** | ೧೨ | ೩೫ | **೪೭** |
| iv | ಇತರೆ ಕೆಲಸಗಾರರು | **೬೫** | **೬೫** | **೧೩೦** | **೨೬೮೪** | **೧,೫೯೩** | **೪,೨೭೭** | **೭೮** | **೩೩** | **೧೧೧** | **೬೩೧** | **೪೭೭** | **೧,೧೦೮** |
| ೫ | ಕೆಲಸಗಾರರಲ್ಲದವರು | ೩,೦೭೨ | ೫,೧೫೧ | **೮,೨೨೩** | ೬೦,೫೩೦ | ೯೯,೯೦೪ | **೧,೬೦,೪೩೪** | ೩,೬೪೫ | ೬,೭೨೮ | **೧೦,೩೭೩** | ೧೧,೫೧೨ | ೨೧೧೮೨ | **೩೨,೬೯೪** |

| ಕ್ರ.ಸಂ | ಜನಸಂಖ್ಯೆ | ತುರುವೇಕೆರೆ (TP) | | | ಆದಿತ್ಯಪಟ್ಟಣ (CT) | | | ಕುಣಿಗಲ್ (TMC) | | |
|---|---|---|---|---|---|---|---|---|---|---|
| | | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು |
| ೧ | ಒಟ್ಟು ಜನಸಂಖ್ಯೆ | ೯,೦೩೧ | ೮,೪೮೬ | **೧೭,೫೧೭** | ೨,೧೮೦ | ೨,೦೩೬ | **೪,೨೧೬** | ೧೫,೪೮೯ | ೧೪,೮೫೪ | **೩೦,೩೪೩** |
| ೨ | ಒಟ್ಟು ಕೆಲಸಗಾರರು | ೩,೯೬೬ | ೯೭೦ | **೪,೯೩೬** | ೧,೧೨೧ | ೧೯೩ | **೧,೩೧೪** | ೮,೪೯೪ | ೩,೦೫೬ | **೧೧,೫೫೦** |
| ೩ | ಮುಖ್ಯ ಕೆಲಸಗಾರರು | ೩,೭೧೩ | ೭೭೭ | **೪,೪೯೦** | ೧,೦೮೮ | ೧೮೦ | **೧,೨೬೮** | ೭,೯೮೦ | ೨,೫೫೯ | **೧೦,೫೩೯** |
| I | ವ್ಯವಸಾಯಗಾರರು | ೨೨೯ | ೧೨ | **೨೪೧** | ೩೫ | ೦೭ | **೪೨** | ೫೯೬ | ೧೩೧ | **೭೨೭** |
| Ii | ಕೃಷಿ ಕಾರ್ಮಿಕರು | ೩೫ | ೦೯ | **೪೪** | ೧೧ | ೦೭ | **೧೮** | ೨೩೨ | ೧೧೪ | **೩೪೬** |
| Iii | ಗೃಹ ಕೈಗಾರಿಕಾ ಕೆಲಸಗಾರರು | ೯೬ | ೮೪ | **೧೮೦** | ೧೮ | ೦೭ | **೨೫** | ೪೪೪ | ೧೦೨೭ | **೧೪೭೧** |
| Iv | ಇತರೆ ಕೆಲಸಗಾರರು | ೩,೩೫೩ | ೬೭೨ | **೪,೦೨೫** | ೧,೦೨೪ | ೧೫೯ | **೧,೧೮೩** | ೬,೭೦೮ | ೧,೨೮೭ | **೭,೯೯೫** |
| ೪ | ಸೀಮಾಂತ ಕೆಲಸಗಾರರು | ೨೫೩ | ೧೯೩ | **೪೪೬** | ೩೩ | ೧೩ | **೪೬** | ೫೧೪ | ೪೯೭ | **೧೦೧೧** |
| i | ವ್ಯವಸಾಯಗಾರರು | ೧೨ | ೦೨ | **೧೪** | – | – | – | ೩೧ | ೬೪ | **೯೫** |
| ii | ಕೃಷಿ ಕಾರ್ಮಿಕರು | ೦೬ | ೧೩ | **೧೯** | ೦೬ | ೦೫ | **೧೧** | ೪೮ | ೫೩ | **೧೦೧** |
| iii | ಗೃಹ ಕೈಗಾರಿಕಾ ಕೆಲಸಗಾರರು | ೧೦ | ೩೫ | **೪೫** | ೦೨ | ೦೪ | **೦೬** | ೩೨ | ೨೨೪ | **೨೫೬** |
| iv | ಇತರೆ ಕೆಲಸಗಾರರು | ೨೨೫ | ೧೪೩ | **೩೬೮** | ೨೫ | ೦೪ | **೨೯** | ೪೦೩ | ೧೫೬ | **೫೫೯** |
| ೫ | ಕೆಲಸಗಾರರಲ್ಲದವರು | ೨,೮೮೫ | ೫,೪೬೦ | **೮,೩೪೫** | ೧,೦೫೯ | ೧,೮೬೩ | **೨,೯೨೨** | ೬,೯೯೩ | ೧೧,೭೯೮ | **೧೮,೭೯೩** |

**ಆಧಾರ: ಭಾರತೀಯ ಜನಗಣತಿ**

# ಜಿಲ್ಲಾದಾಯ

ಜಿಲ್ಲಾ ಆದಾಯವೆಂದು ಸಾಮಾನ್ಯವಾಗಿ ಕರೆಯಲಾಗುವ ಜಿಲ್ಲಾ ನಿವ್ವಳ ಆಂತರಿಕ ಉತ್ಪನ್ನವು, ಜಿಲ್ಲೆಯ ಆರ್ಥಿಕ ಅಭಿವೃದ್ಧಿಯ ಗುಣಮಟ್ಟವನ್ನು ಅಳತೆ ಮಾಡುವ ಮುಖ್ಯ ಸೂಚಿಯಾಗಿದೆ. ಆಯಾ ವರ್ಷದಲ್ಲಿ ಜಿಲ್ಲೆಯಲ್ಲಿ ಉತ್ಪತ್ತಿಯಾಗುವ ಸರಕು ಮತ್ತು ಸೇವೆಗಳ ಒಟ್ಟು ಮೌಲ್ಯವನ್ನು ಇದರಿಂದ ತಿಳಿಯಬಹುದು. ಪ್ರಸಕ್ತ ಬೆಲೆಗಳಲ್ಲಿ ಜಿಲ್ಲೆಯ ನಿವ್ವಳ ಆಂತರಿಕ ಉತ್ಪನ್ನದ ಅಂದಾಜುಗಳು, ಚಾಲ್ತಿಯಲ್ಲಿರುವ ಬೆಲೆಗಳ ಮೇರೆಗೆ ಹುಟ್ಟುವಳಿ ಮೌಲ್ಯವನ್ನು ಪ್ರತಿಬಿಂಬಿಸುತ್ತದೆ. ಸ್ಥಿರಬೆಲೆಗಳು ಈ ಅಂದಾಜು ಬೆಲೆಗಳ ವ್ಯತ್ಯಾಸದ ಪರಿಣಾಮವನ್ನು ದೂರವಾಗಿಸಿ, ನಿಜವಾದ ಆರ್ಥಿಕ ಬೆಳವಣಿಗೆಯನ್ನು ಪ್ರತಿಬಿಂಬಿಸುವಲ್ಲಿ ನೆರವಾಗುತ್ತವೆ. ತಲವಾರು ನಿವ್ವಳ ಆಂತರಿಕ ಉತ್ಪನ್ನವು ಬೆಲೆಯ ಆರ್ಥಿಕ ಬೆಳವಣಿಗೆಯನ್ನು ಗುರುತಿಸುವ ಇನ್ನೊಂದು ಮಾಪನವಾಗಿದ್ದು, ಪ್ರಾದೇಶಿಕ ಅಸಮತೋಲನವನ್ನು ಅಳೆಯಲು ಸಹಕರಿಸುತ್ತದೆ. ಜಿಲ್ಲೆಯ ಆದಾಯವು ೧೯೬೦–೬೧ರಲ್ಲಿ (ಚಾಲ್ತಿ ಬೆಲೆಗಳಲ್ಲಿ) ರೂ. ೩೪೪೫.೮೫ ಲಕ್ಷಗಳಾಗಿದ್ದರೆ, ೧೯೭೦–೭೧ರಲ್ಲಿ ರೂ. ೬,೩೬೨.೭೫ ಲಕ್ಷಗಳಿಗೂ, ೧೯೭೪–೭೫ರಲ್ಲಿ ರೂ. ೧೧.೮೩೬.೬೮ ಲಕ್ಷಗಳಿಗೂ, ೧೯೮೦–೮೧ರಲ್ಲಿ ರೂ. ೨೩,೦೭೯ ಲಕ್ಷಗಳಿಗೂ, ೧೯೮೫–೮೬ರಲ್ಲಿ ರೂ. ೪೩,೮೯೩ ಲಕ್ಷಗಳಿಗೂ, ೧೯೯೦–೯೧ರಲ್ಲಿ ರೂ. ೮೩,೯೦೫ ಲಕ್ಷಗಳಿಗೂ, ೧೯೯೫–೯೬ರಲ್ಲಿ ರೂ. ೧,೮೩,೭೩೩ ಲಕ್ಷಗಳಿಗೂ ಹಾಗೂ ೨೦೦೫–೦೬ರಲ್ಲಿ ರೂ. ೨,೨೬,೯೦೧ ಲಕ್ಷಗಳಿಗೂ ಹೆಚ್ಚಳಗೊಂಡಿದ್ದರೆ, ೨೦೦೦–೦೧ರಲ್ಲಿ ರೂ. ೧,೪೭,೨೫೬ ಲಕ್ಷಗಳಿಗೆ ಜಿಲ್ಲಾ ಆದಾಯ ಕಡಿಮೆಯಾಗಿರುವುದು ಅಂಕಿ ಅಂಶಗಳಿಂದ ಸ್ಪಷ್ಟವಾಗಿದೆ. ಮತ್ತೆ ೨೦೧೦–೧೧ರಲ್ಲಿ ರೂ.೨,೪೬,೯೭ ಲಕ್ಷಗಳಿಗೆ ಹೆಚ್ಚಾಗಿರುವುದು ಉಲ್ಲೇಖಾರ್ಹವಾಗಿದೆ.

ಮೂಲ ಉದ್ಯಮಗಳ ಪ್ರಕಾರ ಜಿಲ್ಲೆಯ ನಿವ್ವಳ ಆದಾಯ ಚಾಲ್ತಿ ಬೆಲೆಗಳಲ್ಲಿ ೧೯೭೪–೭೫ರಲ್ಲಿ ಕೃಷಿಯಿಂದ ರೂ. ೮೧೪೨.೧೭ ಲಕ್ಷಗಳು, ಪಶುಸಂಗೋಪನೆಯಿಂದ ರೂ. ೧,೯೨೬.೯೭ ಲಕ್ಷಗಳು, ಅರಣ್ಯದಿಂದ ರೂ. ೪೦.೪೮ ಲಕ್ಷಗಳು, ಮೀನುಗಾರಿಕೆಯಿಂದ ರೂ. ೬೮.೫೦ ಲಕ್ಷಗಳು, ಗಣಿಗಾರಿಕೆಯಿಂದ ರೂ. ೩೪.೪೭ ಲಕ್ಷಗಳು, ಉದ್ಯಮಗಳಿಂದ ರೂ. ೧೪೧.೬೩ ಲಕ್ಷಗಳು, ನಿರ್ಮಾಣ ಹಾಗೂ ಸಣ್ಣ ಪ್ರಮಾಣದ ಸ್ಥಾವರಗಳಿಂದ ರೂ. ೫೦೪.೯೯ ಲಕ್ಷಗಳು, ಸಂಪರ್ಕದಿಂದ ರೂ. ೩೯ ಲಕ್ಷಗಳು, ರೈಲ್ವೆಯಿಂದ ರೂ. ೩೮.೪೪ ಲಕ್ಷಗಳು, ಸಂಘಟಿತ ಬ್ಯಾಂಕುಗಳಿಂದ ರೂ. ೬೯.೫೨ ಲಕ್ಷಗಳು, ಇತರೆ ಸಾರಿಗೆ ಮತ್ತು ವಾಣಿಜ್ಯಗಳಿಂದ ರೂ. ೩೧೮.೨೯ ಲಕ್ಷಗಳು, ವೃತ್ತಿ ಮತ್ತು ಕಲೆಗಳಿಂದ ರೂ. ೨೮೦.೮೮ ಲಕ್ಷಗಳು, ಸಾರ್ವಜನಿಕ ಆಡಳಿತದಿಂದ ರೂ. ೨೧೬.೩೦ ಲಕ್ಷಗಳು, ಸ್ಥಳೀಯ ಸೇವೆಗಳಿಂದ ರೂ. ೪೮.೦೬ ಲಕ್ಷಗಳು ಹಾಗೂ ವಾಸಗೃಹಗಳಿಂದ ರೂ. ೬೨೩.೯೮ ಲಕ್ಷಗಳು ಹೀಗೆ ಒಟ್ಟು ರೂ. ೧೧,೮೩೬.೬೮ ಲಕ್ಷಗಳಾಗಿತ್ತು.

೧೯೮೦–೮೧ರಲ್ಲಿ ಚಾಲ್ತಿ ಬೆಲೆಗಳಲ್ಲಿ ಕೃಷಿಯಿಂದ (ಪಶುಸಂಗೋಪನೆ ಸೇರಿದಂತೆ) ರೂ. ೧೧,೯೪೨ ಲಕ್ಷಗಳು, ಅರಣ್ಯ ಮತ್ತು ಮರದ ದಿಮ್ಮಿಗಳಿಂದ ರೂ. ೩೯೧ ಲಕ್ಷಗಳು, ಮೀನುಗಾರಿಕೆಯಿಂದ ರೂ. ೧೧೯ ಲಕ್ಷಗಳು, ಗಣಿಗಾ–ರಿಕೆಯಿಂದ ರೂ. ೫೧ ಲಕ್ಷಗಳು, ತಯಾರಿಕೆಯಿಂದ (ನೋಂದಣಿ ಮತ್ತು ನೋಂದಣಿಯಾಗದ) ರೂ. ೨,೪೬೦ ಲಕ್ಷಗಳು, ನಿರ್ಮಾಣದಿಂದ ರೂ. ೭೭೦ ಲಕ್ಷಗಳು, ವಿದ್ಯುತ್, ಅನಿಲ, ನೀರು ಸರಬರಾಜುಗಳಿಂದ ರೂ. ೪೩೧ ಲಕ್ಷಗಳು, ರೈಲ್ವೆಯಿಂದ ರೂ. ೩೩ ಲಕ್ಷಗಳು, ಸಾರಿಗೆಯಿಂದ ರೂ. ೪೨೭ ಲಕ್ಷಗಳು, ಸಂಪರ್ಕದಿಂದ ರೂ. ೩೯ ಲಕ್ಷಗಳು, ವ್ಯಾಪಾರ, ಹೋಟೆಲ್ ಮತ್ತು ಉಪಹಾರ ಗೃಹಗಳಿಂದ ರೂ. ೨,೩೫೪ ಲಕ್ಷಗಳು, ಸಾರ್ವಜನಿಕ ಆಡಳಿತದಿಂದ ರೂ. ೫೮೮ ಲಕ್ಷಗಳು, ಇತರೆ ಸೇವೆಗಳಿಂದ ರೂ. ೧,೩೮೮ ಲಕ್ಷಗಳು ಹೀಗೆ ವಿವಿಧ ಮೂಲಗಳಿಂದ ಒಟ್ಟು ರೂ. ೨೩,೦೭೯ ಲಕ್ಷ ಆದಾಯ ಬಂದಿತ್ತು. ಹಾಗೆಯೇ ೨೦೦೫–೦೬ರಲ್ಲಿ ಚಾಲ್ತಿ ಬೆಲೆಗಳಲ್ಲಿ ಕೃಷಿಯಿಂದ ರೂ. ೧,೨೭,೭೮೪ ಲಕ್ಷಗಳು, ಅರಣ್ಯ ಮತ್ತು ಮರದ ದಿಮ್ಮಿಗಳಿಂದ ರೂ. ೯,೬೩೬ ಲಕ್ಷಗಳು, ಮೀನುಗಾರಿಕೆಯಿಂದ ರೂ. ೪,೧೯೯ ಲಕ್ಷಗಳು, ಗಣಿಗಾರಿಕೆಯಿಂದ ರೂ. ೩,೬೪೯ ಲಕ್ಷಗಳು, ತಯಾರಿಕೆಯಿಂದ (ನೋಂದಾಯಿತ ಹಾಗೂ ನೋಂದಾಯಿಸಿಲ್ಲದ) ರೂ. ೪೦,೧೩೯ ಲಕ್ಷಗಳು, ನಿರ್ಮಾಣದಿಂದ ರೂ. ೪೦,೫೮೪ ಲಕ್ಷಗಳು, ವಿದ್ಯುತ್, ಗ್ಯಾಸ್ ಮತ್ತು ನೀರು ಸರಬರಾಜುಗಳಿಂದ ರೂ. ೧೩,೬೪೯ ಲಕ್ಷಗಳು, ರೈಲ್ವೆಯಿಂದ ರೂ. ೧,೭೯೮ ಲಕ್ಷಗಳು, ಸಾರಿಗೆಯಿಂದ ರೂ. ೧೨,೫೬೮ ಲಕ್ಷಗಳು, ಸಂಗ್ರಹಣೆಯಿಂದ ರೂ. ೫೧ ಲಕ್ಷಗಳು, ಸಂಪರ್ಕದಿಂದ ರೂ. ೯,೬೫೧ ಲಕ್ಷಗಳು, ವ್ಯಾಪಾರ, ಹೋಟೆಲ್ ಮತ್ತು ಉಪಹಾರಗೃಹಗಳಿಂದ ರೂ. ೪೨,೬೨೩ ಲಕ್ಷಗಳು, ಬ್ಯಾಂಕಿಂಗ್ ಮತ್ತು ವಿಮೆಗಳಿಂದ ರೂ. ೧೩,೬೮೭ ಲಕ್ಷಗಳು, ಸ್ಥಿರಾಸ್ತಿ ಮತ್ತು ವಾಸಗೃಹಗಳ ಒಡೆತನ ಹಾಗೂ ವ್ಯವಹಾರ ಸೇವೆಗಳಿಂದ ರೂ. ೬೭,೮೧೯ ಲಕ್ಷಗಳು, ಸಾರ್ವಜನಿಕ ಆಡಳಿತದಿಂದ ರೂ. ೨೯,೬೧೪ ಲಕ್ಷಗಳು, ಇತರೆ ಸೇವೆಗಳಿಂದ ರೂ. ೪೯,೯೭೦ ಲಕ್ಷಗಳಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೩ ಹಾಗೂ ೮.೪ಅನ್ನು ನೋಡಿ.

**ಕೋಷ್ಟಕ ೮.೩ ಮೂಲ ಉದ್ಯಮಗಳ ಪ್ರಕಾರ ಜಿಲ್ಲೆಯ ನಿವ್ವಳ ಆದಾಯ (ಚಾಲ್ತಿಬೆಲೆಗಳಲ್ಲಿ)** (ರೂ.ಲಕ್ಷ ಗಳಲ್ಲಿ)

| ಕ್ರ.ಸಂ | ಜಿಲ್ಲಾ ಆದಾಯ ವಿವಿಧ ಮೂಲಗಳಿಂದ | ವರ್ಷ | | | | | | | | |
|---|---|---|---|---|---|---|---|---|---|---|
| | | ೧೯೮೦-೮೧ | ೨೦೦೦-೦೧ | ೨೦೦೫-೦೬ | ೨೦೦೬-೦೭ | ೨೦೦೭-೦೮ | ೨೦೦೮-೦೯ | ೨೦೦೯-೧೦ | ೨೦೧೧-೧೨ | ೨೦೧೨-೧೩ |
| ೧ | ಕೃಷಿ | ೧೧೯೪೨ | ೧೪೬೫೬೭ | ೧೨೭೭೮೪ | ೧೧೭೫೪೬ | ೧೭೮೮೨೩ | ೨೦೩೫೮೮ | ೨೨೪೯೭೨ | ೨೮೪೪೦೭ | ೩೦೪೧೭೬ |
| ೨ | ಅರಣ್ಯ ಮತ್ತು ಮರಗೆಲಸ | ೩೯೧ | ೮೨೯೫ | ೯೬೩೬ | ೧೦೫೪೯ | ೩೧೮೩೦ | ೪೧೮೩೧ | ೩೫೦೯೩ | ೪೯೫೪೮ | ೭೦೪೨೩ |
| ೩ | ಮೀನುಗಾರಿಕೆ | ೧೧೯ | ೩೦೭೩ | ೪೧೯೯ | ೪೧೨೬ | ೩೬೬೬ | ೬೬೯೩ | ೫೮೧೭ | ೫೭೯೧ | ೪೦೪೩ |
| ೪ | ಗಣಿ ಮತ್ತು ಕಲ್ಲು ಅಗೆತ | ೫೧ | ೯೧೩ | ೩೬೪೯ | ೬೧೮೭ | ೬೯೫೧ | ೫೪೧೮ | ೮೭೬೦ | ೩೨೩೯ | ೪೬೧೮ |
| | **ಪ್ರಾಥಮಿಕ ವಲಯದ ಒಟ್ಟು** | **೧೨೫೦೩** | **೧೫೮೮೪೮** | **೧೪೫೨೬೮** | **೧೩೮೪೦೮** | **೨೨೧೨೬೯** | **೨೫೭೫೨೯** | **೨೭೪೬೪೩** | **೩೪೨೯೮೫** | **೩೮೩೨೬೦** |
| ೫ | ತಯಾರಿಕೆ (ನೋಂದಣಿಯಾದ ಮತ್ತು ನೋಂದಣಿಯಾಗದ) | ೨೪೬೦ | ೪೦೦೧೯ | ೪೦೧೩೯ | ೪೭೩೧೭ | ೯೨೩೬೪ | ೯೫೨೩೫ | ೯೨೧೯೦ | ೧೨೭೩೯೧ | ೧೫೦೯೯೨ |
| ೬ | ನಿರ್ಮಾಣ ಕಾರ್ಯ | ೭೭೦ | ೨೦೮೦೯ | ೪೦೫೮೪ | ೬೯೬೫೬ | ೯೦೦೨೧ | ೧೦೦೩೯ | ೧೦೮೪೮೫ | ೧೭೩೮೦೯ | ೧೮೯೯೨೨ |
| ೭ | ವಿದ್ಯುಚ್ಛಕ್ತಿ ಅನಿಲ ಮತ್ತು ನೀರು ಸರಬರಾಜು | ೪೩೧ | ೭೧೬೪ | ೧೩೬೪೯ | ೧೧೩೭೫ | ೯೭೩೬ | ೧೪೮೮೪ | ೨೪೨೧೯ | ೨೭೧೫೬ | ೧೪೪೩೫ |
| | **ದ್ವಿತೀಯ ವಲಯದ ಒಟ್ಟು** | **೩೬೬೧** | **೬೭೯೯೨** | **೯೪೩೭೨** | **೧೨೮೩೪೮** | **೧೯೨೧೨೧** | **೨೧೦೪೫೮** | **೨೨೪೮೯೪** | **೩೨೮೩೫೬** | **೩೫೫೩೪೯** |
| ೮ | ರೈಲ್ವೆ | ೩೩ | ೬೬೩ | ೧೭೯೮ | ೨೯೪೨ | ೩೭೧೮ | ೩೨೭೬ | ೪೩೦೧ | ೪೧೪೩ | ೫೨೩೦ |
| ೯ | ಇತರೆ ಸಾರಿಗೆ | ೪೨೭ | ೭೨೭೮ | ೧೨೫೬೮ | ೧೫೧೪೬ | ೨೯೦೮೧ | ೫೧೩೭೯ | ೩೦೭೮೬ | ೪೧೬೮೩ | ೫೬೧೪೦ |
| ೧೦ | ಸಂಗ್ರಹಣೆ | – | ೫೦ | ೫೧ | ೪೦ | ೪೭ | ೫೭ | ೧೧೨ | ೧೧೦ | ೩೦೮ |
| ೧೧ | ಸಂಪರ್ಕ | ೩೯ | ೭೦೩೫ | ೯೬೫೧ | ೭೭೨೪ | ೯೬೫೩ | ೧೦೭೫೬ | ೧೨೪೭೪ | ೧೦೨೯೭ | ೧೪೧೭೨ |
| ೧೨ | ವ್ಯಾಪಾರ, ಹೋಟೆಲ್ ಹಾಗೂ ಉಪಹಾರ ಗೃಹಗಳು | ೨೩೫೪ | ೪೧೮೮೬ | ೪೨೬೨೩ | ೭೭೬೦೮ | ೭೫೫೭೫ | ೭೧೨೩೧ | ೮೪೧೪೨ | ೧೦೯೩೮೪ | ೧೨೩೯೩೫ |
| ೧೩ | ಬ್ಯಾಂಕು ಮತ್ತು ವಿಮೆ | ೩೦೩ | ೬೯೯೦ | ೧೩೬೮೭ | ೧೬೫೦೯ | ೨೫೪೦೯ | ೩೦೫೫೨ | ೩೨೪೫೮ | ೪೩೨೩೩ | ೯೧೫೧೪ |

**ಕೋಷ್ಟಕ ೮.೩** (ಮುಂದು.....)

| ಕ್ರ.ಸಂ | ಜಿಲ್ಲಾ ಆದಾಯ ವಿವಿಧ ಮೂಲಗಳಿಂದ | ವರ್ಷ | | | | | | | | |
|---|---|---|---|---|---|---|---|---|---|---|
| | | ೧೯೮೦-೮೧ | ೨೦೦೦-೦೧ | ೨೦೦೫-೦೬ | ೨೦೦೬-೦೭ | ೨೦೦೭-೦೮ | ೨೦೦೮-೦೯ | ೨೦೦೯-೧೦ | ೨೦೧೧-೧೨ | ೨೦೧೨-೧೩ |
| ೧೪ | ಸ್ಥಿರಾಸ್ತಿ ವಾಸಗೃಹಗಳ ಒಡೆತನ ಮತ್ತು ವ್ಯವಹಾರ ಸೇವೆಗಳು | ೧೭೮೩ | ೩೪೦೯೬ | ೬೭೮೧೯ | ೭೯೮೨೮ | ೧೦೨೭೫೨ | ೧೧೪೫೨೭ | ೧೩೭೭೬೯ | ೧೮೬೮೫೮ | ೨೨೦೫೩೩ |
| ೧೫ | ಸಾರ್ವಜನಿಕ ಆಡಳಿತ | ೫೮೮ | ೧೪೩೦೯ | ೨೯೬೧೪ | ೩೦೧೩೩ | ೪೦೯೦೨ | ೪೯೨೯೯ | ೪೯೬೫೩ | ೭೦೮೦೫ | ೭೩೩೭೪ |
| ೧೬ | ಇತರೆ ಸೇವೆಗಳು | ೧೩೮೮ | ೩೪೯೪೯ | ೪೯೦೯೦ | ೫೬೩೯೦ | ೬೯೯೩೧ | ೮೪೪೯೬ | ೧೦೪೧೬೫ | ೧೩೯೩೮೭ | ೧೭೯೪೩೬ |
| | **ತೃತೀಯ ವಲಯದ ಒಟ್ಟು** | ೬೯೧೫ | ೧೪೭೨೫೬ | ೨೨೬೯೦೧ | ೨೮೬೩೨೦ | ೩೫೭೦೬೭ | ೪೧೫೫೭೨ | ೪೫೫೮೬೧ | ೬೦೫೯೦೦ | ೭೬೪೬೪೨ |
| ೧೭ | **ಒಟು ನಿವ್ವಳ ಜಿಲ್ಲಾದಾಯ** | ೨೩೦೭೯ | ೩೭೪೦೯೬ | ೪೬೬೫೪೧ | ೫೫೩೦೭೬ | ೭೭೦೪೫೭ | ೮೮೩೫೬೦ | ೯೫೫೩೯೭ | ೧೨೭೭೨೪೨ | ೧೫೦೩೨೫೪ |
| ೧೮ | ಜಿಲ್ಲಾದಾಯದಲ್ಲಿ ಜಿಲ್ಲೆಯ ಸ್ಥಾನ (ಸಂಖ್ಯೆಗಳಲ್ಲಿ) | ೧೧ | ೦೭ | ೦೮ | ೧೦ | ೦೭ | ೦೭ | ೦೭ | ೦೬ | – |
| ೧೯ | **ತಲಾದಾಯ (ರೂ.ಗಳಲ್ಲಿ)** | ೧೧೭೮ | ೧೪೫೭೯ | ೧೭೦೩೮ | ೧೯೯೬೪ | ೨೭೪೯೮ | ೩೧೧೮೮ | ೩೩೩೬೫ | ೪೩೬೮೭ | – |
| ೨೦ | ತಲಾದಾಯದಲ್ಲಿ ಜಿಲ್ಲೆಯ ಸ್ಥಾನ(ಸಂಖ್ಯೆಗಳಲ್ಲಿ) | ೧೭ | ೧೭ | ೨೯ | ೨೩ | ೨೦ | ೧೮ | ೧೮ | ೧೯ | – |

**ಆಧಾರ: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ.**

## ತಲಾದಾಯ

ತಲಾ ಆದಾಯವು ಜಿಲ್ಲೆಯ ಆರ್ಥಿಕ ಅಭಿವೃದ್ಧಿಯ ಗುಣಮಟ್ಟವನ್ನು ಅಳತೆ ಮಾಡುವ ಮತ್ತೊಂದು ಸೂಚಿಯಾಗಿದೆ. ಅಲ್ಲದೆ ಜಿಲ್ಲೆಯ ಜನರ ಆದಾಯ ಮತ್ತು ಅವರು ಖರ್ಚು ಮಾಡುವ ವಿಧಾನಗಳು ಅವರ ಜೀವನ ಮಟ್ಟವನ್ನು ಪ್ರತಿಬಿಂಬಿಸುತ್ತವೆ. ಚಾಲ್ತಿ ಬೆಲೆಗಳಲ್ಲಿ ತುಮಕೂರು ಜಿಲ್ಲೆಯ ತಲಾದಾಯವು ೧೯೬೦-೬೧ರಲ್ಲಿ ಕೇವಲ ರೂ. ೨೫೬ ಗಳಿದ್ದದ್ದು, ೧೯೭೦-೭೧ರಲ್ಲಿ ರೂ. ೩೯೯ ಗಳಿಗೂ, ೧೯೭೪-೭೫ರಲ್ಲಿ ರೂ. ೬೫೩ ಗಳಿಗೂ, ೧೯೮೫-೮೬ರಲ್ಲಿ ರೂ. ೧೯೬೪ ಗಳಿಗೂ, ೧೯೯೭-೯೮ರಲ್ಲಿ ರೂ. ೯,೦೧೧ ಗಳಿಗೂ ಹಾಗೂ ೨೦೦೫-೦೬ರಲ್ಲಿ ರೂ.೧೭,೦೩೮ ಗಳಿಗೂ, ೨೦೦೯-೧೦ರಲ್ಲಿ ರೂ. ೩೩,೩೬೫ ಗಳಿಗೂ ಹೆಚ್ಚಳಗೊಂಡಿರುವುದು ಜಿಲ್ಲೆಯ ಅಭಿವೃದ್ಧಿಯ ಸಂಕೇತವಾಗಿದೆ. ೧೯೯೩-೯೪ರ ಸ್ಥಿರಬೆಲೆಗಳಲ್ಲಿ ಜಿಲ್ಲೆಯಲ್ಲಿ ೧೯೯೭-೯೮ರಲ್ಲಿ ರೂ. ೬,೬೪೩ ತಲಾದಾಯ ಗಳಿಸಿ ರಾಜ್ಯದಲ್ಲಿ ೧೮ನೇ ಸ್ಥಾನದಲ್ಲಿತ್ತು, ಇದು ೨೦೦೦-೦೧ರಲ್ಲಿ ರೂ. ೯,೯೬೪ ಗಳಿಗೂ (ರಾಜ್ಯದಲ್ಲಿ ೧೭ನೇ ಸ್ಥಾನ) ಹಾಗೂ ೨೦೦೫-೦೬ರಲ್ಲಿ ರೂ. ೧೩,೮೮೨ ಗಳಿಸಿ ರಾಜ್ಯದಲ್ಲಿ ೨೫ನೇ ಸ್ಥಾನಕ್ಕೆ ಕುಸಿದಿರುವುದು ಸ್ಪಷ್ಟವಾಗಿದೆ. ೨೦೧೦-೧೧ರಲ್ಲಿ ರೂ. ೪೩,೦೬೧ ಗಳಿಗೆ ಹೆಚ್ಚಳಗೊಂಡಿರುವುದು ಗಮನಾರ್ಹವಾಗಿದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ: ೮.೩ ಹಾಗೂ ಕೋಷ್ಟಕ: ೮.೪ ಅನ್ನು ನೋಡಿ.

## ಕೋಷ್ಟಕ: ೮.೪ ಮೂಲ ಉದ್ಯಮಗಳ ಪ್ರಕಾರ ಜಿಲ್ಲೆಯ ನಿವ್ವಳ ಆದಾಯ (ಸ್ಥಿರ ಬೆಲೆಗಳಲ್ಲಿ)

(ರೂ.ಲಕ್ಷ ಗಳಲ್ಲಿ)

| ಕ್ರ.ಸಂ | ಜಿಲ್ಲಾ ಆದಾಯ ವಿವಿಧ ಮೂಲಗಳಿಂದ | ವರ್ಷ | | | | | | | |
|---|---|---|---|---|---|---|---|---|---|
| | | ೧೯೮೦-೮೧ | ೨೦೦೦-೦೧ | ೨೦೦೫-೦೬ | ೨೦೦೬-೦೭ | ೨೦೦೭-೦೮ | ೨೦೦೮-೦೯ | ೨೦೦೯-೧೦ | ೨೦೧೧-೧೨ |
| ೧ | ಕೃಷಿ | ೧೧೯೪೨ | ೧೧೩೫೮೫ | ೧೦೬೮೭೬ | ೯೯೧೮೯ | ೧೬೧೭೬೭ | ೧೮೫೪೬೦ | ೧೯೭೬೦೪ | ೧೮೪೩೯೬ |
| ೨ | ಅರಣ್ಯ ಮತ್ತು ಮರಗೆಲಸ | ೩೯೧ | ೫೦೨೮ | ೭೮೦೦ | ೭೪೨೮ | ೨೨೮೬೨ | ೨೭೦೭೧ | ೨೮೭೩೮ | ೩೧೪೫೪ |
| ೩ | ಮೀನುಗಾರಿಕೆ | ೧೧೯ | ೯೨೪ | ೩೮೯೦ | ೩೭೪೮ | ೩೫೯೬ | ೪೧೬೯ | ೩೫೭೦ | ೩೬೯೭ |
| ೪ | ಗಣಿ ಮತ್ತು ಕಲ್ಲು ಅಗೆತ | ೫೧ | ೬೬೮ | ೨೮೧೪ | ೪೫೭೨ | ೫೯೨೦ | ೪೫೮೮ | ೩೯೫೦ | ೧೨೨೮ |
| | **ಪ್ರಾಥಮಿಕ ವಲಯದ ಒಟ್ಟು** | **೧೨೫೦೩** | **೧೨೦೧೮೬** | **೧೨೧೩೭೯** | **೧೧೪೯೩೭** | **೧೯೪೧೪೫** | **೨೨೧೨೮೭** | **೨೩೩೮೬೨** | **೨೨೦೩೪೮** |
| ೫ | ತಯಾರಿಕೆ (ನೋಂದಣಿಯಾದ ಮತ್ತು ನೋಂದಣಿಯಾಗದ) | ೨೪೬೦ | ೨೬೬೭೩ | ೩೩೦೦೦ | ೩೬೧೨೮ | ೭೯೯೮೪ | ೭೬೧೩೨ | ೭೨೪೩೯ | ೮೪೩೯೬ |
| ೬ | ನಿರ್ಮಾಣ ಕಾರ್ಯ | ೭೭೦ | ೧೩೮೯೬ | ೩೨೭೬೧ | ೫೦೭೪೮ | ೭೪೨೬೮ | ೭೩೬೧೮ | ೭೫೬೦೬ | ೧೦೩೩೮೬ |
| ೭ | ವಿದ್ಯುಚ್ಛಕ್ತಿ ಅನಿಲ ಮತ್ತು ನೀರು ಸರಬರಾಜು | ೪೩೧ | ೩೬೦೦ | ೧೧೧೬೦ | ೭೫೦೮ | ೫೯೨೮ | ೯೫೮೨ | ೧೪೯೮೮ | ೧೪೫೬೧ |
| | **ದ್ವಿತೀಯ ವಲಯದ ಒಟ್ಟು** | **೩೬೬೧** | **೪೪೧೪೨** | **೭೬೯೨೧** | **೯೪೩೮೪** | **೧೬೦೧೮೦** | **೧೫೯೩೩೨** | **೧೬೩೦೩೩** | **೨೦೨೩೧೬** |
| ೮ | ರೈಲ್ವೆ | ೩೩ | ೪೪೬ | ೧೯೨೨ | ೩೦೦೦ | ೩೨೭೫ | ೨೯೫೫ | ೩೦೩೬ | ೩೫೬೫ |
| ೯ | ಇತರೆ ಸಾರಿಗೆ | ೪೨೭ | ೩೨೪೦ | ೧೦೧೮೭ | ೧೧೨೩೫ | ೨೫೨೯೦ | ೩೧೦೪೯ | ೨೦೪೮೧ | ೨೩೦೩೫ |
| ೧೦ | ಸಂಗ್ರಹಣೆ | – | ೨೭ | ೩೯ | ೩೧ | ೪೦ | ೪೭ | ೫೬ | ೪೮ |
| ೧೧ | ಸಂಪರ್ಕ | ೩೯ | ೬೨೧೦ | ೧೩೩೭೨ | ೧೬೦೨೫ | ೯೫೮೫ | ೧೬೩೦೭ | ೧೮೫೪೩ | ೨೨೨೧೩ |
| ೧೨ | ವ್ಯಾಪಾರ, ಹೋಟೆಲ್ ಹಾಗೂ ಉಪಹಾರ ಗೃಹಗಳು | ೨೩೫೪ | ೨೮೯೪೬ | ೩೪೬೬೭ | ೫೦೮೨೭ | ೬೯೮೩೪ | ೬೦೭೦೪ | ೬೪೯೫೬ | ೭೩೭೯೪ |
| ೧೩ | ಬ್ಯಾಂಕು ಮತ್ತು ವಿಮೆ | ೩೦೩ | ೪೭೭೩ | ೧೧೦೭೦ | ೧೪೯೬೮ | ೨೮೪೭೮ | ೩೨೬೦೬ | ೩೪೭೪೬ | ೪೧೫೮೭ |
| ೧೪ | ಸ್ಥಿರಾಸ್ತಿ ವಾಸಗೃಹಗಳ ಒಡೆತನ ಮತ್ತು ವ್ಯವಹಾರ ಸೇವೆಗಳು | ೧೭೮೩ | ೧೮೯೪೦ | ೪೭೨೨೫ | ೪೯೧೧೫ | ೭೭೯೩೩ | ೮೩೨೨೪ | ೮೨೪೪೪ | ೮೮೩೧೦ |

**ಕೋಷ್ಟಕ: ೮.೪** (ಮುಂದು.....)

| ಕ್ರ.ಸಂ | ಜಿಲ್ಲಾ ಆದಾಯ ವಿವಿಧ ಮೂಲಗಳಿಂದ | ವರ್ಷ | | | | | | | |
|---|---|---|---|---|---|---|---|---|---|
| | | ೧೯೮೦-೮೧ | ೨೦೦೦-೦೧ | ೨೦೦೫-೦೬ | ೨೦೦೬-೦೭ | ೨೦೦೭-೦೮ | ೨೦೦೮-೦೯ | ೨೦೦೯-೧೦ | ೨೦೧೧-೧೨ |
| ೧೫ | ಸಾರ್ವಜನಿಕ ಆಡಳಿತ | ೫೮೮ | ೮೩೧೧ | ೨೩೫೫೬ | ೨೫೧೪೨ | ೩೩೭೧೩ | ೩೯೭೪೪ | ೩೩೩೪೧ | ೪೦೨೬೭ |
| ೧೬ | ಇತರೆ ಸೇವೆಗಳು | ೧೩೮೮ | ೨೦೪೫೪ | ೩೯೭೮೬ | ೪೦೮೦೦ | ೫೭೭೧೬ | ೬೩೨೯೫ | ೬೮೬೩೫ | ೭೬೦೨೮ |
| | **ತೃತೀಯ ವಲಯದ ಒಟ್ಟು** | **೬೯೧೫** | **೯೧೩೪೭** | **೧೮೧೮೨೪** | **೨೧೧೧೪೨** | **೩೦೫೮೬೪** | **೩೨೯೯೩೧** | **೩೨೬೨೩೮** | **೩೬೮೮೪೭** |
| ೧೭ | **ಒಟ್ಟು ನಿವ್ವಳ ಜಿಲ್ಲಾದಾಯ** | **೨೩೦೭೯** | **೨೫೫೬೭೫** | **೩೮೦೧೨೫** | **೪೨೦೪೬೩** | **೬೬೦೧೮೯** | **೭೧೦೫೫೦** | **೭೨೩೧೩೩** | **೭೯೧೫೧೨** |
| ೧೮ | ಜಿಲ್ಲಾದಾಯದಲ್ಲಿ ಜಿಲ್ಲೆಯ ಸ್ಥಾನ (ಸಂಖ್ಯೆಗಳಲ್ಲಿ) | ೧೧ | ೭ | ೯ | ೧೦ | ೭ | ೬ | ೭ | ೭ |
| ೧೯ | **ತಲಾದಾಯ (ರೂ.ಗಳಲ್ಲಿ)** | **೧೧೭೮** | **೯೯೬೪** | **೧೩೮೮೨** | **೧೫೧೭೭** | **೨೩೫೬೨** | **೨೫೦೮೧** | **೨೫೨೫೩** | **೨೭೦೭೩** |
| ೨೦ | ತಲಾದಾಯದಲ್ಲಿ ಜಿಲ್ಲೆಯ ಸ್ಥಾನ(ಸಂಖ್ಯೆಗಳಲ್ಲಿ) | ೧೭ | ೧೭ | ೨೫ | ೨೧ | – | ೧೭ | ೧೭ | ೧೯ |

**ಆಧಾರ: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ**

- ೧೯೮೦–೮೧ ನೇ ಸಾಲಿಗೆ ೧೯೮೦–೮೧ ಆಧಾರ ವರ್ಷ.
- ೨೦೦೦–೦೧ ನೇ ಸಾಲಿಗೆ ೧೯೯೩–೯೪ ಆಧಾರ ವರ್ಷ.
- ೨೦೦೫–೦೬ ಹಾಗೂ ೨೦೦೬–೦೭ ನೇ ಸಾಲಿಗೆ ೧೯೯೯–೦೦ ಆಧಾರ ವರ್ಷ
- ೨೦೦೭–೦೮, ೨೦೦೮–೦೯ ಹಾಗೂ ೨೦೦೯–೧೦ ನೇ ಸಾಲುಗಳಿಗೆ ೨೦೦೪–೦೫ ಆಧಾರ ವರ್ಷ.

## ಬೆಲೆ

ಒಂದು ನಿರ್ದಿಷ್ಟ ಪ್ರದೇಶದ ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಬೇಕಾದರೆ ಅಗತ್ಯ ವಸ್ತುಗಳ ಬೆಲೆಯ ಪಾತ್ರ ಮಹತ್ವದ್ದಾಗಿರುತ್ತದೆ. ಉತ್ಪಾದಕರ ಹಿತದೃಷ್ಟಿಯ ಜೊತೆಗೆ ಅನು(ಉಪ)ಭೋಗಿಗಳ (ಗ್ರಾಹಕರ) ಹಿತದೃಷ್ಟಿಯು ಮಹತ್ವದ್ದಾಗಿರುತ್ತದೆ. ಇವರ ನಡುವಿನ ನಿಲುವು ಸಮತೋಲನವಾಗಿದ್ದರೆ ಆರ್ಥಿಕ ಸ್ಥಿತಿಯನ್ನು ಸಮೃದ್ಧಗೊಳಿಸಿಕೊಳ್ಳಲು ನಾಂದಿಯಾಗುತ್ತದೆ. ಬದಲಾಗಿ ಆರ್ಥಿಕ ಸುಧಾರಣೆಗೆ ವಿರುದ್ಧವಾದ ಬೆಲೆಗಳು ಮೇಲುಗೈ ಸಾಧಿಸಿದರೆ, ಉತ್ಪಾದಕರು ತೊಂದರೆಗೊಂಡು ಮುಂದೆ ಬರುವ ಕಷ್ಟಗಳಿಗಾಗಿ ಶ್ರಮಪಡಬೇಕಾಗುತ್ತದೆ. ಆದರೆ ಗ್ರಾಹಕರು ಶ್ರಮಿಸಿದರೆ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದು. ಆದ ಕಾರಣ ಉತ್ಪಾದಕರು ಹಾಗೂ ಅನು(ಉಪ)ಭೋಗಿಗಳ ಮಧ್ಯೆ ಸಮತೋಲನ ಉಂಟಾದರೆ ಆರ್ಥಿಕ ಸಮತೋಲನ ಸಾಧಿಸಬಹುದು. ಜಿಲ್ಲೆಯಲ್ಲಿ ೧೮೭೧ರಿಂದ ೧೮೭೩ರವರೆಗೆ ಇದ್ದ ಅಕ್ಕಿಯ ಬೆಲೆಯನ್ನು ನೋಡಬಹುದು. ಎಂಬತ್ತು ತೊಲದ ಒಂದು (೩೬.೨೮೭ ಕೆ.ಜಿ) ಮಾಂಡ್ (maund) ಅಕ್ಕಿಗೆ ೩–೦–೦ ರೂಗಳಿಂದ ೪–೮–೦ (ರೂ–ಆಣೆ–ಪೈಸೆ) ಆಗಿತ್ತು. ಇದು ೧೮೮೨ ಹಾಗೂ ೧೮೮೩ರಲ್ಲಿ ಪ್ರತಿ

ಮಾಂಡಿಗೆ ರೂ. ೨-೮-೦ ಕಡಿಮೆಯಾಯಿತು. ಮತ್ತೆ ೧೮೯೧ ಹಾಗೂ ೧೮೯೨ರಲ್ಲಿ ಐದು ರೂ. ಗೆ ಹೆಚ್ಚಳಗೊಂಡಿತು. ಹಾಗೆಯೇ ೧೮೮೧-೮೨ರಲ್ಲಿ ಪ್ರತಿಮಾಂಡಿಗೆ ರಾಗಿಯ ಬೆಲೆ ರೂ. ೧-೮-೦ ಇದ್ದದ್ದು, ೧೮೯೧-೯೨ರಲ್ಲಿ ಎರಡು ರೂಪಾಯಿಗಳವರೆಗೆ ಹೆಚ್ಚಳಗೊಂಡರೆ ಮತ್ತೆ ೧೮೯೨-೯೩ರಲ್ಲಿ ರೂ. ೧-೮-೦ ಗೆ ಕುಸಿಯಿತು. ಬುಕಾನನ್ ಪ್ರಕಾರ ೧೮೦೦ರಲ್ಲಿ ಜಿಲ್ಲೆಯಲ್ಲಿ ೧೨ ಸುಲ್ತಾನಿ ಪನಾಮಿಗೆ ರಾಗಿ ಒಂದು ಖಂಡುಗ (೨೦೦ ಸೇರುಗಳು), ಉತ್ತಮ ಅಕ್ಕಿ ೨೮½ ಸೇರು ಮತ್ತು ದಪ್ಪ ಅಕ್ಕಿ ೬೬½ ಸೇರು ಲಭ್ಯವಿತ್ತು. ಇದನ್ನು ರೂಪಾಯಿಗೆ ಪರಿವರ್ತಿಸಿದರೆ, ಒಂದು ರೂ. ಗೆ ೫೦ ಸೇರು ರಾಗಿ, ಉತ್ತಮ ದರ್ಜೆಯ ಅಕ್ಕಿ ಒಂಬತ್ತು ಸೇರುಗಳು ಮತ್ತು ಮಧ್ಯಮ ದರ್ಜೆಯ ಅಕ್ಕಿ ೨೧ ಸೇರುಗಳು ಲಭ್ಯವಿತ್ತು. ಮೊದಲ ಮಹಾಯುದ್ಧ ಆರಂಭಕ್ಕೆ ಮುಂಚೆ (೧೯೧೩-೧೪) ತುಮಕೂರಿನಲ್ಲಿ ಸರಾಸರಿ ಅಕ್ಕಿ (ಉತ್ತಮ) ಯ ಬೆಲೆ ರೂ. ಆರು ಸೇರು ಮತ್ತು ರಾಗಿಯ ಬೆಲೆ ರೂ. ೧೪ ಸೇರುಗಳಂತೆ ಮಾರಾಟವಾಗಿತ್ತು. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ೧೮೮೬ ರಿಂದ ೧೯೧೫ ಮತ್ತು ೧೯೧೬ ರಿಂದ ೧೯೨೩ರ ಮಧ್ಯೆ ಸರಾಸರಿ ಬೆಲೆಯಲ್ಲಿ ಸಾಮ್ಯತೆ ಇದ್ದದ್ದು ಕಂಡುಬರುತ್ತದೆ. ಲಭ್ಯವಿದ್ದ ಅಂಕಿ ಸಂಖ್ಯೆಗಳ ಪ್ರಕಾರ ೧೮೮೬-೯೦ ರವರೆಗೆ ಅಕ್ಕಿಯ ಬೆಲೆ ರೂ. ೧೩.೫೦ ಸೇರುಗಳಿಗೆ ಮಾರಾಟವಾಗಿತ್ತು. ಇದು ೧೯೦೧ರಿಂದ ೧೯೧೫ರವರೆಗೆ ರೂ. ಗೆ ೧೦.೩೫ ಸೇರು ಅಕ್ಕಿ ಲಭ್ಯವಿತ್ತು. ಹಾಗೆಯೇ ೧೯೧೬ ರಲ್ಲಿ ೭.೨೨ ಸೇರುಗಳಾಗಿತ್ತು. ರಾಗಿಯ ಬೆಲೆ ರೂ. ಗೆ ೧೮೮೬ರಿಂದ ೧೮೯೦ ರವರೆಗೆ ೩೯.೯೬ ಸೇರುಗಳಾಗಿದ್ದರೆ, ೧೯೦೧ ರಿಂದ ೧೯೦೫ರ ಅವಧಿಯಲ್ಲಿ ೨೪.೪೦ ಸೇರುಗಳು ಮತ್ತು ೧೯೧೬ ರಲ್ಲಿ ೧೭.೬೮ ಸೇರುಗಳು ಲಭ್ಯವಿತ್ತು. ಮೊದಲ ಮಹಾಯುದ್ಧದ ಪೂರ್ವ ಮತ್ತು ನಂತರದಲ್ಲಿ ಅಗತ್ಯವಸ್ತುಗಳ ಬೆಲೆಯಲ್ಲಿ ಏರಿಕೆ ಕಂಡುಬಂದಿರುವುದು ಅಂಕಿ ಅಂಶಗಳಿಂದ ಸ್ಪಷ್ಟವಾಗಿದೆ. ಜನಸಂಖ್ಯೆ ಹೆಚ್ಚಳ, ಉತ್ಪಾದನೆಯಲ್ಲಿ ಆದ ವ್ಯತ್ಯಾಸ, ಚಿನ್ನ ಮತ್ತು ಬೆಳ್ಳಿಯ ಬೆಲೆಯಲ್ಲಿನ ಹೆಚ್ಚಳ, ಹಣಕಾಸಿನ ಕಾರಣಗಳು ಮುಂತಾದವು ಅಗತ್ಯವಸ್ತುಗಳ ಬೆಲೆಯೇರಿಕೆಗೆ ಕಾರಣವಾಗಿದೆ. ಉದಾಹರಣೆಗೆ ೧೮೮೬ರಲ್ಲಿ ಅಕ್ಕಿಯ ಬೆಲೆ ಒಂದು ರೂಪಾಯಿಗೆ ರೂ.೧೩½ ಸೇರುಗಳು ಲಭ್ಯವಿದ್ದರೆ, ೧೯೧೬ರ ವೇಳೆಗೆ ಕೇವಲ ಏಳು ಸೇರುಗಳು ಮಾತ್ರ ಲಭ್ಯವಿತ್ತು. ಇದೇ ಅವಧಿಯಲ್ಲಿ (೧೮೮೬ ರಿಂದ ೧೯೧೬) ರಾಗಿ ಬೆಲೆ ದ್ವಿಗುಣಗೊಂಡಿತು.

ಮೊದಲ ಮಹಾಯುದ್ಧದ ನಂತರದಿಂದ ಎರಡನೇ ಮಹಾಯುದ್ಧದ ಮುಕ್ತಾಯದವರೆಗೂ ಬೆಲೆ ನಿಗದಿಪಡಿಸುವ ಬಗ್ಗೆ ಯಾವುದೇ ಆಲೋಚನೆ ಇರಲಿಲ್ಲ. ತುಮಕೂರು ಜಿಲ್ಲೆಯಲ್ಲಿ ೧೯೨೩-೨೪ರಲ್ಲಿ ಒಂದು ಪಲ್ಲ ಅಕ್ಕಿ ರೂ. ೨೭-೪-೦ ಗಳಿದ್ದದ್ದು, ೧೯೪೪-೪೫ರಲ್ಲಿ ರೂ. ೨೯-೦-೦ ಏರಿಕೆ ಆಗಿತ್ತು. ಇದೇ ಅವಧಿಯಲ್ಲಿ ರಾಗಿಯ ಬೆಲೆ ಕ್ರಮವಾಗಿ ರೂ. ೧೨-೮-೦ಗಳಿಂದ ರೂ. ೧೪-೪-೦ ಗಳಿಗೆ ಏರಿಕೆ ಕಂಡಿತು. ಈ ಅವಧಿಯಲ್ಲಿ ಆದ ಬೆಲೆಯೇರಿಕೆಗೆ ಭಾಗಶಃ ಬ್ರಿಟಿಷ್ ಸರ್ಕಾರದ ಅಪಾಯಕಾರಿ ಹಣಕಾಸು ನೀತಿಯೇ ಕಾರಣವಾಗಿತ್ತು. ನೋಟು ಚಲಾವಣೆ (ಪೇಪರ್ ಕರೆನ್ಸಿ) ಯನ್ನು ವಿಸ್ತರಿಸಿದ್ದರಿಂದ ವಸ್ತುಗಳ ಖರೀದಿಸುವ ಶಕ್ತಿ ಹೆಚ್ಚಾಯಿತಾದರೂ ವಸ್ತುಗಳ ಸರಬರಾಜು ಕಡಿಮೆಯಾಯಿತು. ಇದರಿಂದ ಬೆಲೆ ಏರುಮುಖಗೊಂಡಿತು. ಮಾರಾಟಗಾರರು ಈ ಸಂದರ್ಭವನ್ನು ಬಳಸಿಕೊಂಡು ಹೆಚ್ಚು ಲಾಭ ಗಳಿಸಿದರು. ಯುದ್ದ ಸಂದರ್ಭವಾದ ಕಾರಣ ಯುದ್ಧಕ್ಕೆ ಹೆಚ್ಚಿನ ಮಹತ್ವ ನೀಡಿದ್ದರಿಂದ ಜನ ಸಾಮಾನ್ಯರಿಗೆ ಆಹಾರ ಸರಬರಾಜು ಪ್ರಮಾಣ ಕಡಿಮೆಯಾಯಿತು. ದೇಶದ ಎಲ್ಲಾ ಭಾಗಗಳಲ್ಲೂ ಎಲ್ಲಾ ಅನು (ಉಪ) ಭೋಗಿ ಸರಕುಗಳು ಕಾಳಸಂತೆಯಲ್ಲಿ ಮಾರಾಟಗೊಳ್ಳುತ್ತಿದ್ದವು. ಇದರ ಪ್ರಭಾವ ತುಮಕೂರು ಜಿಲ್ಲೆಯ ಮೇಲೂ ಮಹತ್ತರ ಪರಿಣಾಮ ಬೀರಿದ್ದರಿಂದ ಜನರು ತುಂಬಾ ಕಷ್ಟಕ್ಕೆ ಸಿಲುಕುವಂತಾಯಿತು. ಆಹಾರ ಪದಾರ್ಥಗಳು, ಬಟ್ಟೆ, ಮತ್ತಿತರ ಅಗತ್ಯ ವಸ್ತುಗಳ ಬೆಲೆಗಳಲ್ಲೂ ಸಹ ಏರಿಕೆ ಕಂಡು ಬಂದಿದ್ದರಿಂದ ಜನರು ಕ್ಲಿಷ್ಟಕರ ಪರಿಸ್ಥಿತಿ ಎದುರಿಸಬೇಕಾಯಿತು.

ಜಿಲ್ಲೆಯಲ್ಲಿ ೧೯೪೭ ರಲ್ಲಿ ಆಹಾರ ಪದಾರ್ಥಗಳು, ಸಕ್ಕರೆ ಹಾಗೂ ಬಟ್ಟೆ ಮೇಲೆ ಅನಿಯಂತ್ರಣ ಮಾಡಿದ್ದರ ಪ್ರತಿಫಲವಾಗಿ ಬೆಲೆಗಳು ಏರುಮುಖಗೊಂಡವು. ಮತ್ತೆ ಸರ್ಕಾರ ಇವುಗಳ ಮೇಲೆ ನಿಯಂತ್ರಣ ಜಾರಿಗೆ ತಂದು ಬೆಲೆ ಹೆಚ್ಚಳವನ್ನು ತಡೆಗಟ್ಟಿತು. ೧೯೪೯ರಲ್ಲಿ ರೂಪಾಯಿಯ ಅಪಮೌಲ್ಯದಿಂದಾಗಿ ಸ್ಥಳೀಯ ಮಾರುಕಟ್ಟೆ ಬೆಲೆಯ ಮೇಲೆ ಗಣನೀಯ ಪರಿಣಾಮ ಉಂಟಾಯಿತು. ತತ್ಪರಿಣಾಮವಾಗಿ ಬೆಲೆಗಳು ಇಳಿಯಲಾರಂಭಿಸಿತ್ತು ಹಾಗೂ ಮುಂಚಿತ ಬೆಲೆ ಹೆಚ್ಚಳದಿಂದಾದ ದುಷ್ಪರಿಣಾಮವು ಕ್ರಮೇಣ ಸುಧಾರಿಸಲಾರಂಭಿಸಿತು. ಮತ್ತೆ ೧೯೫೭, ೧೯೫೮ ಮತ್ತು ೧೯೫೯ರಲ್ಲಿ ಅಗತ್ಯ ವಸ್ತುಗಳ ಬೆಲೆಯಲ್ಲೂ ಏರಿಕೆಯಾಗಿರುವುದನ್ನು ಕೋಷ್ಟಕ ೮.೫ ರಲ್ಲಿ ನೀಡಿದೆ.

**ಕೋಷ್ಟಕ: ೮.೫ ಅಗತ್ಯ ವಸ್ತುಗಳ ಸರಾಸರಿ ಸಗಟುಬೆಲೆ (ಪ್ರತಿ "ಬಿ" ಮಾಂಡಿಗೆ ರೂ.ಗಳಲ್ಲಿ)**

| ವರ್ಷ | ಅಕ್ಕಿ | ರಾಗಿ |
|---|---|---|
| | ರೂ. ಪೈ | ರೂ. ಪೈ |
| ೧೯೫೭ | ೧೯.೪೦ | ೧೧.೯೨ |
| ೧೯೫೮ | ೧೯.೯೫ | ೧೧.೮೪ |
| ೧೯೫೯ | ೨೧.೫೯ | ೧೩.೩೯ |

**ಆಧಾರ: ತುಮಕೂರು ಜಿಲ್ಲಾ ಗ್ಯಾಸೆಟಿಯರ್ – ೧೯೬೯.**

ಈ ಹಣದುಬ್ಬರದ ಪ್ರವೃತ್ತಿಗೆ ಹಲವು ಕಾರಣಗಳಿದ್ದು, ಅವುಗಳಲ್ಲಿ ಸರ್ಕಾರದ ಹಣಕಾಸು ನೀತಿಗಳಲ್ಲಿನ ಪರಿಣಾಮ ಚಿನ್ನ ಹಾಗೂ ಬೆಳ್ಳಿಗಳ ಉತ್ಪಾದನೆಯಲ್ಲಿನ ವ್ಯತ್ಯಾಸ, ಆಮದು–ರಫ್ತು ನೀತಿಗಳು ಆಯಾ ಪ್ರದೇಶಗಳಲ್ಲಿ ಬೆಲೆಯ ಅಸ್ಥಿರತೆಯ ಮೇಲೆ ಗಮನಾರ್ಹವಾದ ಪರಿಣಾಮ ಬೀರಿವೆ. ಹಲವಾರು ಸಾಮಾಜಿಕ ಪಿಡುಗುಗಳಿಗೂ ಕಾರಣವಾಯಿತು. ಇದರ ಪರಿಣಾಮವಾಗಿ ಹೆಚ್ಚು ಬಲವುಳ್ಳ ವ್ಯಾಪಾರಸ್ಥರು ಲಾಭದ ಆಸೆಯಿಂದ ಆಹಾರ ಪದಾರ್ಥಗಳನ್ನು ಅಕ್ರಮವಾಗಿ ಭಾರಿ ಪ್ರಮಾಣದಲ್ಲಿ ಸಂಗ್ರಹಿಸಿ ಕೃತಕ ಅಭಾವವನ್ನು ಸೃಷ್ಟಿಸಿದ ಪರಿಣಾಮವಾಗಿ ಬೆಲೆ ಹೆಚ್ಚಳವು ತೀವ್ರಗೊಂಡಿತು. ರಾಜ್ಯಸರ್ಕಾರವು ಅನಪೇಕ್ಷಿತ ಪ್ರವೃತ್ತಿಯ ಬಗ್ಗೆ ವಿಳಂಬ ಮಾಡದೇ ಕಟ್ಟುನಿಟ್ಟಿನ ಬೆಲೆ ನಿಯಂತ್ರಣ ಕ್ರಮವನ್ನು ಕೈಗೊಂಡಿತು. ಅಕ್ಕಿ ಮತ್ತು ರಾಗಿಯನ್ನು ಕಡ್ಡಾಯ ಸರಬರಾಜಿನಡಿ ತಂದು ನಗರ ಪ್ರದೇಶಗಳಲ್ಲೂ ಪಡಿತರ ಪದ್ಧತಿಯಡಿ ಅಗತ್ಯ ಆಹಾರ ಪದಾರ್ಥಗಳನ್ನು ವಿತರಿಸಲಾಯಿತು. ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಗಳಿಗೆ ಆಹಾರ ಪದಾರ್ಥಗಳನ್ನು ಮುಕ್ತ ಸಾಗಾಟ ಮಾಡಲು ಸಹಾಯಕವಾಗುವಂತೆ ಆದೇಶ ಹೊರಡಿಸಿದ್ದರೂ ೧೯೫೨ರಲ್ಲಿ ಆಹಾರ ಪದಾರ್ಥಗಳ ಮೇಲಿದ್ದ ಎಲ್ಲಾ ನಿಯಂತ್ರಣ ಕ್ರಮಗಳನ್ನು ತೆಗೆಯಲಾಯಿತು. ಸರ್ಕಾರದ ಈ ಕ್ರಮದಿಂದಾಗಿ ಬೆಲೆಯಲ್ಲಿ ಕುಸಿತ ಕಂಡಿತಾದರೂ ಅದು ಸಾಧ್ಯವಾಗಲಿಲ್ಲ. ಬೆಲೆಯಲ್ಲಿ ಹೆಚ್ಚಳ ಕಂಡುಬಂದಿತು. ಸಾರ್ವಜನಿಕರ ಅನುಕೂಲಕ್ಕಾಗಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲಾಯಿತು. ಆಹಾರ ಪದಾರ್ಥಗಳ ಅಕ್ರಮ ಸಂಗ್ರಹಣೆಯಿಂದ ಬೆಲೆಯ ಮೇಲೆ ಪರಿಣಾಮ ಬೀರಿತು. ಬ್ಯಾಂಕುಗಳು ಕೃಷಿಯ ಉತ್ಪತ್ತಿಯ ಮೇಲೆ ಅನುದಾನ/ಸಾಲ ನೀಡದಂತೆ ಮಾರ್ಗದರ್ಶನ ನೀಡಿದವು. ಈ ಕ್ರಮಗಳು ಬೆಲೆ ನಿಯಂತ್ರಿಸಲು ಸಾಕಷ್ಟು ಪರಿಣಾಮ ಬೀರಲಿಲ್ಲ. ಹಾಗಾಗಿ ಅಗತ್ಯ ವಸ್ತುಗಳ ಬೆಲೆಯಲ್ಲಿ ಹೆಚ್ಚಳ ಕಂಡುಬಂದಿತು ಮತ್ತು ೧೯೬೦ರಲ್ಲಿ ಒಂದು ರೂ.ಗೆ ಅಕ್ಕಿಯು ೧¼ ಸೇರು, ರಾಗಿ ೨½ ಸೇರುಗಳು ಲಭ್ಯವಿತ್ತು. ೧೯೬೪ರ ಅಂತ್ಯದಲ್ಲಿ ಬೆಲೆಯಲ್ಲಿ ಹೆಚ್ಚಳದ ಪ್ರವೃತ್ತಿ ಕಂಡುಬಂದಿತು. ಪರಿಣಾಮವಾಗಿ ಅನುಭೋಗಿಗಳು ತೊಂದರೆಗೆ ಒಳಗಾದರು. ೧೯೬೫, ೧೯೬೬ ಹಾಗೂ ೧೯೬೭ರ ಅವಧಿಯಲ್ಲಿ ಅಕ್ಕಿ, ರಾಗಿ, ಖಾದ್ಯತೈಲ, ಬೇಳೆಕಾಳುಗಳು ಹಾಗೂ ಮೆಣಸಿನಕಾಯಿಗಳ ಬೆಲೆಯಲ್ಲಿ ಅಪಸಾಮಾನ್ಯವಾಗಿ ಹೆಚ್ಚಳ ಕಂಡುಬಂದಿತು. ಪರಿಣಾಮವಾಗಿ ರಾಜ್ಯಸರ್ಕಾರ ಗ್ರಾಹಕರ ಮೇಲಿನ ತೊಂದರೆಗಳನ್ನು ನಿವಾರಿಸಲು ಹಲವು ಕ್ರಮಗಳನ್ನು ಕಾಲಕಾಲಕ್ಕೆ ತೆಗೆದುಕೊಂಡಿತು. ಇದರಿಂದಾಗಿ ಆಹಾರ ಪದಾರ್ಥಗಳ ಸಗಟು ಮತ್ತು ಚಿಲ್ಲರೆ ಬೆಲೆಗಳಲ್ಲಿ ನಿಯಂತ್ರಣ ಸಾಧಿಸಲಾಯಿತು. ಮಾರಾಟ ಮತ್ತು ಕೊಳ್ಳುವ ಬೆಲೆಗಳನ್ನು ನಿಗದಿಪಡಿಸಲಾಯಿತು. ಮಾರಾಟಗಾರರು ಕಾಲಕಾಲಕ್ಕೆ ತಮ್ಮಲ್ಲಿರುವ ದಾಸ್ತಾನನ್ನು ಪ್ರದರ್ಶಿಸಬೇಕು. ಅಲ್ಲದೆ ಅಗತ್ಯವಸ್ತುಗಳ ಬೆಲೆಯನ್ನು ಸಹ ಪ್ರದರ್ಶಿಸಬೇಕು. ಆಹಾರ ಪದಾರ್ಥಗಳನ್ನು ಸಂಗ್ರಹಿಸಲು ಕೇಂದ್ರ ಸರ್ಕಾರದಿಂದ 'ಭಾರತದ ಆಹಾರ ನಿಗಮ'ವನ್ನು ಸ್ಥಾಪಿಸಲಾಯಿತು. ಇದು ನಗರ ಪ್ರದೇಶಗಳಿಗೆ ಆಹಾರ ಪದಾರ್ಥಗಳನ್ನು ವಿತರಿಸುವ ಅಧಿಕಾರವನ್ನು ಹೊಂದಿತ್ತು. ಆಹಾರ ಪದಾರ್ಥಗಳ ಲೆವಿ ಪದ್ಧತಿಯಂತೆ ರೈತರು ತಾವು ಬೆಳೆದ ಆಹಾರ ಪದಾರ್ಥಗಳಲ್ಲಿ ಇಂತಿಷ್ಟು ಭಾಗವನ್ನು ಈ ನಿಗಮಕ್ಕೆ ನೀಡಬೇಕಾಗಿತ್ತು. ಇದು ಗ್ರಾಹಕರ ಸಹಕಾರಿ ಸಂಘಗಳ ಮೂಲಕ ನ್ಯಾಯಬೆಲೆಯಲ್ಲಿ ಆಹಾರ ಪದಾರ್ಥಗಳನ್ನು ವಿತರಣೆ ಮಾಡುತ್ತಿದ್ದುದ್ದರಿಂದ ಗ್ರಾಹಕರಿಗೆ ಅನುಕೂಲವಾಯಿತು.

ನ್ಯಾಯಬೆಲೆ ಅಂಗಡಿಗಳು ಹಾಗೂ ಗ್ರಾಹಕರ ಸಹಕಾರಿ ಸಂಘಗಳ ಮೂಲಕ ಆಹಾರ ಪದಾರ್ಥಗಳನ್ನು ಗ್ರಾಹಕರಿಗೆ ಸರಬರಾಜು ಮಾಡಲಾಗುತ್ತಿತ್ತು. ಈ ಪದ್ಧತಿಯಡಿ ಹಲವು ಕಾಯಿದೆಗಳನ್ನು ರಾಜ್ಯ ಸರ್ಕಾರ ಜಾರಿಗೆ ತಂದಿತು. ಅವುಗಳಲ್ಲಿ ಮೈಸೂರು ಪ್ಯಾಡಿ (Paddy) ಪ್ರೊಕ್ಯೂರ್‌ಮೆಂಟ್ (ಲೆವಿ) ಆರ್ಡರ್ ೧೯೬೬, ದಿ ಮೈಸೂರು ಜವಾರ್ (Jowar) ಪ್ರೊಕ್ಯೂರ್‌ಮೆಂಟ್ (ಲೆವಿ) ಆರ್ಡರ್–೧೯೬೬, ದಿ ಮೈಸೂರು ರಾಗಿ ಪ್ರೊಕ್ಯೂರ್‌ಮೆಂಟ್ (ಲೆವಿ) ಆರ್ಡರ್–೧೯೬೬,

ದಿ ಮೈಸೂರ್ ಬಾಜ್ರ (Bajra) ಪ್ರೊಕ್ಯೂರ್‌ಮೆಂಟ್ (ಲೆವಿ) ಆರ್ಡರ್–೧೯೬೬ ಮುಖ್ಯವಾದವುಗಳಾಗಿವೆ. ೧೯೬೬–೬೭ರ ಅವಧಿಯಲ್ಲಿ ಆಹಾರ ಪದಾರ್ಥಗಳನ್ನು ಸಂಗ್ರಹಿಸುವ ಜವಾಬ್ದಾರಿಯನ್ನು ಸಹಕಾರಿ ಸಂಸ್ಥೆಗಳಿಗೆ ವಹಿಸಲಾಯಿತು. ಇವು ಖರೀದಿಸುವ ಏಜೆಂಟರಂತೆ ಕಾರ್ಯನಿರ್ವಹಿಸುತ್ತಿದ್ದವು. ಜಿಲ್ಲೆಯಲ್ಲಿ ೧೯೬೮ರಲ್ಲಿ ಆಹಾರ ಪದಾರ್ಥಗಳು ಹಾಗೂ ಇತರ ಗ್ರಾಹಕ ವಸ್ತುಗಳ ಸರಾಸರಿ ಸಗಟು ಮತ್ತು ಚಿಲ್ಲರೆ ಬೆಲೆಗಳನ್ನು ಕೋಷ್ಟಕ ೮.೬ರಲ್ಲಿ ನೀಡಲಾಗಿದೆ.

**ಕೋಷ್ಟಕ: ೮.೬ ೧೯೬೮ರಲ್ಲಿದ್ದ ಸರಾಸರಿ ಸಗಟು ಹಾಗೂ ಚಿಲ್ಲರೆ ಬೆಲೆಗಳ ವಿವರ**

| **ಕ್ರ.ಸಂ** | **ಸರಕುಗಳು** | ಸಗಟು ಬೆಲೆ (ಪ್ರತಿ ಕ್ವಿಂಟಾಲ್‌ಗೆ) ರೂ. ಗಳಲ್ಲಿ | **ಚಿಲ್ಲರೆ ಬೆಲೆ (ಪ್ರತಿ ಕ್ವಿಂಟಾಲ್‌ಗೆ) ರೂ. ಗಳಲ್ಲಿ** |
|---|---|---|---|
| ೧ | ಗೋಧಿ (ಆಮದು) | ೭೫–೦೦ | ೭೭–೦೦ |
| ೨ | ಕೆಂಪುಜೋಳ (ಆಮದು) | ೫೬–೦೦ | ೫೮–೦೦ |
| ೩ | ಜೋಳ (ಬಿಳಿ) | ೭೧–೦೦ | ೭೩–೦೦ |
| ೪ | ಸಜ್ಜೆ | ೭೧–೦೦ | ೭೩–೦೦ |
| ೫ | ರಾಗಿ | ೬೯–೦೦ | ೭೧–೦೦ |
| ೬ | ಅಕ್ಕಿ (ಉತ್ತಮ) | ೯೬–೦೦ | ೯೮–೦೦ |
| ೭ | ಅಕ್ಕಿ (ಮಧ್ಯಮದಲ್ಲಿ ಉತ್ತಮ) | ೯೧–೦೦ | ೯೩–೦೦ |
| ೮ | ಅಕ್ಕಿ (ಮಧ್ಯಮ) | ೮೭–೦೦ | ೮೯–೦೦ |
| ೯ | ಅಕ್ಕಿ (ದಪ್ಪ) | ೮೫–೦೦ | ೮೭–೦೦ |
| | **ಗೋಧಿ ಉತ್ಪನ್ನಗಳು** | | |
| ೧೦ | ಮೈದಾ | ೯೪–೦೦ | ೯೬–೦೦ |
| ೧೧ | ಸೋಜಿ (Soji) | ೯೮–೦೦ | ೧೦೦–೦೦ |
| ೧೨ | ಗೋಧಿಹಿಟ್ಟು | ೭೬–೦೦ | ೭೮–೦೦ |
| ೧೩ | ಸಕ್ಕರೆ | ೧೭೩–೦೦ ನಿಯಂತ್ರಣದ ಬೆಲೆಗಳಲ್ಲಿ | ೧೭೫–೦೦ |

**ಆಧಾರ: ತುಮಕೂರು ಜಿಲ್ಲಾ ಗ್ಯಾಸೆಟಿಯರ್ – ೧೯೬೯.**

ಜಿಲ್ಲೆಯಲ್ಲಿ ೧೯೮೦ರಲ್ಲಿ ಅಕ್ಕಿಯ (ಉತ್ತಮ) ಸಗಟುಬೆಲೆ ಕ್ವಿಂಟಾಲ್‌ಗೆ ರೂ. ೨೩೫.೮೩ ಗಳಾಗಿದ್ದರೆ, ಇದು ೧೯೯೦ ರಲ್ಲಿ ರೂ. ೬೩೪.೫೮ ಗಳಿಗೂ, ೨೦೦೦ ದಲ್ಲಿ ರೂ. ೧೪೭೯.೪೨ಗಳಿಗೂ, ೨೦೧೦ ರಲ್ಲಿ ರೂ. ೨೯೬೩ ಗಳಿಗೂ ಹೆಚ್ಚಳಗೊಂಡಿತ್ತು. ಜೋಳ (ಬಿಳಿ)ದ ಬೆಲೆ ೧೯೮೦ ರಲ್ಲಿ ರೂ. ೯೧ ಗಳಿಗೂ, ೧೯೯೦ ರಲ್ಲಿ ರೂ. ೩೭೫.೨೮ ಗಳಿಗೂ ಹಾಗೂ ೨೦೧೦ ರಲ್ಲಿ ರೂ. ೧೫೪೬ ಗಳಿಗೂ ಹೆಚ್ಚಳಗೊಂಡಿತ್ತು. ಈರುಳ್ಳಿಯ ಬೆಲೆ ೧೯೮೦, ೧೯೯೦, ೨೦೦೦ ಹಾಗೂ ೨೦೧೦ ರಲ್ಲಿ ಕ್ರಮವಾಗಿ ರೂ. ೬೬.೨೫, ರೂ. ೨೭೫.೨೧, ರೂ. ೫೪೩.೭೫ ಹಾಗೂ ರೂ. ೧೨೩೮ ಹೆಚ್ಚಳಗೊಂಡಿರುತ್ತದೆ. ಹಾಗೆಯೇ ಅಕ್ಕಿಯ (ಉತ್ತಮ) ಚಿಲ್ಲರೆ ಬೆಲೆ ಪ್ರತಿ ಕೆ.ಜಿಗೆ ೧೯೮೦ ರಲ್ಲಿ ರೂ. ೨.೫೦ ಪೈಸೆಗೂ, ೧೯೯೦ರಲ್ಲಿ ರೂ. ೬.೪೫ ಪೈಸೆಗೂ, ೨೦೦೦ ರಲ್ಲಿ ರೂ. ೧೫.೬೬ ಪೈಸೆಗೂ ಹಾಗೂ ೨೦೧೦ ರಲ್ಲಿ ರೂ. ೩೨.೨೧ ಪೈಸೆಗೂ ಹೆಚ್ಚಳಗೊಂಡಿರುತ್ತದೆ. ಒಣಮೆಣಸಿನಕಾಯಿ ೧೯೮೦ ರಲ್ಲಿ ಪ್ರತಿ ಕೆ.ಜಿ.ಗೆ ರೂ. ೮.೬೩ ಪೈಸೆಗೂ, ೧೯೯೦ ರಲ್ಲಿ ರೂ. ೨೧.೯೨ ಪೈಸೆಗೂ ಹಾಗೂ ೨೦೧೦ರಲ್ಲಿ ರೂ. ೬೪.೫೮ ಪೈಸೆಗೂ ಹೆಚ್ಚಳಗೊಂಡಿರುವುದು ಗಮನಾರ್ಹವಾಗಿದೆ. ಕೋಷ್ಟಕ ೮.೭ ಹಾಗೂ ಕೋಷ್ಟಕ ೮.೮ರಲ್ಲಿ ೧೯೮೦ರಿಂದ ೨೦೧೩ರ ವರೆಗೆ ಸಗಟು ಹಾಗೂ ಚಿಲ್ಲರೆ ಬೆಲೆಯನ್ನು ನೀಡಲಾಗಿದೆ.

## ಕೋಷ್ಟಕ: ೮.೭ ತುಮಕೂರು ಜಿಲ್ಲೆಯಲ್ಲಿ ೧೯೮೦ ರಿಂದ ೨೦೧೩ರ ವರೆಗೆ ಅಗತ್ಯ ವಸ್ತುಗಳ ಸಗಟು ಬೆಲೆ

(ಕ್ವಿಂಟಾಲ್‌ಗೆ ರೂ. ಗಳಲ್ಲಿ)

| ಕ್ರ.ಸಂ | ಪದಾರ್ಥಗಳು | ವರ್ಷ | | | | | | | | | | | | | | |
|---|---|---|---|---|---|---|---|---|---|---|---|---|---|---|---|---|
| | | ೧೯೮೦ | ೧೯೮೧ | ೧೯೯೦ | ೧೯೯೧ | ೨೦೦೦ | ೨೦೦೧ | ೨೦೦೫ | ೨೦೦೬ | ೨೦೦೭ | ೨೦೦೮ | ೨೦೦೯ | ೨೦೧೦ | ೨೦೧೧ | ೨೦೧೨ | ೨೦೧೩ |
| ೧ | ಬತ್ತ | ೧೨೧.೪೩ | ೧೬೮.೭೭ | ೨೯೬.೪೬ | ೩೭೧.೪೬ | ೭೨೬.೦೮ | ೬೩೩.೩೩ | ೮೫೭.೦೦ | ೯೪೮.೦೦ | ೯೬೦.೦೦ | ೧೨೦೫.೦೦ | ೧೪೨೧.೦೦ | ೧೪೪೬.೦೦ | ೧೪೦೬ | ೧೫೬೭ | ೨೦೮೧ |
| ೨ | ಅಕ್ಕಿ (ಉತ್ತಮ) | ೨೩೫.೮೩ | ೨೯೯.೬೯ | ೬೩೪.೫೮ | ೭೩೧.೧೫ | ೧೪೭೯.೪೨ | ೧೪೭೫.೦೦ | ೧೭೭೫.೦೦ | ೧೮೩೭.೦೦ | ೧೭೪೮.೦೦ | ೨೧೨೧.೦೦ | ೨೯೭೫.೦೦ | ೨೯೬೩.೦೦ | ೨೭೩೧ | ೩೫೩೮ | ೪೪೬೦ |
| ೩ | ಅಕ್ಕಿ (ಮಧ್ಯಮ) | ೧೯೭.೩೫ | ೨೭೨.೬೦ | ೫೪೦.೪೨ | ೬೩೩.೦೮ | ೧೨೪೧.೭೭ | ೧೩೦೬.೨೫ | ೧೫೪೫.೦೦ | ೧೫೦೨.೦೦ | ೧೩೮೧.೦೦ | ೧೬೯೦.೦೦ | ೨೫೭೫.೦೦ | ೨೪೫೮.೦೦ | – | – | – |
| ೪ | ಜೋಳ (ಬಿಳಿ) | ೯೧ | ೧೪೫.೨೩ | ೩೭೫.೨೮ | ೩೬೮.೭೫ | – | ೫೮೭.೫೦ | ೭೦೮.೦೦ | ೬೫೮.೦೦ | ೯೭೧.೦೦ | ೧೦೮೩.೦೦ | ೧೨೨೧.೦೦ | ೧೫೪೬.೦೦ | ೧೮೦೪ | ೨೦೭೧ | ೨೫೦೨ |
| ೫ | ಉದ್ದು | ೩೮೫.೪೨ | – | ೮೮೧.೨೫ | ೯೧೫.೭೧ | – | – | – | – | ೩೧೯೭.೦೦ | ೩೧೨೫.೦೦ | ೩೪೨೫.೦೦ | ೩೭೦೦.೦೦ | ೪೩೨೧ | ೪೨೫೮ | ೫೭೮೦ |
| ೬ | ಹುರುಳಿ | ೧೯೭.೬೯ | ೧೮೯.೬೫ | ೩೮೦.೨೧ | ೩೮೫.೨೮ | – | ೮೧೫.೮೩ | ೭೫೯.೦೦ | ೯೪೦.೦೦ | ೧೦೦೨.೦೦ | ೧೨೪೬.೦೦ | ೨೭೦೮.೦೦ | ೨೩೦೪.೦೦ | ೨೦೯೨ | ೨೧೨೫ | ೨೭೮೫ |
| ೭ | ಅಲಸಂದೆ | ೨೮೯.೪೬ | ೩೭೯.೭೭ | ೬೫೦.೦೦ | ೬೯೬.೯೪ | – | ೧೪೨೨.೯೨ | ೧೫೬೮.೦೦ | ೧೯೯೦.೦೦ | ೧೮೬೩.೦೦ | ೨೨೮೮.೦೦ | ೩೧೧೫.೦೦ | ೩೪೬೭.೦೦ | ೨೮೮೩ | ೪೪೮೩ | ೪೦೩೩ |
| ೮ | ಒಣಮೆಣಸಿನ ಕಾಯಿ | ೭೧೩.೩೩ | ೮೬೬.೫೦ | ೨೧೦೨.೦೮ | ೨೨೧೦.೮೩ | – | ೫೮೭೫.೦೦ | ೫೩೪೨.೦೦ | ೬೫೦೪.೦೦ | ೭೮೫೦.೦೦ | ೮೦೮೮.೦೦ | ೬೬೬೭.೦೦ | ೫೪೪೬.೦೦ | ೮೪೧೭ | ೯೫೫೮ | ೧೨೬೬೭ |
| ೯ | ಈರುಳ್ಳಿ | ೬೬.೨೫ | ೧೦೩.೧೩ | ೨೭೫.೨೧ | ೩೪೦.೦೦ | ೫೪೩.೭೫ | ೫೯೧.೬೭ | ೫೬೭.೦೦ | ೩೪೬.೦೦ | ೧೧೩೩.೦೦ | ೮೬೫.೦೦ | ೧೧೯೬.೦೦ | ೧೨೩೮.೦೦ | ೧೪೦೦ | ೧೦೨೯ | ೨೮೩೮ |
| ೧೦ | ಆಲೂಗೆಡ್ಡೆ | ೧೬೪.೩೮ | ೧೪೭.೧೭ | ೨೫೮.೪೪ | ೩೩೩.೮೯ | ೪೦೦.೦೦ | ೬೮೩.೩೩ | ೮೩೮.೦೦ | ೭೯೧.೦೦ | ೧೦೭೭.೦೦ | ೧೦೦೦.೦೦ | ೧೨೯೬.೦೦ | ೧೩೯೪.೦೦ | ೧೨೦೮ | ೧೩೫೮ | ೨೧೦೨ |
| ೧೧ | ತೆಂಗಿನಕಾಯಿ (ಸಾವಿರಕ್ಕೆ) | ೯೮೪.೯೦ | ೧೧೦೫.೯೪ | ೨೨೫೫.೨೦ | ೩೩೧೨.೫೦ | ೪೪೫೯.೪೨ | ೩೭೬೨.೫೦ | ೭೩೩೩.೦೦ | ೪೫೯೪.೦೦ | ೫೨೧೭.೦೦ | ೬೫೨೯.೦೦ | ೬೪೭೯.೦೦ | ೬೬೦೪.೦೦ | ೭೯೦೪ | ೭೩೦೮ | ೮೧೩೩ |
| ೧೨ | ಸಜ್ಜೆ | – | – | – | – | – | ೫೩೬.೬೭ | ೫೧೪.೦೦ | ೫೯೨.೦೦ | ೯೦೨.೦೦ | ೯೭೦.೦೦ | ೧೦೪೮.೦೦ | ೧೩೪೦.೦೦ | ೧೬೨೫ | ೧೩೮೫ | – |
| ೧೩ | ಗೋಧಿ (ಬಿಳಿ) | ೧೮೮.೭೧ | ೨೧೬.೭೯ | – | ೪೨೦.೬೩ | ೧೨೬೦.೦೦ | ೯೯೩.೭೫ | ೧೨೫೦.೦೦ | ೧೩೫೮.೦೦ | ೧೫೬೩.೦೦ | ೧೫೩೩.೦೦ | ೧೭೩೮.೦೦ | ೧೯೬೯.೦೦ | ೧೮೬೭ | ೨೧೨೭ | ೨೫೨೧ |
| ೧೪ | ಹುಣಸೆ ಹಣ್ಣು | ೫೭೯.೪೬ | ೫೧೫.೩೮ | ೮೯೨.೭೧ | ೧೧೩೭.೭೮ | ೩೦೦೬.೨೫ | ೨೪೭೦.೮೩ | ೩೯೨೯.೦೦ | ೨೭೪೬.೦೦ | ೩೬೨೩.೦೦ | ೪೦೮೫.೦೦ | ೩೯೯೨.೦೦ | ೪೭೫೪.೦೦ | ೬೫೬೭ | ೫೭೩೩ | ೭೩೧೦ |

ಆಧಾರ: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು

## ಕೋಷ್ಟಕ: ೮.೮ ತುಮಕೂರು ಜಿಲ್ಲೆಯಲ್ಲಿ ೧೯೮೦ ರಿಂದ ೨೦೧೩ ರವರೆಗೆ ಅಗತ್ಯ ವಸ್ತುಗಳ ಚಿಲ್ಲರೆ ಬೆಲೆ

(ಕೆ.ಜಿ.ಗೆ) (ರೂ.ಗಳಲ್ಲಿ)

| ಕ್ರ.ಸಂ | ಪದಾರ್ಥಗಳು | ವರ್ಷ | | | | | | | | | | | | | | |
|---|---|---|---|---|---|---|---|---|---|---|---|---|---|---|---|---|
| | | ೧೯೮೦ | ೧೯೮೧ | ೧೯೯೦ | ೧೯೯೧ | ೨೦೦೦ | ೨೦೦೧ | ೨೦೦೫ | ೨೦೦೬ | ೨೦೦೭ | ೨೦೦೮ | ೨೦೦೯ | ೨೦೧೦ | ೨೦೧೧ | ೨೦೧೨ | ೨೦೧೩ |
| ೧ | ಅಕ್ಕಿ (ಉತ್ತಮ) | ೨.೫೦ | ೩.೧೫ | ೬.೫೯ | ೭.೬೦ | ೧೫.೬೬ | ೧೬.೫೪ | ೧೯.೧೦ | ೨೧.೫೬ | ೧೯.೨೫ | ೨೩.೨೫ | ೩೩.೭೫ | ೩೨.೨೧ | ೩೦ | ೩೭ | ೪೯ |
| ೨ | ಅಕ್ಕಿ (ಮಧ್ಯಮ) | ೨.೧೮ | ೨.೮೮ | ೫.೭೬ | ೬.೬೮ | ೧೩.೨೬ | ೧೪.೬೩ | ೧೬.೬೭ | ೧೮.೦೦ | ೧೫.೮೩ | ೧೯.೦೮ | ೨೯.೦೪ | ೨೬.೯೬ | ೨೪ | ೩೧ | ೪೪ |
| ೩ | ಜೋಳ (ಬಿಳಿ) | ೧.೦೯ | ೧.೬೬ | ೩.೫೯ | ೪.೩೫ | – | ೭.೧೦ | ೮.೫೦ | ೮.೮೩ | ೧೧.೭೫ | ೧೨.೭೯ | ೧೪.೨೧ | ೧೭.೫೮ | ೨೧ | ೨೩ | ೨೭ |
| ೪ | ಉದ್ದು | ೪.೨೪ | – | ೯.೩೦ | ೧೦.೪೯ | – | – | – | ೩೮.೦೦ | ೩೫.೯೬ | ೩೪.೬೩ | ೩೮.೭೯ | ೪೩.೫೪ | ೪೭ | ೪೪ | ೬೦ |
| ೫ | ಹುರುಳಿ | ೧.೪೧ | ೨.೦೭ | ೪.೧೯ | ೪.೨೮ | – | ೯.೮೫ | ೯.೨೫ | ೧೨.೯೦ | ೧೨.೭೧ | ೧೪.೬೩ | ೨೦.೯೨ | ೨೬.೬೭ | ೨೩ | ೨೩ | ೩೪ |
| ೬ | ಅಲಸಂದೆ | ೩.೦೮ | ೩.೯೯ | ೬.೯೦ | ೮.೬೪ | ೩೧.೫೬ | ೧೬.೪೬ | ೧೮.೩೮ | ೨೪.೪೨ | ೨೨.೨೯ | ೨೯.೨೫ | ೩೪.೯೬ | ೩೯.೫೮ | ೩೫ | ೪೭ | ೪೫ |
| ೭ | ಒಣಮೆಣಸಿನ ಕಾಯಿ | ೮.೬೩ | ೧೦.೭೧ | ೨೧.೯೨ | ೩೩.೦೬ | – | ೬೭.೭೧ | ೬೦.೭೯ | ೭೨.೨೧ | ೯೨.೪೬ | ೯೨.೦೮ | ೭೫.೮೩ | ೬೪.೫೮ | ೯೮ | ೯೯ | ೧೩೨ |
| ೮ | ಈರುಳ್ಳಿ | ೦.೮೪ | ೧.೩೮ | ೩.೨೩ | ೩.೬೭ | ೫.೪೨ | ೭.೬೭ | ೮.೩೮ | ೫.೨೯ | ೧೪.೭೯ | ೧೧.೦೦ | ೧೪.೭೫ | ೧೬.೩೩ | ೧೮ | ೧೩ | ೩೩ |
| ೯ | ಆಲೂಗಡ್ಡೆ | ೧.೮೫ | ೧.೭೧ | ೩.೧೧ | ೩.೯೨ | ೫.೯೬ | ೮.೮೮ | ೯.೯೨ | ೧೧.೪೨ | ೧೩.೫೪ | ೧೨.೨೫ | ೧೬.೯೨ | ೧೭.೭೫ | ೧೬ | ೧೯ | ೨೬ |
| ೧೦ | ತೆಂಗಿನಕಾಯಿ (ಒಂದಕ್ಕೆ) | ೧.೨೭ | ೧.೬೨ | ೨.೭೩ | ೪.೨೧ | ೫.೦೦ | ೪.೭೯ | ೯.೨೧ | ೬.೦೦ | ೬.೫೦ | ೮.೦೮ | ೮.೨೧ | ೮.೨೧ | ೧೧ | ೯ | ೧೧ |
| ೧೧ | ಸಜ್ಜೆ | – | – | – | – | – | ೬.೫೦ | ೬.೧೩ | ೮.೦೮ | ೧೧.೦೦ | ೧೧.೫೮ | ೧೨.೫೪ | ೧೫.೫ | ೧೯ | ೧೬ | – |
| ೧೨ | ಗೋಧಿ | ೨.೦೫ | ೨.೫೦ | ೪.೬೩ | ೪.೩೯ | – | ೧೧.೩೩ | ೧೩.೯೬ | ೧೬.೨೯ | ೧೮.೩೮ | ೧೭.೪೬ | ೨೦.೦೪ | ೨೨.೨೫ | ೨೧ | ೨೩ | ೨೭ |
| ೧೩ | ಹುಣಸೆಹಣ್ಣು | ೬.೭೨ | ೬.೦೭ | ೧೦.೧೩ | ೧೩.೬೫ | ೩೨.೯೦ | ೨೯.೬೩ | ೪೩.೫೮ | ೩೧.೯೨ | ೩೯.೬೭ | ೪೫.೭೫ | ೪೬.೨೫ | ೫೪.೭೯ | ೭೩ | ೫೯ | ೭೫ |
| ೧೪ | ಹರಳು | – | ೩.೭೬ | ೫.೯೩ | – | – | ೧೭.೭ | – | – | ೨೦.೦೪ | ೨೯.೭೫ | ೬೬.೮೮ | ೪೪.೭೯ | ೩೬ | ೪೦ | ೩೪ |

ಆಧಾರ: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು

# ಕೂಲಿ

**ನಗರ ಪ್ರದೇಶದಲ್ಲಿ ಕೂಲಿ :** ಯಾವುದೇ ಒಂದು ಪ್ರದೇಶದ ಕೂಲಿಯ ಸೂಚ್ಯಂಕ ಆಯಾ ಪ್ರದೇಶದ ಬೆಲೆ ಸೂಚ್ಯಂಕದೊಂದಿಗೆ ನಿಕಟ ಸಂಬಂಧವಿರುತ್ತದೆ ಹಾಗೂ ಅಗತ್ಯ ಸರಕುಗಳ ಬೆಲೆಯಲ್ಲಿ ಹೆಚ್ಚಳ ಉಂಟಾದರೆ, ಕೂಲಿಯ ದರದಲ್ಲೂ ಹೆಚ್ಚಳ ಕಂಡುಬರುತ್ತದೆ. ಈ ಪ್ರವೃತ್ತಿ ಹಣದುಬ್ಬರದ ಅವಧಿಯ ಭಾಗವಾಗಿದೆ. ತುಮಕೂರು ಜಿಲ್ಲೆಯಲ್ಲಿನ ಕೂಲಿಯ ಬಗ್ಗೆ ಚರ್ಚಿಸಿದಾಗ, ಸರಾಸರಿ ಕೂಲಿದರ ಗೋಚರಿಸುತ್ತದೆ. ಕೂಲಿ ಸ್ಥಳದಿಂದ ಸ್ಥಳಕ್ಕೆ ಆಯಾ ಸ್ಥಳದ ಆರ್ಥಿಕ ಸ್ಥಿತಿಗತಿಗನುಗುಣವಾಗಿ ನಿರ್ಧರಿಸಲ್ಪಡುತ್ತದೆ. ತುಮಕೂರು ಜಿಲ್ಲೆಯಲ್ಲಿ ೧೯೬೮ರಲ್ಲಿ ಸರಾಸರಿ ದಿನಗೂಲಿ ದರ ಪ್ರತಿದಿನಕ್ಕೆ ರೂ.೧.೫೦ ರಿಂದ ರೂ. ೨.೦೦ ಆಗಿತ್ತು. ಭೌಗೋಳಿಕ ಪ್ರದೇಶದ ಜೊತೆಗೆ ಜನಸಂಖ್ಯೆ ಹೆಚ್ಚಳವಾಗಿರುವ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕೂಲಿಯ ದರ ಹೆಚ್ಚಾಗಿದ್ದು, ಕಾರ್ಮಿಕರಿಗೆ ಬೇಡಿಕೆ ಹೆಚ್ಚಾಗಿದ್ದರೆ, ಕೂಲಿಯ ಪ್ರಮಾಣವು ಹೆಚ್ಚಾಗಿರುತ್ತದೆ. ಗೃಹ ಬಳಕೆಯ ಕೂಲಿ ಕಾರ್ಮಿಕರಲ್ಲಿನ ಕೂಲಿ ಯಾವುದೇ ವೈಜ್ಞಾನಿಕ ಮಾನದಂಡವಿಲ್ಲದೆ ನಿಗದಿಯಾಗುತ್ತಿತ್ತು. ಅಲ್ಲದೆ ಇದು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುತ್ತಿತ್ತು. ಇನ್ನೂ ಕೆಲವು ಸ್ಥಳಗಳಲ್ಲಿ ಪೂರ್ಣಮಟ್ಟದ ಗೃಹಬಳಕೆಯ ಕೆಲಸಗಾರರಿಗೆ ಊಟೋಪಚಾರಗಳೊಂದಿಗೆ ಅಥವಾ ಊಟೋಪಚಾರವಿಲ್ಲದೆ ತಿಂಗಳಿಗೆ ಕೂಲಿ ಪಡೆಯುತ್ತಿದ್ದರು. ಇನ್ನು ಕೆಲವು ಸ್ಥಳಗಳಲ್ಲಿ ಅರೆ ಕಾಲಿಕ ಕೆಲಸ ಅಥವಾ ಗಂಟೆಯ ಆಧಾರದ ಮೇಲೆ ಕೆಲಸ ಮಾಡುತ್ತಿದ್ದರು. ಈ ಎಲ್ಲಾ ಸಂದರ್ಭಗಳಲ್ಲೂ ಕೂಲಿಯನ್ನು ವೈಜ್ಞಾನಿಕವಾಗಿ ನಿಗದಿ ಪಡಿಸುತ್ತಿರಲಿಲ್ಲ. ಸಾಮಾನ್ಯವಾಗಿ ಕೂಲಿಯು ಪ್ರತಿ ತಿಂಗಳಿಗೆ ರೂ. ೪೦.೦೦ಗಳಿಂದ ರೂ. ೫೦.೦೦ ಆಗಿತ್ತು. ಅರೆಕಾಲಿಕ ಕೆಲಸಗಾರರಿಗೆ ಪ್ರತಿ ತಿಂಗಳಿಗೆ ರೂ. ೧೫.೦೦ ರಿಂದ ರೂ. ೨೦.೦೦ ಆಗಿತ್ತು. ಇದು ಕೆಲಸದ ಆಧಾರದ ಮೇಲೆ ನಿಗದಿಯಾಗುತ್ತಿತ್ತು. ಖಾಸಗಿ ಸಂಸ್ಥೆಯಲ್ಲಿ ಕಛೇರಿ ಪರಿಚಾರಕರಾಗಿ ಕೆಲಸ ಮಾಡುತ್ತಿದ್ದರೆ, ತಿಂಗಳಿಗೆ ರೂ. ೬೦.೦೦ ರಿಂದ ರೂ. ೭೦.೦೦ ಗಳನ್ನು ಪಡೆಯುತ್ತಿದ್ದರು. ಸರ್ಕಾರದ ಕಛೇರಿಯ ಒಬ್ಬ ನಾಲ್ಕನೇ ದರ್ಜೆಯ ನೌಕರನಿಗೆ ಮೂಲ ವೇತನ ರೂ. ೫೦.೦೦ಗಳು ಅದಕ್ಕೆ ತುಟ್ಟಿಭತ್ಯೆ ಹಾಗೂ ಇತರೆ ಭತ್ಯೆಗಳು ಕಾಲಕಾಲಕ್ಕೆ ಸಿಗುತ್ತಿದ್ದವು. ಇದು ೧೯೬೮ರಲ್ಲಿದ್ದ ತುಟ್ಟಿಭತ್ಯೆಯಂತೆ ಲಭ್ಯವಿತ್ತು.

ನಗರ ಪ್ರದೇಶಗಳಲ್ಲಿ ಕೂಲಿ ಪಡೆಯುವವರ ಪೈಕಿ ಮೋಟಾರು ಚಾಲಕರು ಪ್ರಮುಖರಾಗಿದ್ದು, ೧೯೬೮ರಲ್ಲಿ ಪ್ರಮುಖ ನಗರಗಳಾಗಿದ್ದ ತುಮಕೂರು, ತಿಪಟೂರು ಹಾಗೂ ಗುಬ್ಬಿ ಪಟ್ಟಣಗಳಲ್ಲಿ ಹಲವಾರು ವ್ಯಾಪಾರಿಗಳು ಮತ್ತು ಅಧಿಕಾರಿಗಳ ವರ್ಗವಿತ್ತು, ಹೀಗೆ ಆರ್ಥಿಕವಾಗಿ ಸದೃಢರಾಗಿದ್ದ ಇವರುಗಳು ಸ್ವಂತ ಕಾರು ಅಥವಾ ಲಾರಿಗಳನ್ನು ಹೊಂದಿದ್ದು, ಚಾಲಕರನ್ನು ಅವಲಂಬಿಸಿದ್ದರು. ಕಾರು ಚಾಲಕನು ತಿಂಗಳಿಗೆ ರೂ. ೭೫.೦೦ ರಿಂದ ರೂ. ೯೦.೦೦ ಪಡೆಯುತ್ತಿದ್ದರು, ಭಾರಿ ಮೋಟಾರು (ಲಾರಿ, ಟ್ರಕ್ಸ್) ಚಾಲಕರು ಅಧಿಕ ಕೂಲಿ ಪಡೆಯುತ್ತಿದ್ದರು. ಅಂತಹ ಹೋಲಿಕೆ ಇರುವ ಖಾಸಗಿ ಕಂಪನಿಗಳಲ್ಲಿ ಬಸ್ಸು ಚಾಲಕರಿಗೆ ತಿಂಗಳಿಗೆ ರೂ. ೧೦೦ ರಿಂದ ರೂ. ೧೨೦.೦೦ಗಳು ಇದರ ಜೊತೆಗೆ ಹೆಚ್ಚುವರಿ ತುಟ್ಟಿಭತ್ಯೆಗಳು ಸಿಗುತ್ತಿತ್ತು. ಕುಶಲ ಕೆಲಸಗಾರರಾದ ಬಡಗಿ, ಕಮ್ಮಾರ, ಟೈಲರ್ ಹಾಗೂ ಕ್ಷೌರಿಕ ವೃತ್ತಿಯವರು ಕುಶಲರಲ್ಲದ ಕಾರ್ಮಿಕರಿಗಿಂತ ಸುಲಭವಾಗಿ ಎರಡು ಪಟ್ಟು ಹೆಚ್ಚು ಕೂಲಿ ಪಡೆಯುತ್ತಿದ್ದರು.

**ಗ್ರಾಮೀಣ ಪ್ರದೇಶದಲ್ಲಿ ಕೂಲಿ :** ಜಿಲ್ಲೆಯು ವ್ಯವಸಾಯ ಪ್ರಧಾನವಾದ ಜಿಲ್ಲೆಯಾಗಿದ್ದು, ಶೇ. ೭೯.೯೬ರಷ್ಟು ಜನರು ಕೃಷಿಯನ್ನು ತಮ್ಮ ಜೀವನೋಪಾಯಕ್ಕಾಗಿ ಅವಲಂಬಿಸಿದ್ದಾರೆ. ಇದು ಸಣ್ಣ ವ್ಯವಸಾಯಗಾರರು ಹಾಗೂ ಕೃಷಿ ಕಾರ್ಮಿಕರ ಜೀವನವನ್ನು ದುಸ್ತರಗೊಳಿಸಿತು. ಹಾಗಾಗಿ ಕೆಲವರು ಉದ್ಯೋಗ ಹರಸಿಕೊಂಡು ನಗರ ಪ್ರದೇಶಗಳಿಗೆ ವಲಸೆ ಹೋಗಬೇಕಾಯಿತು. ಕಾರಣ ಕೃಷಿ ಉತ್ಪತ್ತಿಯಿಂದ ತಮ್ಮ ಜೀವನ ನಿರ್ವಹಣೆ ಕಷ್ಟವಾಯಿತು. ಕೃಷಿ ಕ್ಷೇತ್ರದಲ್ಲಿ ದುಡಿಯುವ ವರ್ಗ ಕಡಿಮೆಯಾದಂತೆ ಕೂಲಿಯ ದರವು ಹೆಚ್ಚಳಗೊಂಡಿತು. ಗ್ರಾಮೀಣ ಪ್ರದೇಶದಲ್ಲಿ ಕೂಲಿಯನ್ನು ನೀಡುವುದು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆ ಕಂಡು ಬಂತು. ಕೂಲಿಯನ್ನು ದಿನಕ್ಕೆ, ವಾರಕ್ಕೆ ಹಾಗೂ ತಿಂಗಳಿಗೊಮ್ಮೆ ನೀಡುತ್ತಿದ್ದು, ಇದು ಹಣದ ರೂಪದಲ್ಲೂ, ಕೆಲವು ಕಡೆ ವಸ್ತುಗಳ ರೂಪದಲ್ಲೂ ಸಂದಾಯವಾಗುತ್ತಿತ್ತು.

ಜಿಲ್ಲೆಯಲ್ಲಿ ೧೯೫೯ರಲ್ಲಿ ದಿನಗೂಲಿಯು ಪುರುಷ ಕಾರ್ಮಿಕರಿಗೆ ರೂ. ೧.೨೫ ರಿಂದ ರೂ. ೨.೫೦ ಗಳವರೆಗಿದ್ದರೆ, ಮಹಿಳಾ ಕಾರ್ಮಿಕರಿಗೆ ರೂ. ೧.೦೦ ಗಳಿಂದ ರೂ. ೧.೫೦ ಗಳವರೆಗೆ ಲಭಿಸುತ್ತಿತ್ತು. ಕೃಷಿ ಕಾರ್ಮಿಕರು ಋತು ಕಾಲಗಳನ್ನು ಹೊರತು ಪಡಿಸಿದರೆ, ಉಳಿದ ಸಂದರ್ಭಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಿಗುತ್ತಿದ್ದರು. ಮಹಿಳೆಯರಿಗಿಂತ

ಪುರುಷರು ಶ್ರಮದ ಹಾಗೂ ಕಠಿಣ ಕೆಲಸಗಳನ್ನು ಮಾಡುತ್ತಿದ್ದರಿಂದ ಪುರುಷರಿಗೆ ಮಹಿಳೆಯರಿಗಿಂತ ಹೆಚ್ಚಿನ ಕೂಲಿ ಸಿಗುತ್ತಿತ್ತು. ಅವರು ದಿನಕ್ಕೆ ಎಂಟು ಗಂಟೆಗಳಿಗಿಂತಲೂ ಹೆಚ್ಚು ಕೆಲಸ ಮಾಡುತ್ತಿದ್ದರು. ಕನಿಷ್ಠ ಕೂಲಿ ನಿಯಮ ೧೯೪೮ ರಂತೆ ೧೯೪೮ ರ ಕೇಂದ್ರ ಕಾಯಿದೆ ಅಧಿನಿಯಮ XI ರ ಪ್ರಕಾರ ರಾಜ್ಯ ಸರ್ಕಾರ ವಿವಿಧ ವರ್ಗಗಳ ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ೧೯೫೯ರಲ್ಲಿ ನಿಗದಿಗೊಳಿಸಿತು. ಈ ಕೂಲಿಯ ದರಗಳು ೧೯೬೮ರಲ್ಲಿ ಪರಿಷ್ಕರಣೆಗೊಂಡಿದ್ದು, ಅದರ ವಿವರಗಳನ್ನು ಕೋಷ್ಟಕ ೮.೯ರಲ್ಲಿ ನೀಡಲಾಗಿದೆ.

### ಕೋಷ್ಟಕ ೮.೯ರಲ್ಲಿ ೧೯೫೯ ಹಾಗೂ ೧೯೬೮ರಲ್ಲಿದ್ದ ಕನಿಷ್ಠ ಕೂಲಿಯ ದರಗಳ ವಿವರ

| ವರ್ಗ | ಒಣಭೂಮಿ | | ನೀರಾವರಿ ಭೂಮಿ | | ಬಾಗಾಯ್ತು | |
|---|---|---|---|---|---|---|
| | ೧೯೫೯ ರೂ. ಪೈ. | ೧೯೬೮ ರೂ.ಪೈ. | ೧೯೫೯ ರೂ. ಪೈ. | ೧೯೬೮ ರೂ. ಪೈ. | ೧೯೫೯ ರೂ. ಪೈ. | ೧೯೬೮ ರೂ. ಪೈ. |
| **ವರ್ಗ–ಎ** | | | | | | |
| ಉಳುವುದು, ಅಗೆಯುವುದು, ಕುಂಟೆ ಹೊಡೆಯುವುದು, ಬೀಜ ಬಿತ್ತುವುದು, ಇಂಟರ್ ಕಲ್ಚರಿಂಗ್, ನೀರಾಯಿಸುವುದು, ಬೇರು ತೆಗೆಯುವುದು | ೧.೨೫ | ೧.೮೫ | ೧.೫೦ | ೨.೨೦ | ೧.೭೫ | ೨.೫೫ |
| **ವರ್ಗ–ಬಿ** | | | | | | |
| ಗೊಬ್ಬರ ಹಾಕುವುದು, ನಾಟಿ ಮಾಡುವುದು, ಕಳೆ ತೆಗೆಯುವುದು ಸೇರಿದಂತೆ ಒಕ್ಕಣೆ, ತೂರುವಿಕೆ ಪ್ಯಾಕಿಂಗ್ (ಕಾಟನ್ ಆಗಿದ್ದರೆ) | ೧.೦೦ | ೧.೪೫ | ೧.೧೨ | ೧.೬೫ | ೧.೩೭ | ೨.೦೦ |
| **ವರ್ಗ–ಸಿ** | | | | | | |
| ದನ, ಕುರಿ ಹಾಗೂ ಮೇಕೆ ಮೇಯಿಸುವಿಕೆ | ೦.೫೦ | ೦.೭೫ | ೦.೫೦ | ೦.೭೫ | ೦.೫೦ | ೦.೭೫ |

**ಆಧಾರ: ತುಮಕೂರು ಜಿಲ್ಲಾ ಗ್ಯಾಸೆಟಿಯರ್ ೧೯೬೯**

ಜಿಲ್ಲೆಯಲ್ಲಿ ೧೯೬೮ರಲ್ಲಿ ಯುವಕರಿಗೆ ಹಾಗೂ ಮಕ್ಕಳಿಗೆ ತಿಂಗಳಿಗೆ ವರ್ಗ–ಎ ನಲ್ಲಿ ಕೆಲಸ ಮಾಡುವ ಖಾಯಂ ಕಾರ್ಮಿಕರಿಗೆ ಊಟ ಹಾಗೂ ಬಟ್ಟೆಯ ಜೊತೆಗೆ ರೂ. ೨೨.೦೫ ಕೂಲಿ ನೀಡುತ್ತಿದ್ದರೆ, ಊಟ ಮತ್ತು ಬಟ್ಟೆ ನೀಡದಿದ್ದ ಪಕ್ಷದಲ್ಲಿ ರೂ. ೪೪.೦೫ ಕೂಲಿ ನೀಡಲಾಗುತ್ತಿತ್ತು. ಹಾಗೆಯೇ ವರ್ಗ–‘ಬಿ’ನಲ್ಲಿ ಕೆಲಸ ಮಾಡುವವರಿಗೆ ಊಟ ಮತ್ತು ಬಟ್ಟೆಯ ಜೊತೆಗೆ ರೂ. ೧೪.೭೦ ಇದ್ದರೆ, ಊಟ ಮತ್ತು ಬಟ್ಟೆ ಇಲ್ಲದಿದ್ದರೆ ರೂ. ೨೨.೦೫ ಕೂಲಿ ನಿಗದಿಯಾಗಿತ್ತು. ವರ್ಗ–‘ಸಿ’ ನಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಊಟ ಮತ್ತು ಊಟದ ಜೊತೆಗೆ ರೂ. ೭.೩೫ ಕೂಲಿ ನಿಗದಿಯಾಗಿದ್ದರೆ, ಊಟ ಮತ್ತು ಬಟ್ಟೆ ಇಲ್ಲದಿದ್ದರೆ ರೂ. ೨೨.೦೫ ನಿಗದಿಯಾಗಿತ್ತು. ಕೃಷಿ ಕಾರ್ಮಿಕರಿಗೂ ಹಾಗೂ ಕೈಗಾರಿಕಾ ಕಾರ್ಮಿಕರಿಗೂ ನೀಡುತ್ತಿರುವ ಕೂಲಿಯ ದರವನ್ನು ತುಲನಾತ್ಮಕವಾಗಿ ನೋಡಿದಾಗ ಕೃಷಿ ಕಾರ್ಮಿಕರಿಗೆ ನೀಡುತ್ತಿರುವ ಕೂಲಿಯ ದರವು ಅತ್ಯಂತ ಕಡಿಮೆಯಾಗಿರುತ್ತದೆ. ಆದ ಕಾರಣ ಗ್ರಾಮೀಣ ಪ್ರದೇಶಗಳಿಂದ ಕೃಷಿ ಕಾರ್ಮಿಕರು ಕೈಗಾರಿಕಾ ಪ್ರದೇಶಗಳಿಗೆ ವಲಸೆ ಬರುತ್ತಿರುವುದು ಜಿಲ್ಲೆಯಲ್ಲಿ ಸರ್ವೇ ಸಾಮಾನ್ಯವಾಗಿತ್ತು.

ವ್ಯವಸಾಯ ಕಾರ್ಮಿಕರು ದಿ: ೧–೦೪–೧೯೭೭ ರಿಂದ ೩೧–೦೩–೧೯೯೮ರ ವರೆಗೆ ಹಾಗೂ ದಿ:೦೧–೦೪–೨೦೧೧ ರಿಂದ ೩೧–೦೩–೨೦೧೨ರವರೆಗೆ ಖುಷ್ಕಿ, ನೀರಾವರಿ ಹಾಗೂ ಬಾಗಾಯ್ತು ಜಮೀನುಗಳಲ್ಲಿ ದುಡಿಯುವವರಿಗೆ ನೀಡುತ್ತಿದ್ದ ಕನಿಷ್ಠ ಕೂಲಿಯ ದರವನ್ನು ಕೋಷ್ಟಕ ೮.೧೦ರಲ್ಲಿ ನೀಡಿದೆ.

## ಕೋಷ್ಟಕ: ೮.೧೦ ೦೧-೦೪-೧೯೭೭ ರಿಂದ ೩೧-೦೩-೧೯೭೮ ಮತ್ತು ೦೧-೦೪-೨೦೧೧ ರಿಂದ ೩೧-೦೩-೨೦೧೨ರವರೆಗೆ ಇದ್ದ ಕನಿಷ್ಠ ಕೂಲಿಯ ದರಗಳು

| ಕ್ರ.ಸಂ | ಉದ್ಯೋಗಗಳು | ೧-೪-೧೯೭೭ರಿಂದ ೩೧-೩-೧೯೭೮ ವರೆಗೆ | | | ೧-೦೪-೨೦೧೧ ರಿಂದ ೩೧-೩-೨೦೧೨ರ ವರೆಗೆ | | |
|---|---|---|---|---|---|---|---|
| | | ಖುಷ್ಕಿ | ನೀರಾವರಿ | ಬಾಗಾಯ್ತು | ಖುಷ್ಕಿ | ನೀರಾವರಿ | ಬಾಗಾಯ್ತು |
| | | ರೂ .ಪೈ | ರೂ. ಪೈ | ರೂ. ಪೈ | ರೂ. ಪೈ | ರೂ. ಪೈ | ರೂ. ಪೈ |
| ೧ | **ಪೈರು ಕೀಳುವುದು** | ೩೨.೭೫ | ೩೨.೭೫ | ೩೨.೭೫ | ೧೪೫.೫೮ | ೧೪೫.೫೮ | ೧೪೫.೫೮ |
| ೨ | **ಅಗೆಯುವುದು** | ೨೭.೧೫ | ೩೨.೭೫ | ೩೨.೭೫ | ೧೪೫.೫೮ | ೧೪೫.೫೮ | ೧೪೫.೫೮ |
| ೩ | **ಟ್ರ್ಯಾಕ್ಟರ್‌ರಿಂದ ಉಳುವುದು** | ೩೧.೩೦ | ೩೫.೩೫ | ೩೫.೩೫ | ೧೪೫.೫೮ | ೧೪೫.೫೮ | ೧೪೫.೫೮ |
| ೯ | ಬತ್ತದ ನಾಟಿಗೆ ಗದ್ದೆ ಹದಗೊಳಿಸುವುದು. | – | ೩೨.೭೫ | – | – | – | – |
| ೧೦ | ಒಟ್ಲು ಹಾಕುವುದು | ೨೭.೧೫ | ೩೨.೭೫ | ೩೨.೭೫ | ೧೪೫.೫೮ | ೧೪೫.೫೮ | ೧೪೫.೫೮ |
| ೧೧ | ಅಂತರ ಬೇಸಾಯ | ೨೭.೧೫ | ೩೨.೭೫ | ೩೨.೭೫ | ೧೪೫.೫೮ | ೧೪೫.೫೮ | ೧೪೫.೫೮ |
| ೧೨ | ಬೀಜ ಬಿತ್ತನೆ ನಂತರ ಹಲುಬೆ ಹಾಗೂ ಕುಂಟೆ ಹೊಡೆಯುವುದು | | | | | | |
| ೧೩ | ಗೊಬ್ಬರ ಸಾಗಣೆ | ೨೬.೦೦ | ೨೮.೭೦ | ೩೧.೩೦ | – | – | – |
| ೧೪ | ಗೊಬ್ಬರ ಹಾಕುವುದು | | | | | | |
| ೧೫ | ರಾಸಾಯನಿಕ ಗೊಬ್ಬರ ಹಾಕುವುದು | | | | | | |
| ೧೬ | ಸಸಿಗಳ ಟ್ರಿಮಿಂಗ್ | | | | | | |
| ೧೭ | ಬಿತ್ತುವುದು | ೨೭.೧೫ | ೩೨.೭೫ | ೩೨.೭೫ | ೧೪೫.೫೮ | ೧೪೫.೫೮ | ೧೪೫.೫೮ |
| ೧೮ | ಕೂರಿಗೆ ಬಿತ್ತನೆ | | | | | | |
| ೧೯ | ನಾಟಿ ಮಾಡುವುದು | | | | | | |
| ೨೦ | ಒಣ ಭೂಮಿಯಲ್ಲಿ ನಾಟಿ ಮಾಡುವುದು | ೨೭.೧೫ | – | | ೧೪೫.೫೮ | – | – |
| ೨೧ | ನೀರಾವರಿ | ೨೭.೧೫ | ೩೨.೭೫ | ೩೨.೭೫ | – | ೧೪೫.೫೮ | ೧೪೫.೫೮ |
| ೨೨ | ಏತನೀರಾವರಿ | | | | | | |
| | **ವರ್ಗ – ಬಿ** | | | | | | |
| ೧ | ಹಕ್ಕಿ ಕಾಯುವುದು | ೨೬.೦೦ | ೨೬ | ೨೬ | ೧೪೫.೫೮ | ೧೪೫.೫೮ | ೧೪೫.೫೮ |
| ೨ | ಹಕ್ಕಿಗಳನ್ನು ಓಡಿಸುವುದು | | | | | | |
| ೩ | ದನಕಾಯುವುದು | | | | | | |
| ೪ | ದನ, ಕುರಿ ಹಾಗೂ ಮೇಕೆಗಳನ್ನು ಮೇಯಿಸುವುದು | | | | | | |
| ೫ | ಕೋಳಿ ಹಾಗೂ ಹಂದಿ ಫಾರಂಗಳಲ್ಲಿ ಕೆಲಸ ಮಾಡುವವರಿಗೆ | | | | | | |

**ಆಧಾರ: ಕಾರ್ಮಿಕ ಪತ್ರಿಕೆ, ಕಾರ್ಮಿಕ ಇಲಾಖೆ.**

# ಉದ್ಯೋಗ

ಜಿಲ್ಲೆಯಲ್ಲಿ ೨೦೦೧ರ ಜನಗಣತಿಯಂತೆ ಒಟ್ಟು ೨೫,೮೪,೭೧೧ ಜನಸಂಖ್ಯೆಯಲ್ಲಿ ೧೩,೧೬,೯೩೯ (ಶೇ. ೫೦.೯೫) ಒಟ್ಟು ಕೆಲಸಗಾರರಿದ್ದು, ಇವರಲ್ಲಿ ೯,೧೬,೨೬೭ (ಶೇ.೬೯.೫೭) ಕೃಷಿ ಕ್ಷೇತ್ರದಲ್ಲಿ ಉದ್ಯೋಗಿಗಳಾಗಿದ್ದರೂ, ಜಿಲ್ಲೆಯಲ್ಲಿ ನಿರುದ್ಯೋಗ ಸಮಸ್ಯೆ ಸಂಪೂರ್ಣವಾಗಿ ನಿವಾರಣೆಯಾಗಿಲ್ಲ. ಅರೆ ಉದ್ಯೋಗ (ಅಂಡರ್ ಎಂಪ್ಲಾಯಮೆಂಟ್) ರೂಪದಲ್ಲಿ ನಿರುದ್ಯೋಗವು ಈ ಕ್ಷೇತ್ರದಲ್ಲಿ ಕಾಣಿಸುತ್ತಿದೆ. ಈ ಅರೆ ಉದ್ಯೋಗದಲ್ಲಿ ಉದ್ಯೋಗವನ್ನು ಕಡಿಮೆ ಅವಧಿಯ ಕೆಲಸದ ರೂಪದಲ್ಲಿ ಗುರುತಿಸಬಹುದು ಆದರೆ ಅದೃಶ್ಯ ಅಥವಾ ಕಾಣದೇ ಇರುವ ಅರೆ ಉದ್ಯೋಗವು ಕಡಿಮೆ ಆದಾಯ, ಕೌಶಲ್ಯದ ಅಪೂರ್ಣ ಉಪಯೋಗ ಅಥವಾ ಕಡಿಮೆ ಉತ್ಪಾದನಾ ಶಕ್ತಿ ಇರುವ ಘಟಕಗಳಲ್ಲಡಗಿರುವುದು.

ಈಗಾಗಲೇ ತಿಳಿಸಿರುವಂತೆ ಮುಖ್ಯ ಕೆಲಸಗಾರರಲ್ಲಿ ಕೃಷಿಯಲ್ಲಿ ತೊಡಗಿದ ಕೆಲಸಗಾರರ ಪ್ರಮಾಣ ೨೦೦೧ರ ಜನಗಣತಿಯಂತೆ ಶೇ.೬೯.೫೭ರಷ್ಟಿದ್ದರೆ, ೧೯೬೧, ೧೯೭೧, ೧೯೮೧ ಹಾಗೂ ೧೯೯೧ರಲ್ಲಿ ಅನುಕ್ರಮವಾಗಿ ಶೇ.೭೯.೯೬, ಶೇ.೭೭.೮೦, ಶೇ.೭೯.೧೭ ಹಾಗೂ ಶೇ.೭೫.೭೮ರಷ್ಟಿತ್ತು. ಜಿಲ್ಲೆಯಲ್ಲಿ ವ್ಯವಸಾಯ ಮತ್ತು ಕೈಗಾರಿಕೆಗಳೇ ಅಲ್ಲದೆ ಇತರೆ ಕಸುಬುಗಳಾದ ವ್ಯಾಪಾರ ಮತ್ತು ವಾಣಿಜ್ಯ, ಸಾರಿಗೆ, ಸಂಪರ್ಕ ಹಾಗೂ ಇತರ ಸೇವೆಗಳೂ ಉದ್ಯೋಗವನ್ನೊದಗಿಸಿವೆ. ೨೦೦೧ರ ಜನಗಣತಿಯಂತೆ ಜಿಲ್ಲೆಯಲ್ಲಿ ಒಟ್ಟು ಜನಸಂಖ್ಯೆಯಲ್ಲಿ ೧೦,೫೦,೨೯೧ (ಶೇ.೪೦.೬೩) ಮುಖ್ಯಕೆಲಸಗಾರರು, ೨,೬೬,೬೪೮ (ಶೇ.೧೦.೩೨) ಮಂದಿ ಸೀಮಾಂತ (ಮಾರ್ಜಿನಲ್) ಕೆಲಸಗಾರರು ಹಾಗೂ ೧,೨೬,೭೭,೭೧೨ (ಶೆ.೪೯.೦೦) ಕೆಲಸಗಾರರಲ್ಲದವರಿದ್ದರು. ಮುಖ್ಯಕೆಲಸಗಾರರ ಪೈಕಿ ೬,೦೨,೩೬೧ (ಶೇ.೫೭.೩೫) ಜನರು ವ್ಯವಸಾಯಗಾರರಾಗಿಯೂ, ೩,೧೩,೯೦೬ (ಸೇ.೨೯.೮೮) ಜನರು ಕೃಷಿ ಕಾರ್ಮಿಕರಾಗಿಯೂ, ೬೦,೯೪೬ (ಶೇ.೫.೮೦) ಜನರು ಗೃಹ ಕೈಗಾರಿಕಾ ಕೆಲಸಗಾರರು ಹಾಗೂ ೩,೩೯,೭೨೬ (ಶೇ.೩೨.೩೪) ಜನರು ಇತರೆ ಕೆಲಸಗಳಲ್ಲಿ ನಿರತರಾಗಿದ್ದರು.

ಉದ್ಯೋಗಾವಕಾಶಗಳನ್ನೊದಗಿಸುವುದು ಭಾರತದ ಪಂಚವಾರ್ಷಿಕ ಯೋಜನೆಗಳ ಮುಖ್ಯ ಧ್ಯೇಯಗಳಲ್ಲಿ ಒಂದು. ಈ ದಿಸೆಯಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಹಾಗೂ ಕೈಗಾರಿಕಾ ತರಬೇತಿ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಉದ್ಯೋಗ ವಿನಿಮಯ ಕೇಂದ್ರಗಳು ನಿರುದ್ಯೋಗಿಗಳಿಗೆ ಉದ್ಯೋಗವನ್ನು ಮಾಲೀಕರಿಗೆ ಒಳ್ಳೆಯ ಕೆಲಸಗಾರರನ್ನೂ ಒದಗಿಸಿ ಕೊಡುವುದರಲ್ಲಿ ಸಹಕಾರಿಯಾಗಿವೆ. ಈ ಕೇಂದ್ರಗಳು ತಮ್ಮ ಪ್ರದೇಶಗಳಲ್ಲಿ ನಿರುದ್ಯೋಗಿಗಳ ಹೆಸರುಗಳನ್ನು ನೋಂದಣಿ ಮಾಡುವ ಹಾಗೂ ಮಾಲೀಕರಿಗೆ ಸೂಕ್ತ ಅಭ್ಯರ್ಥಿಗಳನ್ನು ಒದಗಿಸುವ ಹೊಣೆಯನ್ನು ಹೊತ್ತಿವೆ.

ಜಿಲ್ಲಾ ಕೇಂದ್ರವಾದ ತುಮಕೂರಿನಲ್ಲಿ ಒಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರವು ಮಾರ್ಚ್ ೧, ೧೯೬೧ರಿಂದ ಕಾರ್ಯ ನಿರ್ವಹಿಸುತ್ತಿದ್ದು, ಅದಕ್ಕೂ ಮೊದಲು ಬೆಂಗಳೂರು ಉದ್ಯೋಗ ವಿನಿಮಯ ಕೇಂದ್ರದ ವ್ಯಾಪ್ತಿಯಲ್ಲಿತ್ತು. ಜಿಲ್ಲೆಯಲ್ಲಿರುವ ಉದ್ಯೋಗಾಕಾಂಕ್ಷಿಗಳ ಹೆಸರುಗಳನ್ನು ನೋಂದಣಿ ಮಾಡಿಕೊಳ್ಳುವ ಮತ್ತು ನೋಂದಣಿಗೊಂಡವರ ಹೆಸರನ್ನು ಸಂಸ್ಥೆಗಳಿಗೆ ಒದಗಿಸುವ ಕಾರ್ಯದಲ್ಲಿ ಇದು ತೊಡಗಿದೆ.

ತುಮಕೂರು ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯು ಆರಂಭವಾದ ಮೊದಲ ಏಳು ತಿಂಗಳಲ್ಲಿ ನಿರುದ್ಯೋಗ ಸಮಸ್ಯೆ ಕಾಣಿಸಿಕೊಂಡಿರುವುದು ಗಮನಾರ್ಹವಾಗಿದೆ. ೧೯೬೭ರ (ಆರು ವರ್ಷಗಳನಂತರ) ಮೊದಲ ಹತ್ತು ತಿಂಗಳಲ್ಲಿ ಉದ್ಯೋಗಕ್ಕಾಗಿ ಉದ್ಯೋಗ ವಿನಿಮಯ ಕಛೇರಿಯ ಚಾಲ್ತಿ ದಾಖಲೆಗಳ ಪ್ರಕಾರ (ಲೈವ್ ರಿಜಿಸ್ಟರ್) ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡವರ ವಿವರವನ್ನು ಕೋಷ್ಟಕ ೮.೧೧ರಲ್ಲಿ ನೀಡಲಾಗಿದೆ.

## ಕೋಷ್ಟಕ: ೮.೧೧ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ಉದ್ಯೋಗಕ್ಕಾಗಿ ನೋಂದಾಯಿಸಿಕೊಂಡವರ ವಿವರ

| ತಿಂಗಳು | ವರ್ಷ | ನೋಂದಣಿ ಗೊಂಡವರ ಸಂಖ್ಯೆ | ಪ್ರಕಟಿತ ಹುದ್ದೆಗಳ ಸಂಖ್ಯೆ | ಭರ್ತಿಗೊಂಡ ಹುದ್ದೆಗಳ ಸಂಖ್ಯೆ | ತಿಂಗಳಾಂತ್ಯದಲ್ಲಿ ಉದ್ಯೋಗಕ್ಕಾಗಿ ಕಾಯುತ್ತಿದ್ದವರ ಸಂಖ್ಯೆ |
|---|---|---|---|---|---|
| ಜನವರಿ | ೧೯೬೭ | ೬೨೧ | ೧೧೩ | ೩೮ | ೬೭೨೫ |
| ಫೆಬ್ರವರಿ | ೧೯೬೭ | ೫೨೪ | ೨೯ | ೨೭ | ೬೭೭೩ |
| ಮಾರ್ಚ್ | ೧೯೬೧ | ೩೦೦೦ | – | – | ೨೯೬೩ |
| | ೧೯೬೭ | ೫೩೧ | – | – | ೬೮೧೭ |
| ಏಪ್ರಿಲ್ | ೧೯೬೧ | ೫೩೯ | ೬೫ | ೫೦ | ೩೪೪೪ |
| | ೧೯೬೭ | ೪೯೦ | ೩೧ | ೧೬ | ೬೭೪೭ |
| ಮೇ | ೧೯೬೧ | ೪೬೦ | ೧೮ | ೪೧ | ೨೧೮೪ |
| | ೧೯೬೭ | ೩೫೭ | ೬೨ | ೨೦ | ೬೨೩೧ |
| ಜೂನ್ | ೧೯೬೧ | ೫೨೧ | ೧೪ | ೧೨ | ೨೪೩೪ |
| | ೧೯೬೭ | ೬೬೮ | ೭೩ | ೭೭ | ೬೬೧೭ |
| ಜುಲೈ | ೧೯೬೧ | ೬೭೧ | ೩೮ | ೧೯ | ೨೭೯೫ |
| | ೧೯೬೭ | ೮೨೬ | ೪೩ | ೩೧ | ೬೯೪೯ |
| ಆಗಸ್ಟ್ | ೧೯೬೧ | ೫೫೩ | ೪೩ | ೩೪ | ೩೦೧೩ |
| | ೧೯೬೭ | ೬೭೧ | ೪೬ | ೨೬ | ೭೧೧೬ |
| ಸೆಪ್ಟೆಂಬರ್ | ೧೯೬೧ | ೪೮೦ | ೪೫ | ೩೯ | ೩೦೬೦ |
| | ೧೯೬೭ | ೬೯೦ | ೩೫ | ೨೫ | ೭೧೪೩ |
| ಅಕ್ಟೋಬರ್ | ೧೯೬೧ | – | – | – | – |
| | ೧೯೬೭ | ೭೮೦ | ೩೬ | ೩೦ | ೭೨೧೪ |

**ಆಧಾರ: ತುಮಕೂರು ಜಿಲ್ಲಾ ಗ್ಯಾಸೆಟಿಯರ್ ೧೯೬೯**

೧೯೮೦-೮೧ರಲ್ಲಿ ಚಾಲ್ತಿ ದಾಖಲೆ ಪ್ರಕಾರ ಉದ್ಯೋಗಕ್ಕಾಗಿ ನೋಂದಾಯಿಸಿಕೊಂಡಿರುವವರ ಸಂಖ್ಯೆ ೧೫,೦೧೩ ಆಗಿದ್ದರೆ, ೧೯೯೦-೯೧ರಲ್ಲಿ ೧೯,೪೯೫, ೧೯೯೯-೦೦ರಲ್ಲಿ ೧೯,೩೧೩, ೨೦೧೦-೧೧ರಲ್ಲಿ ಕೇವಲ ೪೫೪೨ ಆಗಿತ್ತು. ೧೯೯೯-೦೦ದಿಂದ ಇವರ ಸಂಖ್ಯೆ ಕಡಿಮೆಯಾಗಿರುವುದು ಗಮನಾರ್ಹವಾಗಿದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೧೨ರಲ್ಲಿ ನೋಡಿ.

**ಕೋಷ್ಟಕ:೮.೧೨ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯ ಚಾಲ್ತಿ ದಾಖಲೆ ಪ್ರಕಾರ ೧೯೮೦-೮೧ ರಿಂದ ೨೦೧೨-೧೩ರ ವರೆಗೆ ನೋಂದಣಿಗೊಂಡ ಉದ್ಯೋಗಾರ್ಥಿಗಳ ವಿವರ**

| ವರ್ಷ | ಪುರುಷರು | | ಮಹಿಳೆಯರು | | ಒಟ್ಟು | |
|---|---|---|---|---|---|---|
| | ಉದ್ಯೋಗಸ್ಥರು | ನಿರುದ್ಯೋಗಸ್ಥರು | ಉದ್ಯೋಗಸ್ಥರು | ನಿರುದ್ಯೋಗಸ್ಥರು | ಉದ್ಯೋಗಸ್ಥರು | ನಿರುದ್ಯೋಗಸ್ಥರು |
| ೧೯೮೦-೮೧ | - | ೧೨೧೦೭ | - | ೨೯೦೬ | - | ೧೫೦೧೩ |
| ೧೯೮೫-೮೬ | - | ೯೩೦೯ | - | ೨೨೫೨ | - | ೧೧೫೬೧ |
| ೧೯೯೦-೯೧ | - | ೧೫೦೫೫ | - | ೪೪೪೦ | - | ೧೯೪೯೫ |
| ೧೯೯೫-೯೬ | - | ೧೭೫೩೬ | - | ೪೪೧೮ | - | ೨೧೯೫೪ |
| ೧೯೯೯-೦೦ | - | ೧೪೨೬೬ | - | ೫೦೪೭ | - | ೧೯೩೧೩ |
| ೨೦೦೫-೦೬ | - | ೪೭೯೬ | - | ೩೨೮೮ | - | ೮೦೮೪ |
| ೨೦೦೯-೧೦ | - | ೩೭೪೬ | - | ೧೭೯೭ | - | ೫೫೪೩ |
| ೨೦೧೦-೧೧ | - | ೨೮೫೪ | - | ೧೬೮೮ | - | ೪೫೪೨ |
| ೨೦೧೧-೧೨ | - | ೨೮೨೯ | - | ೧೦೧೭ | - | ೩೮೪೬ |
| ೨೦೧೨-೧೩ | - | ೨೭೭೫ | - | ೧೩೫೮ | - | ೪೧೩೩ |

**ಆಧಾರ: ಜಿಲ್ಲಾ ಉದ್ಯೋಗ ವಿನಿಯಮ ಕೇಂದ್ರ, ತುಮಕೂರು.**

ಜಿಲ್ಲೆಯಲ್ಲಿ ಕೇಂದ್ರಸರ್ಕಾರ, ರಾಜ್ಯಸರ್ಕಾರ, ಅರೆ ಸರ್ಕಾರ(ರಾಜ್ಯ ಹಾಗೂ ಕೇಂದ್ರ), ಸ್ಥಳೀಯ ಸಂಸ್ಥೆಗಳು ಹಾಗೂ ಖಾಸಗಿ ವಲಯಗಳಲ್ಲಿ ೧೯೯೯-೦೦ ದಿಂದ ೨೦೧೨-೧೩ರವರೆಗೆ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಸ್ಥರ ವಿವರಗಳನ್ನು ಕೋಷ್ಟಕ ೮.೧೩ರಲ್ಲಿ ನೀಡಿದೆ.

**ಕೋಷ್ಟಕ: ೮.೧೩ ರಲ್ಲಿ ೧೯೯೯-೦೦ ರಿಂದ ೨೦೧೨-೧೩ರ ವರೆಗೆ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದ ಉದ್ಯೋಗಸ್ಥರ ವಿವರ.**

| ವರ್ಷ | ಕೇಂದ್ರ ಸರ್ಕಾರ | ರಾಜ್ಯ ಸರ್ಕಾರ | ಅರೆ ಸರ್ಕಾರ (ರಾಜ್ಯ ಹಾಗೂ ಕೇಂದ್ರ) | ಸ್ಥಳೀಯ ಸಂಸ್ಥೆಗಳು | ಖಾಸಗಿ ವಲಯ |
|---|---|---|---|---|---|
| ೧೯೯೯-೦೦ | ೨೦೮೧ | ೩೩೫೯೮ | ೫೩೫೪ | ೨೭೦೪ | ೧೦೪೦೫ |
| ೨೦೦೫-೦೬ | ೧೨೫೭ | ೩೫೦೦೨ | ೪೮೫೨ | ೨೨೯ | ೯೩೦೦ |
| ೨೦೦೯-೧೦ | ೧೨೩೪ | ೩೫೭೫೩ | ೫೩೩೧ | ೨೨೯ | ೯೧೬೪ |
| ೨೦೧೦-೧೧ | ೧೨೨೦ | ೩೭೩೪೪ | ೫೩೩೫ | ೨೨೫೦ | ೮೬೧೫ |
| ೨೦೧೧-೧೨ | ೧೨೨೭ | ೩೭೦೪೨ | ೫೦೮೪ | ೨೦೦೦ | ೮೫೩೭ |
| ೨೦೧೨-೧೩ | ೨೨೦೦ | ೨೯೦೦೨ | ೪೨೫೬ | ೧೭೬೮ | ೯೩೮೦ |

**ಆಧಾರ: ಜಿಲ್ಲಾ ಉದ್ಯೋಗ ವಿನಿಯಮ ಕೇಂದ್ರ, ತುಮಕೂರು.**

ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ನೋಂದಾಯಿಸಿಕೊಂಡವರ ವಿವರ, ಪ್ರಕಟಿತ ಹುದ್ದೆಗಳು, ಭರ್ತಿಗೊಂಡ ಹುದ್ದೆಗಳು ಹಾಗೂ ಖಾಲಿ ಹುದ್ದೆಗಳ ವಿವರಗಳನ್ನು ಕೋಷ್ಟಕ ೮.೧೪ರಲ್ಲಿ ನೀಡಲಾಗಿದೆ.

**ಕೋಷ್ಟಕ: ೮.೧೪ ಜಿಲ್ಲೆಯಲ್ಲಿ ೧೯೮೦–೮೧ ರಿಂದ ೨೦೧೨–೧೩ರ ವರೆಗೆ ನೋಂದಾಯಿಸಿಕೊಂಡ ಉದ್ಯೋಗಾಕಾಂಕ್ಷಿಗಳ ಸಂಖ್ಯೆ, ಪ್ರಕಟಿತ ಖಾಲಿ ಹುದ್ದೆಗಳು, ಭರ್ತಿಗೊಂಡ ಹುದ್ದೆಗಳ ಮಾಹಿತಿಯ ವಿವರ.**

| ವರ್ಷ | ನೋಂದಾಯಿಸಿಕೊಂಡವರ ಸಂಖ್ಯೆ | ಪ್ರಕಟಿತ ಹುದ್ದೆಗಳು | ಭರ್ತಿಗೊಂಡ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|---|
| ೧೯೮೦–೮೧ | ೧೫೦೧೩ | – | – | – |
| ೧೯೮೫–೮೬ | ೧೧೫೬೧ | – | – | – |
| ೧೯೯೦–೯೧ | ೧೯೪೯೫ | – | – | – |
| ೧೯೯೫–೯೬ | ೨೧೯೫೪ | – | – | – |
| ೧೯೯೯–೦೦ | ೧೯೩೧೩ | ೨೬೬ | – | – |
| ೨೦೦೫–೦೬ | ೮೦೮೪ | ೯೦ | – | – |
| ೨೦೦೯–೧೦ | ೫೫೪೩ | ೧೧೦ | – | – |
| ೨೦೧೦–೧೧ | ೪೫೪೨ | ೪೫ | – | – |
| ೨೦೧೧–೧೨ | ೩೮೪೬ | ೧೯ | ೪೦ | – |
| ೨೦೧೨–೧೩ | ೪೧೩೩ | ೨೬ | ೮ | – |

ಆಧಾರ: ಜಿಲ್ಲಾ ಉದ್ಯೋಗ ವಿನಿಯಮ ಕೇಂದ್ರ, ತುಮಕೂರು.

ಉದ್ಯೋಗ ವಿನಿಮಯ ಕಛೇರಿಯಲ್ಲಿ ನೋಂದಾಯಿಸಿಕೊಂಡ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಹಾಗೂ ಉದ್ಯೋಗ ಪಡೆದವರ ವಿವರಗಳನ್ನು ಕೋಷ್ಟಕ ೮.೧೫ರಲ್ಲಿ ನೀಡಲಾಗಿದೆ.

**ಕೋಷ್ಟಕ: ೮.೧೫ ಜಿಲ್ಲೆಯಲ್ಲಿ ೧೯೮೦–೮೧ ರಿಂದ ೨೦೧೨–೧೩ ರವರೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಉದ್ಯೋಗ ಪಡೆದವರ ವಿವರ**

| ವರ್ಷ | ನೋಂದಾಯಿಸಿಕೊಂಡವರು | | ಉದ್ಯೋಗ ಪಡೆದವರು | |
|---|---|---|---|---|
| | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ |
| ೧೯೮೦–೮೧ | ೧೭೫೧ | ೧೨೨೧ | – | – |
| ೧೯೮೫–೮೬ | ೧೩೮೨ | ೧೨೧೯ | – | – |
| ೧೯೯೦–೯೧ | ೧೮೯೩ | ೧೩೧೨ | – | – |
| ೧೯೯೫–೯೬ | ೨೪೬೭ | ೧೪೭೬ | – | – |
| ೧೯೯೯–೦೦ | ೧೫೧೭ | ೧೦೯೮ | – | – |
| ೨೦೦೫–೦೬ | ೯೯೮ | ೩೯೨ | – | – |
| ೨೦೦೯–೧೦ | ೬೯೪ | ೩೬೦ | – | – |
| ೨೦೧೦–೧೧ | ೧೩೦೩ | ೮೦೪ | – | – |
| ೨೦೧೧–೧೨ | ೮೦೫ | ೩೭೫ | – | – |
| ೨೦೧೨–೧೩ | ೫೬೧ | ೩೧೬ | – | – |

ಆಧಾರ: ಜಿಲ್ಲಾ ಉದ್ಯೋಗ ವಿನಿಯಮ ಕೇಂದ್ರ, ತುಮಕೂರು.

ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯ ಸೇವೆಯನ್ನು ಉಪಯೋಗಿಸಿಕೊಂಡ ಘಟಕಗಳು ಮತ್ತು ಭರ್ತಿಗೊಂಡವರ ಸಂಖ್ಯೆಯ ವಿವರಗಳನ್ನು ಕೋಷ್ಟಕ ೮.೧೬ರಲ್ಲಿ ನೀಡಿದೆ.

**ಕೋಷ್ಟಕ:೮.೧೬ ಜಿಲ್ಲೆಯಲ್ಲಿ ೧೯೯೯–೦೦ ರಿಂದ ೨೦೧೨–೧೩ ರವರೆಗೆ ಈ ಕಛೇರಿಯ ಸೇವೆಯನ್ನು ಉಪಯೋಗಿಸಿಕೊಂಡ ಘಟಕಗಳ ವಿವರ.**

| ವರ್ಷ | ಸೇವೆಯನ್ನು ಉಪಯೋಗಿಸಕೊಂಡವರ ಸಂಖ್ಯೆ | | | | | | |
|---|---|---|---|---|---|---|---|
| | ಕೇಂದ್ರ ಸರ್ಕಾರ | ಅರೆ ಕೇಂದ್ರ ಸರ್ಕಾರ | ರಾಜ್ಯ ಸರ್ಕಾರ | ಅರೆ ರಾಜ್ಯ ಸರ್ಕಾರ | ಸ್ಥಳೀಯ ಸಂಸ್ಥೆಗಳು | ಖಾಸಗಿ | ಒಟ್ಟು |
| ೧೯೯೯–೦೦ | ೧೫ | ೧೪ | ೦೭ | ೦೫ | ೦೨ | ೦೮ | ೫೧ |
| ೨೦೦೫–೦೬ | ೧೬ | ೦೫ | ೦೧ | – | – | ೦೮ | ೩೦ |
| ೨೦೦೯–೧೦ | ೧೦ | ೦೯ | ೦೩ | – | – | ೦೯ | ೩೧ |
| ೨೦೧೦–೧೧ | ೦೬ | ೦೧ | – | – | – | | ೦೮ |
| ೨೦೧೧–೧೨ | – | – | ೦೨ | – | – | – | ೦೨ |
| ೨೦೧೨–೧೩ | ೦೩ | ೧೪ | ೦೩ | ೦೨ | – | ೦೧ | ೨೩ |

**ಕೋಷ್ಟಕ: ೮.೧೬** (ಮುಂದು.....)

| ವರ್ಷ | ಭರ್ತಿಗೊಂಡವರ ಸಂಖ್ಯೆ | | | | | | |
|---|---|---|---|---|---|---|---|
| | ಕೇಂದ್ರ ಸರ್ಕಾರ | ಅರೆ ಕೇಂದ್ರ ಸರ್ಕಾರ | ರಾಜ್ಯ ಸರ್ಕಾರ | ಅರೆ ರಾಜ್ಯ ಸರ್ಕಾರ | ಸ್ಥಳೀಯ ಸಂಸ್ಥೆಗಳು | ಖಾಸಗಿ | ಒಟ್ಟು |
| ೧೯೯೯–೦೦ | ೫೫ | ೦೩ | ೧೧ | ೦೧ | – | ೦೧ | ೭೧ |
| ೨೦೦೫–೦೬ | – | – | – | – | – | – | – |
| ೨೦೦೯–೧೦ | – | – | ೦೧ | – | – | – | ೦೧ |
| ೨೦೧೦–೧೧ | – | – | – | – | – | – | – |
| ೨೦೧೧–೧೨ | – | – | – | – | – | – | – |
| ೨೦೧೨–೧೩ | – | ೦೧ | – | – | – | – | ೦೧ |

**ಆಧಾರ: ಜಿಲ್ಲಾ ಉದ್ಯೋಗ ವಿನಿಯಮ ಕೇಂದ್ರ, ತುಮಕೂರು.**

೧೯೮೦–೮೧ ರಿಂದ ೨೦೧೨–೧೩ರವರೆಗೆ ವಿದ್ಯಾರ್ಹತೆ ಹಾಗೂ ಲಿಂಗ ಪ್ರಬೇಧಕ್ಕನುಗುಣವಾಗಿ ನೋಂದಾಯಿಸಿಕೊಂಡವರ ವಿವರವನ್ನು ಕೋಷ್ಟಕ ೮.೧೭ರಲ್ಲಿ ನೀಡಲಾಗಿದೆ.

**ಕೋಷ್ಟಕ: ೮.೧೭ ಜಿಲ್ಲೆಯಲ್ಲಿ ೧೯೮೦–೮೧ ರಿಂದ ೨೦೧೨–೧೩ ರ ವರೆಗೆ ವಿದ್ಯಾರ್ಹತೆ ಹಾಗೂ ಲಿಂಗ ಪ್ರಭೇಧಕ್ಕನುಗುಣವಾಗಿ ನೋಂದಾಯಿಸಿಕೊಂಡವರ ವಿವರ.**

| ಕ್ರ.ಸಂ | ವಿದ್ಯಾರ್ಹತೆ | ೧೯೮೦–೮೧ | | ೧೯೯೦–೯೧ | | ೨೦೦೦–೦೧ | |
|---|---|---|---|---|---|---|---|
| | | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ |
| ೧ | ಪದವೀಧರರು | | | | | | |
| | ಕಲೆ | ೩೩೮ | ೧೧೨ | ೬೫೯ | ೨೧೨ | ೬೯೭ | ೧೯೮ |
| | ವಿಜ್ಞಾನ | ೨೦೮ | ೭೯ | ೩೬೦ | ೯೮ | ೨೮೮ | ೧೧೩ |
| | ವಾಣಿಜ್ಯ | ೨೦೪ | ೮೮ | ೨೪೫ | ೯೨ | ೧೯೬ | ೭೯ |

**ಕೋಷ್ಟಕ: ೮.೧೭** (ಮುಂದು.....)

| ಕ್ರ.ಸಂ | ವಿದ್ಯಾರ್ಹತೆ | ೧೯೮೦-೮೧ | | ೧೯೯೦-೯೧ | | ೨೦೦೦-೦೧ | |
|---|---|---|---|---|---|---|---|
| | | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ |
| ೨ | ಬಿ.ಎಡ್. | ೧೨೭ | ೯೨ | ೩೨೧ | ೮೮ | ೨೬೭ | ೯೧ |
| ೩ | ಬಿ.ಪಿ.ಎಡ್ | ೯೯ | ೪೭ | ೧೫೯ | ೦೯ | ೧೨೬ | ೦೬ |
| ೪ | ಡಿಪ್ಲೊಮೋದಾರರು | ೬೧೨ | ೫೩ | ೬೮೭ | ೬೧ | ೬೨೭ | ೫೮ |
| ೫ | ಐಟಿಐ ಉತ್ತೀರ್ಣ | ೧೫೬೫ | ೨೭ | ೧೬೧೩ | ೫೨ | ೧೨೩೫ | ೬೨ |
| ೬ | ಬೆರಳಚ್ಚುಗಾರರು | ೧೧೨ | ೬೧ | ೧೨೫ | ೫೮ | ೯೬ | ೨೦ |
| ೭ | ಶೀಘ್ರಲಿಪಿಗಾರರು | ೯೮ | ೨೦ | ೬೬ | ೦೯ | ೦೬ | ೦೫ |
| ೮ | ಪ್ರಾಥಮಿಕ ಶಾಲಾ ಶಿಕ್ಷಕರು | ೧೬೧೨ | ೨೦೪ | ೧೭೨೭ | ೩೧೬ | ೧೬೯೫ | ೫೨೧ |
| ೯ | ನರ್ಸರಿ ಶಿಕ್ಷಕರು | ೫೭ | ೨೨ | ೪೪ | ೧೨ | ೨೧ | ೦೬ |
| ೧೦ | ದೈಹಿಕ ಶಿಕ್ಷಕರು | ೧೨೫ | ೧೨ | ೧೨೯ | ೧೫ | ೧೩೧ | ೧೯ |
| ೧೧ | ನಿರ್ವಾಹಕರು | ೯೯೭ | ೧೯ | ೧೧೧೨ | ೨೫ | ೧೦೫೫ | ೩೫ |
| ೧೨ | ಎಸ್.ಎಸ್.ಎಲ್.ಸಿ ಉತ್ತೀರ್ಣ | ೨೩೬೬ | ೧೧೩೭ | ೩೮೨೩ | ೨೦೮೭ | ೪೧೬೪ | ೧೯೭೮ |
| ೧೩ | ಪಿ.ಯು.ಸಿ. ಉತ್ತೀರ್ಣ | ೧೯೧೮ | ೮೧೫ | ೨೯೮೮ | ೧೧೨೭ | ೩೨೨೫ | ೧೬೧೧ |
| ೧೪ | ಮಾಧ್ಯಮಿಕ ಶಾಲೆ | ೧೨೧೬ | ೫೪ | ೯೮೮ | ೯೫ | ೮೮೬ | ೧೫೧ |
| ೧೫ | ಅಕ್ಷರಸ್ಥರು | ೨೯೮ | ೪೯ | ೬೧ | ೭೨ | ೫೭ | ೮೫ |
| ೧೬ | ಅನಕ್ಷರಸ್ಥರು | ೧೫೫ | ೧೫ | ೦೮ | ೧೨ | ೦೬ | ೧೧ |

| ಕ್ರ.ಸಂ | ವಿದ್ಯಾರ್ಹತೆ | ೨೦೦೫-೦೬ | | ೨೦೦೯-೧೦ | | ೨೦೧೨-೧೩ | |
|---|---|---|---|---|---|---|---|
| | | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ |
| ೧ | ಪದವೀಧರರು | | | | | | |
| | ಕಲೆ | ೪೧೫ | ೧೨೭ | ೨೧೮ | ೧೦೫ | ೧೧೦ | ೫೦ |
| | ವಿಜ್ಞಾನ | ೩೧೨ | ೧೧೨ | ೫೧ | ೫೭ | ೩೬ | ೩೦ |
| | ವಾಣಿಜ್ಯ | ೨೩೨ | ೯೮ | ೪೪ | ೪೪ | ೨೮ | ೨೬ |
| ೨ | ಬಿ.ಎಡ್. | ೬೮ | ೭೫ | ೨೭ | ೨೧ | ೪೦ | ೩೬ |
| ೩ | ಬಿ.ಪಿ.ಎಡ್ | ೧೨ | ೦೫ | ೦೫ | – | ೧೦ | ೧೦ |
| ೪ | ಡಿಪ್ಲೊಮೋದಾರರು | ೧೧೬ | ೨೧ | ೫೯ | ೦೯ | ೫೧ | ೨೧ |
| ೫ | ಐಟಿಐ ಉತ್ತೀರ್ಣ | ೩೧೧ | ೬೩ | ೨೨೬ | ೨೭ | ೧೫೧ | ೨೫ |
| ೬ | ಬೆರಳಚ್ಚುಗಾರರು | ೦೭ | ೦೫ | ೦೨ | ೦೨ | ೦೩ | ೦೨ |
| ೭ | ಶೀಘ್ರಲಿಪಿಗಾರರು | – | ೦೨ | – | – | – | – |
| ೮ | ಪ್ರಾಥಮಿಕ ಶಾಲಾ ಶಿಕ್ಷಕರು | ೪೧೩ | ೩೨೨ | ೧೫೯ | ೧೫೭ | ೧೬೦ | ೧೨೦ |
| ೯ | ನರ್ಸರಿ ಶಿಕ್ಷಕರು | ೦೩ | ೦೨ | – | – | – | ೦೨ |
| ೧೦ | ದೈಹಿಕ ಶಿಕ್ಷಕರು | ೧೨೫ | ೦೫ | ೯೬ | ೦೫ | ೭೪ | ೦೪ |
| ೧೧ | ನಿರ್ವಾಹಕರು | ೬೯ | ೧೫ | ೫೮ | ೧೦ | ೨೦ | ೦೬ |
| ೧೨ | ಎಸ್.ಎಸ್.ಎಲ್.ಸಿ ಉತ್ತೀರ್ಣ | ೧೧೭೮ | ೧೨೧೨ | ೧೩೮೪ | ೬೩೩ | ೯೭೮ | ೫೦೧ |

**ಕೋಷ್ಟಕ: ೮.೧೭** (ಮುಂದು.....)

| ಕ್ರ.ಸಂ | ವಿದ್ಯಾರ್ಹತೆ | ೨೦೦೫-೦೬ | | ೨೦೦೯-೧೦ | | ೨೦೧೨-೧೩ | |
|---|---|---|---|---|---|---|---|
| | | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ |
| ೧೩ | ಪಿ.ಯು.ಸಿ. ಉತ್ತೀರ್ಣ | ೧೧೨೫ | ೧೦೩೦ | ೧೧೭೭ | ೫೭೬ | ೮೮೭ | ೪೧೫ |
| ೧೪ | ಮಾಧ್ಯಮಿಕ ಶಾಲೆ | ೩೫೫ | ೧೧೨ | ೨೦೯ | ೯೮ | ೨೧೫ | ೮೧ |
| ೧೫ | ಅಕ್ಷರಸ್ಥರು | ೪೬ | ೭೭ | ೨೫ | ೪೬ | ೧೦ | ೧೯ |
| ೧೬ | ಅನಕ್ಷರಸ್ಥರು | ೦೯ | ೦೫ | ೦೬ | ೦೮ | ೦೨ | ೧೦ |

**ಆಧಾರ: ಜಿಲ್ಲಾ ಉದ್ಯೋಗ ವಿನಿಯಮ ಕೇಂದ್ರ, ತುಮಕೂರು.**

## ಭೂ-ಬಳಕೆ

ನೈಸರ್ಗಿಕ ಸಂಪನ್ಮೂಲಗಳಲ್ಲಿ ಭೂ-ಸಂಪನ್ಮೂಲ ಅತ್ಯಂತ ಪ್ರಮುಖವಾದುದು. ಕೃಷಿ, ಕೈಗಾರಿಕೆ, ಗಣಿಗಾರಿಕೆ, ಹೈನುಗಾರಿಕೆ ಮುಂತಾದ ಎಲ್ಲಾ ಆರ್ಥಿಕ ಚಟುವಟಿಕೆಗಳು ನಡೆಯುವುದು ಭೂಮಿಯ ಮೇಲೆ. ೧೯೬೦-೬೧ರಲ್ಲಿ ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಒಟ್ಟು ಅರಣ್ಯ ಪ್ರದೇಶ ೪೪,೧೧೬ ಹೆಕ್ಟೇರ್‌ಗಳಾಗಿತ್ತು. ಇದು ೧೯೭೦-೭೧ರಲ್ಲಿ ೪೫,೮೬೯ ಹೆಕ್ಟೇರ್‌ಗಳು, ೧೯೮೦-೮೧ ರಿಂದ ೨೦೦೦-೦೧ರವರೆಗೂ ೪೪,೯೮೪ ಹೆಕ್ಟೇರುಗಳು, ೨೦೦೬-೦೭ರಲ್ಲಿ ೪೫,೧೭೭ ಹೆಕ್ಟೇರ್‌ಗಳು ಹಾಗೂ ೨೦೦೯-೧೦ರಲ್ಲಿ ೪೫,೧೭೭ ಹೆಕ್ಟೇರ್‌ಗಳಷ್ಟು ಅರಣ್ಯ ಪ್ರದೇಶವಿತ್ತು. ಸಾಗುವಳಿಗೆ ಲಭ್ಯವಿಲ್ಲದ ಭೂಮಿ ೧೯೬೦-೬೧ರಲ್ಲಿ ೧,೪೨,೧೨೩ ಹೆಕ್ಟೇರ್‌ಗಳಾಗಿದ್ದರೆ, ೧೯೭೦-೭೧ರಲ್ಲಿ ೧,೧೬,೬೭೯ ಹೆಕ್ಟೇರ್‌ಗಳಿಗೂ, ೨೦೦೬-೦೭ರಲ್ಲಿ ೧,೫೧,೭೩೮ ಹೆಕ್ಟೇರ್‌ಗಳಿಗೂ ಹಾಗೂ ೨೦೦೯-೧೦ರಲ್ಲಿ ೧,೫೧,೯೮೧ ಹೆಕ್ಟೇರ್‌ಗಳಿಗೂ ಹೆಚ್ಚಳಗೊಂಡಿರುವುದು ಅಂಕಿ ಅಂಶಗಳಿಂದ ತಿಳಿದು ಬರುತ್ತದೆ. ಸಾಗುವಳಿ ಮಾಡದಿರುವ ಇತರೆ ಭೂಮಿ ೧೯೬೦-೬೧ರಲ್ಲಿ ೨,೬೧,೫೭೧ ಹೆಕ್ಟೇರುಗಳಾಗಿದ್ದರೆ, ಇದು ೧೯೭೦-೭೧ರಲ್ಲಿ ೨,೩೫,೭೪೯ ಹೆಕ್ಟೇರುಗಳು, ೨೦೦೬-೦೭ರಲ್ಲಿ ೧,೬೦,೧೨೮ ಹೆಕ್ಟೇರ್‌ಗಳು ಹಾಗೂ ೨೦೦೯-೧೦ರಲ್ಲಿ ೧,೬೦,೧೨೮ ಹೆಕ್ಟೇರ್‌ಗಳಾಗಿತ್ತು. ಒಟ್ಟು ಬಿತ್ತನೆಯಾದ ಪ್ರದೇಶ ೧೯೬೦-೬೧ರಲ್ಲಿ ೫,೦೬,೩೫೫ ಹೆಕ್ಟೇರುಗಳಾಗಿದ್ದರೆ, ೧೯೭೦-೭೧ರಲ್ಲಿ ೫,೦೪,೩೦೬ ಹೆಕ್ಟೇರುಗಳು, ೨೦೦೬-೦೭ರಲ್ಲಿ ೫,೩೯,೫೩೭ ಹೆಕ್ಟೇರುಗಳು ಹಾಗೂ ೨೦೦೯-೧೦ರಲ್ಲಿ ೬೨೪೩೮೧ ಹೆಕ್ಟೇರು ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿತ್ತು. ೨೦೧೦-೧೧ರಲ್ಲಿ ೫,೫೮,೯೫೩ ಹೆಕ್ಟೇರ್ ನಿವ್ವಳ ಬಿತ್ತನೆಯಾದ ಪ್ರದೇಶವಾಗಿತ್ತು. ೭೨,೭೯೧ ಹೆಕ್ಟೇರ್ ಪ್ರದೇಶದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆ ಮಾಡಲಾಗಿತ್ತು. ೬,೩೧,೭೪೪ ಹೆಕ್ಟೇರ್ ಪ್ರದೇಶದಲ್ಲಿ ಒಟ್ಟು ಬಿತ್ತನೆಯಾಗಿತ್ತು. ಕೋಷ್ಟಕ ೮.೧೮ ರಲ್ಲಿ ೧೯೬೦-೬೧ ರಿಂದ ೨೦೧೧-೧೨ ರ ವರೆಗೆ ಜಿಲ್ಲೆಯಲ್ಲಿನ ಭೂ-ಬಳಕೆಯ ವಿವರಗಳನ್ನು ನೀಡಲಾಗಿದೆ.

## ಕೋಷ್ಟಕ ೮.೧೮ ಜಿಲ್ಲೆಯ ಭೂ-ಬಳಕೆಯ ವಿವರ

(ಹೆಕ್ಟೇರುಗಳಲ್ಲಿ)

| ವರ್ಷ | ಭೌಗೋಳಿಕ ವಿಸ್ತೀರ್ಣ | ಅರಣ್ಯ ಪ್ರದೇಶ | ಬಿತ್ತನೆಯಾದ ಪ್ರದೇಶ | | | ಸಾಗುವಳಿಗೆ ಲಭ್ಯವಿಲ್ಲದ ಭೂಮಿ | | |
|---|---|---|---|---|---|---|---|---|
| | | | ನಿವ್ವಳ | ಒಂದಕ್ಕಿಂತ ಹೆಚ್ಚು | ಒಟ್ಟು | ವ್ಯವಸಾಯೇತರ | ಬಂಜರು | ಒಟ್ಟು |
| ೧೯೬೦-೬೧ | ೨೫೭೭೩೩೨ | ೧೦೯೦೧೨ | ೧೨೨೫೭೪೯ | ೨೫೪೪೧ | ೧೨೫೧೨೩೦ | ೧೭೫೪೪೯ | ೧೭೫೭೦೪ | ೩೫೧೧೯೩ |
| ೧೯೭೦-೭೧ | ೧೦೬೪೭೫೫ | ೪೫೮೬೯ | ೪೯೧೬೧೩ | ೧೨೬೯೩ | ೫೦೪೩೦೬ | ೬೪೨೫೦ | ೫೨೪೨೯ | ೧೧೬೬೭೯ |
| ೧೯೮೦-೮೧ | ೧೦೬೪೭೫೫ | ೪೪೯೮೪ | ೫೦೩೬೩೬ | ೧೩೧೯೨ | ೫೧೬೮೨೮ | ೭೮೧೫೮ | ೬೭೫೩೯ | ೧೪೫೬೯೭ |
| ೧೯೯೦-೯೧ | ೧೦೬೪೭೫೫ | ೪೪೯೮೪ | ೫೫೭೨೫೧ | ೨೩೧೨೧ | ೫೮೦೩೭೨ | ೮೦೫೩೩ | ೬೭೫೩೯ | ೧೪೮೦೭೨ |
| ೧೯೯೫-೯೬ | ೧೦೬೪೭೫೫ | ೪೪೯೮೪ | ೫೭೩೨೪೪ | ೨೮೧೯೦ | ೬೦೧೪೩೪ | ೮೨೪೦೩ | ೬೭೫೩೯ | ೧೪೯೯೪೨ |
| ೨೦೦೦-೦೧ | ೧೦೬೪೭೫೫ | ೪೪೯೮೪ | ೬೦೨೮೭೯ | ೫೮೪೭೫ | ೬೬೧೩೫೪ | ೮೩೩೦೬ | ೬೭೫೩೯ | ೧೫೦೮೪೫ |

**ಕೋಷ್ಟಕ: ೮.೧೮** (ಮುಂದು.....)

| ವರ್ಷ | ಭೌಗೋಳಿಕ ವಿಸ್ತೀರ್ಣ | ಅರಣ್ಯ ಪ್ರದೇಶ | ಬಿತ್ತನೆಯಾದ ಪ್ರದೇಶ | | | ಸಾಗುವಳಿಗೆ ಲಭ್ಯವಿಲ್ಲದ ಭೂಮಿ | | |
|---|---|---|---|---|---|---|---|---|
| | | | ನಿವ್ವಳ | ಒಂದಕ್ಕಿಂತ ಹೆಚ್ಚು | ಒಟ್ಟು | ವ್ಯವಸಾಯೇತರ | ಬಂಜರು | ಒಟ್ಟು |
| ೨೦೦೫-೦೬ | ೧೦೬೪೭೫೫ | ೪೫೧೭೭ | ೬೧೯೬೫೪ | ೪೦೭೬೭ | ೬೬೦೪೨೧ | ೮೩೯೯೩ | ೬೭೫೩೯ | ೧೫೧೫೩೨ |
| ೨೦೦೬-೦೭ | ೧೦೬೪೭೫೫ | ೪೫೧೭೭ | ೫೦೮೦೨೯ | ೩೧೫೦೮ | ೫೩೯೫೩೭ | ೮೪೧೯೯ | ೬೭೫೩೯ | ೧೫೧೭೩೮ |
| ೨೦೦೭-೦೮ | ೧೦೬೪೭೫೫ | ೪೫೧೭೭ | ೬೦೮೧೯೩ | ೫೬೧೨೧ | ೬೬೪೩೧೪ | ೮೪೨೪೧ | ೬೭೫೩೯ | ೧೫೧೭೮೦ |
| ೨೦೦೯-೧೦ | ೧೦೬೪೭೫೫ | ೪೫೧೭೭ | ೫೬೩೪೨೧ | ೬೦೯೬೦ | ೬೨೪೩೮೧ | ೮೪೪೪೨ | ೬೭೫೩೯ | ೧೫೧೯೮೧ |
| ೨೦೧೧-೧೨ | ೧೦೬೪೭೫೫ | ೪೫೧೭೭ | ೫೦೯೫೪೨ | ೬೬೪೧೯ | ೫೭೫೯೬೧ | ೮೪೯೫೬ | ೬೭೫೩೯ | ೧೫೨೪೯೫ |

| ವರ್ಷ | ಸಾಗುವಳಿ ಮಾಡದಿರುವ ಇತರೆ ಭೂಮಿ | | | | ಬೀಳುಭೂಮಿ | | |
|---|---|---|---|---|---|---|---|
| | ಸಾಗುವಳಿಗೆ ಯೋಗ್ಯವಾದ ಬಂಜರು | ಖಾಯಂ ಗೋಮಾಳ | ವೃಕ್ಷ ಮತ್ತು ತೋಪುಗಳು | ಒಟ್ಟು | ಚಾಲ್ತಿ | ಇತರೆ | ಒಟ್ಟು |
| ೧೯೬೦-೬೧ | ೨೧೯೯೯೧ | ೩೮೫೯೯೭ | ೪೦೩೬೯ | ೬೪೬೩೫೭ | ೧೩೩೮೬೧ | ೧೧೧೧೨೦ | ೨೪೪೯೮೧ |
| ೧೯೭೦-೭೧ | ೭೫೪೯೦ | ೧೪೨೦೧೯ | ೧೮೨೪೦ | ೨೩೫೭೪೯ | ೧೧೨೦೮೩ | ೬೨೭೬೨ | ೧೭೪೮೪೫ |
| ೧೯೮೦-೮೧ | ೭೧೧೭೨ | ೧೧೭೪೪೪ | ೧೯೮೨೦ | ೨೦೮೪೩೬ | ೧೨೦೪೨೪ | ೪೧೫೭೮ | ೧೬೨೦೦೨ |
| ೧೯೯೦-೯೧ | ೬೬೩೯೨ | ೧೦೪೯೮೩ | ೨೦೧೪೧ | ೧೯೧೫೧೬ | ೭೧೭೬೫ | ೫೧೧೬೭ | ೧೨೨೯೩೨ |
| ೧೯೯೫-೯೬ | ೬೬೩೮೮ | ೧೦೪೪೯೪ | ೨೦೧೪೧ | ೧೯೧೦೨೩ | ೬೭೬೧೬ | ೩೭೯೪೬ | ೧೦೫೫೬೨ |
| ೨೦೦೦-೦೧ | ೬೨೬೮೧ | ೮೬೨೩೯ | ೨೦೧೪೧ | ೧೬೯೦೬೧ | ೬೦೭೯೦ | ೬೧೯೬ | ೬೬೯೮೬ |
| ೨೦೦೫-೦೬ | ೬೨೬೪೨ | ೭೬೫೪೩ | ೨೦೧೪೧ | ೧೫೯೩೨೬ | ೫೪೮೮೦ | ೩೪೧೮೬ | ೮೯೦೬೬ |
| ೨೦೦೬-೦೭ | ೬೨೬೪೨ | ೭೬೫೪೩ | ೨೧೦೩೩ | ೧೬೦೧೨೮ | ೧೬೫೫೧೭ | ೩೪೧೬೬ | ೧೯೯೬೮೩ |
| ೨೦೦೭-೦೮ | ೬೨೬೪೨ | ೭೬೫೪೩ | ೨೧೦೩೩ | ೧೬೦೧೨೮ | ೬೯೩೮೪ | ೩೦೦೯೩ | ೯೯೪೭೭ |
| ೨೦೦೯-೧೦ | ೬೨೬೪೨ | ೭೬೫೪೩ | ೨೧೦೩೩ | ೧೬೦೧೨೮ | ೧೧೨೭೯೨ | ೩೧೨೫೬ | ೧೪೪೦೪೮ |
| ೨೦೧೧-೧೨ | ೬೨೬೪೨ | ೭೬೪೫೩ | ೨೧೦೩೩ | ೧೬೦೧೨೮ | ೧೬೭೭೨೯ | ೨೯೬೮೪ | ೧೯೭೪೧೩ |

**ಆಧಾರ: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು**

## ಭೂ–ಹಿಡುವಳಿ

ಭೂ–ಹಿಡುವಳಿ (ಕೃಷಿಗಣತಿ) ಅನ್ನು ಪ್ರತಿ ಐದು ವರ್ಷಗಳಿಗೊಮ್ಮೆ ನಡೆಸಲಾಗುತ್ತಿದ್ದು, ಜನಸಂಖ್ಯಾ ಹೆಚ್ಚಳದಿಂದಾಗಿ ದೊಡ್ಡ ಭೂ–ಹಿಡುವಳಿದಾರರ ಸಂಖ್ಯೆ ಕುಸಿತಗೊಂಡು, ಚಿಕ್ಕ ಹಿಡುವಳಿದಾರರ ಸಂಖ್ಯೆ ಹೆಚ್ಚಳಗೊಂಡಿರುವುದು ಅಂಕಿಅಂಶಗಳಿಂದ ಸ್ಪಷ್ಟವಾಗುತ್ತದೆ. ಜಿಲ್ಲೆಯಲ್ಲಿ ಒಂದು(೧ ಹೆಕ್ಟೇರ್‌ಕ್ಕಿಂತ ಕಡಿಮೆ) ಹೆಕ್ಟೇರ್‌ಗಿಂತ ಕಡಿಮೆ ಭೂ–ಹಿಡುವಳಿ ಹೊಂದಿದ್ದರೆ ಅಂತವರನ್ನು ಅತಿಸಣ್ಣ ಭೂ–ಹಿಡುವಳಿದಾರರೆಂತಲೂ, ೧೯೮೦–೮೧ರಲ್ಲಿ ಅತಿ ಸಣ್ಣ ಭೂ–ಹಿಡುವಳಿದಾರರ ಸಂಖ್ಯೆ ೧,೫೭,೦೦೯ (೭೬,೨೧೨ ಹೆ) ಆಗಿತ್ತು. ಒಂದರಿಂದ–ಎರಡು (೧–೨) ಹೆಕ್ಟೇರ್ ಭೂ–ಹಿಡುವಳಿ ಹೊಂದಿದ್ದರೆ ಅತಂಹವರನ್ನು ಸಣ್ಣ ಭೂ–ಹಿಡುವಳಿದಾರರೆಂದೂ, ಅವರ ಸಂಖ್ಯೆ ೮೮,೨೪೪ (೧,೨೭,೮೭೨ ಹೆಕ್ಟೇರ್), ಎರಡರಿಂದ–ನಾಲ್ಕು (೨–೪ಹೆ.) ಹೆಕ್ಟೇರ್ ಭೂ–ಹಿಡುವಳಿ ಹೊಂದಿದ್ದರೆ, ಅಂತಹವರನ್ನು ಅರೆಮಧ್ಯಮ ಭೂ–ಹಿಡುವಳಿದಾರರೆಂದೂ, ಅವರ ಸಂಖ್ಯೆ ೫೬,೬೪೨ (೧,೫೬,೧೦೬ ಹೆ), ನಾಲ್ಕರಿಂದ–ಹತ್ತು (೪–೧೦ ಹೆ.) ಹೆಕ್ಟೇರ್ ಭೂ–ಹಿಡುವಳಿ ಹೊಂದಿದ್ದರೆ, ಅಂತಹವರನ್ನು ಮಧ್ಯಮ ಭೂ–ಹಿಡುವಳಿದಾರರೆಂದೂ ಅವರ ಸಂಖ್ಯೆ ೨೯,೬೪೯ (೧,೭೩,೨೮೪ ಹೆ) ಹಾಗೂ ಹತ್ತು (೧೦ ಹೆ. ಹೆಚ್ಚು) ಹೆಕ್ಟೇರ್‌ಗಿಂತ ಹೆಚ್ಚು ಭೂ–ಹಿಡುವಳಿ ಹೊಂದಿದ್ದರೆ, ಅಂತಹವರನ್ನು ದೊಡ್ಡ ಭೂ–ಹಿಡುವಳಿದಾರರೆಂದೂ, ಅವರ ಸಂಖ್ಯೆ ೬,೨೫೬ (೯೯,೫೬೩ ಹೆ) ಆಗಿರುತ್ತದೆ. ಜನಸಂಖ್ಯಾ ಹೆಚ್ಚಳದಿಂದಾಗಿ ದೊಡ್ಡ

ಭೂ-ಹಿಡುವಳಿದಾರರ ಸಂಖ್ಯೆ ಕಡಿಮೆಯಾಗಿರುವುದು ಸ್ಪಷ್ಟವಾಗಿದೆ. ಆವರಣದಲ್ಲಿ ನೀಡಿರುವುದು ಭೂ-ಹಿಡುವಳಿದಾರರು ಹೊಂದಿರುವ ಭೂ-ವಿಸ್ತೀರ್ಣವನ್ನು ಹೆಕ್ಟೇರುಗಳಲ್ಲಿ ನೀಡಿದೆ. ೨೦೦೫-೦೬ರಲ್ಲಿ ೨,೦೬,೯೮೯ ಅತಿ ಸಣ್ಣ (ಒಂದು ಹೆಕ್ಟೇರ್‌ಗಿಂತ ಕಡಿಮೆ) ಭೂ-ಹಿಡುವಳಿದಾರರು ೯೯,೦೧೫ ಹೆಕ್ಟೇರ್ ವಿಸ್ತೀರ್ಣ ಹೊಂದಿದ್ದರು. ಹಾಗೆಯೇ ೧,೦೭,೯೨೪ ಸಣ್ಣ (೧-೨ ಹೆ) ಹಿಡುವಳಿದಾರರು ೧,೫೪,೦೪೩ ಹೆಕ್ಟೇರ್ ವಿಸ್ತೀರ್ಣ ಹೊಂದಿದ್ದರೆ, ೭೧,೩೩೫ ಮಂದಿ ಅರೆಮಧ್ಯಮ (೨-೪ ಹೆ) ಭೂ-ಹಿಡುವಳಿದಾರರು ೧೯೫,೩೭೫ ಹೆಕ್ಟೇರ್ ವಿಸ್ತೀರ್ಣ, ೩೧,೯೨೯ ಮಂದಿ ಮಧ್ಯಮ (೪-೧೦ ಹೆ.) ಭೂ-ಹಿಡುವಳಿದಾರರು ೧,೮೪,೬೭೦ ಹೆಕ್ಟೇರ್ ವಿಸ್ತೀರ್ಣ ಹೊಂದಿದ್ದರು. ಹಾಗೂ ೪,೪೨೬ ಮಂದಿ ದೊಡ್ಡ (೧೦ ಹೆಕ್ಟೇರ್‌ಗಿಂತ ಹೆಚ್ಚು) ಹಿಡುವಳಿದಾರರು ೬೫,೫೩೭ ಹೆ. ವಿಸ್ತೀರ್ಣ ಹೊಂದಿದ್ದರು. ಹೀಗೆ ಒಟ್ಟು ೪,೨೨,೬೦೩ ಭೂ-ಹಿಡುವಳಿದಾರರಿದ್ದು, ೬,೯೮,೬೪೦ ಹೆಕ್ಟೇರ್ ವಿಸ್ತೀರ್ಣ ಹೊಂದಿದ್ದರು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೧೯ಅನ್ನು ನೋಡಿ.

**ಕೋಷ್ಟಕ ೮.೧೯, ೧೯೯೫-೯೬ ರಿಂದ ೨೦೧೦-೧೧ರ ವರೆಗಿನ ಭೂ- ಹಿಡುವಳಿದಾರರ ವಿವರ**

| ಕ್ರ.ಸಂ | ಭೂ-ಹಿಡುವಳಿದಾರರ ವಿವರ | | ೧೯೯೫-೯೬ | ೨೦೦೦-೦೧ | ೨೦೦೫-೦೬ | ೨೦೧೦-೧೧ |
|---|---|---|---|---|---|---|
| ೧ | ಅತಿಸಣ್ಣ (೧ ಹೆಕ್ಟೇರಿಗಿಂತ ಕಡಿಮೆ) | ಸಂ | ೧,೯೯೭೩೭ | ೨,೦೩,೪೬೪ | ೨,೦೬,೯೮೯ | ೧೯೭೨೬೩ |
| | | ವಿ | ೯೬,೭೪೦ | ೯೬,೭೩೩ | ೯೯,೦೧೫ | ೧೦೮೯೮೩.೦೨ |
| ೨ | ಸಣ್ಣ (೧-೨ಹೆ) | ಸಂ | ೧,೦೪,೮೪೪ | ೧,೦೭,೩೪೨ | ೧,೦೭,೯೨೪ | ೧೧೩೪೩೬ |
| | | ವಿ | ೧,೫೧,೦೫೭ | ೧,೫೩,೩೧೯ | ೧,೫೪,೦೪೩ | ೧೫೯೯೪೦.೪೪ |
| ೩ | ಅರೆಮಧ್ಯಮ (೨-೪ಹೆ) | ಸಂ | ೬೮,೬೭೪ | ೭೧,೨೮೮ | ೭೧,೩೩೫ | ೭೧೦೭೧ |
| | | ವಿ | ೧,೮೭,೯೪೧ | ೧,೯೫,೦೫೫ | ೧,೯೫,೩೭೫ | ೧೯೨೪೩೨.೫೪ |
| ೪ | ಮಧ್ಯಮ (೪-೧೦ ಹೆ) | ಸಂ | ೩೧,೬೮೮ | ೩೨,೨೪೮ | ೩೧,೯೨೯ | ೨೯೧೩೨ |
| | | ವಿ | ೧,೮೨,೪೩೩ | ೧,೮೪,೯೬೪ | ೧,೮೪,೬೭೦ | ೧೬೩೫೩೩.೫೭ |
| ೫ | ದೊಡ್ಡ (೧೦ ಹೆಗಿಂತ ಹೆಚ್ಚು) | ಸಂ | ೪,೮೭೨ | ೪,೮೩೧ | ೪,೪೨೬ | ೩೫೨೭ |
| | | ವಿ | ೭೩,೫೯೯ | ೭೧,೯೩೧ | ೬೫,೫೩೭ | ೫೧೪೯೮.೮೫ |
| | ಒಟ್ಟು | ಸಂ | ೪,೦೯,೮೧೫ | ೪,೧೯೧,೭೩ | ೪,೨೨,೬೦೩ | ೪೧೪೪೨೮ |
| | | ವಿ | ೬,೯೧,೭೭೦ | ೭,೦೨,೦೦೨ | ೬,೯೮,೬೪೦ | ೬೭೬೩೮೮.೪೨ |

**ಆಧಾರ: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು (ಸಂ: ಹಿಡುವಳಿದಾರರ ಸಂಖ್ಯೆ, ವಿ: ವಿಸ್ತೀರ್ಣ).**

## ಬೆಳೆಗಳು

ತುಮಕೂರು ಜಿಲ್ಲೆಯಲ್ಲಿ ರಾಗಿ, ಬತ್ತ, ಜೋಳ, ಸಜ್ಜೆ, ಮೆಕ್ಕೆಜೋಳ ಮೊದಲಾದ ಏಕದಳ ಹಾಗೂ ಉಪತೃಣ ಧಾನ್ಯಗಳನ್ನೂ, ತೊಗರಿ, ಉದ್ದು, ಹುರಳಿಕಾಳು, ಹೆಸರುಕಾಳು, ಅವರೆಕಾಳು, ಹಲಸಂದೆ ಕಾಳು ಮೊದಲಾದ ದ್ವಿದಳ ಧಾನ್ಯಗಳನ್ನೂ, ಕಡಲೆಕಾಯಿ,ಹರಳು, ಹುಚ್ಚೆಳ್ಳು, ಎಳ್ಳು, ಸಾಸಿವೆ, ಸೂರ್ಯಕಾಂತಿ ಮೊದಲಾದ ಎಣ್ಣೆಕಾಳುಗಳನ್ನೂ, ಹತ್ತಿ, ಕಬ್ಬು, ತಂಬಾಕು, ಮೊದಲಾದ ವಾಣಿಜ್ಯ ಬೆಳೆಗಳನ್ನೂ, ಈರುಳ್ಳಿ, ಆಲೂಗೆಡ್ಡೆ, ಟಮೋಟೋ, ಹುರಳಿಕಾಯಿ, ಕೋಸು ಮೊದಲಾದ ತರಕಾರಿಗಳನ್ನೂ ಹಾಗೂ ಬಾಳೆಹಣ್ಣು, ಗೆಣಸು, ದ್ರಾಕ್ಷಿ, ಮಾವಿನಹಣ್ಣು, ಪಪ್ಪಾಯ, ಸಪೋಟ, ನಿಂಬೆ, ಗೋಡಂಬಿ, ತೆಂಗು, ಅಡಿಕೆ, ದಾಳಿಂಬೆ ಮೊದಲಾದ ತೋಟಗಾರಿಕಾ ಬೆಳೆಗಳನ್ನೂ ಬೆಳೆಯಲಾಗುತ್ತಿದೆ.

ಜಿಲ್ಲೆಯಲ್ಲಿ ೧೯೭೯-೮೦ರಲ್ಲಿ ೨,೭೭,೮೮೩ ಹೆಕ್ಟೇರ್‌ನಲ್ಲಿ ಏಕದಳ ಮತ್ತು ಉಪತೃಣ ಧಾನ್ಯಗಳನ್ನು ಹಾಗೂ ೯೫,೪೨೭ ಹೆಕ್ಟೇರ್‌ನಲ್ಲಿ ದ್ವಿದಳ ಧಾನ್ಯಗಳನ್ನು, ಹೀಗೆ ೩,೭೩,೩೧೦ ಹೆಕ್ಟೇರ್‌ಗಳಲ್ಲಿ ಒಟ್ಟು ಆಹಾರ ಪದಾರ್ಥಗಳನ್ನು ಬೆಳೆಯಲಾಗಿತ್ತು. ಅಂದರೆ ಒಟ್ಟು ಬಿತ್ತನೆ ಪ್ರದೇಶದಲ್ಲಿ ಶೇ.೮೧.೬೮ರಷ್ಟು ಪ್ರದೇಶದಲ್ಲಿ ಆಹಾರ ಪದಾರ್ಥಗಳನ್ನು

ಬೆಳೆಯಲಾಗಿತ್ತು. ಅಲ್ಲದೆ ೭೮,೯೫೦ ಹೆಕ್ಟೇರ್‌ನಲ್ಲಿ ಎಣ್ಣೆಕಾಳುಗಳು, ೧,೨೪೨ ಹೆಕ್ಟೇರ್‌ನಲ್ಲಿ ನಾರಿನ ಉತ್ಪನ್ನಗಳನ್ನು ಹಾಗೂ ೭,೨೭೮ ಹೆಕ್ಟೇರ್‌ನಲ್ಲಿ ಇತರೆ ಆಹಾರೇತರ ಬೇಳೆಗಳು ಸೇರಿದಂತೆ ಒಟ್ಟು ೮೭,೪೭೦ ಹೆಕ್ಟೇರ್‌ನಲ್ಲಿ ಬೆಳೆಗಳನ್ನು ಬೆಳೆಯಲಾಗಿತ್ತು. ೧೯೮೩-೮೪ರಲ್ಲಿ ೨,೬೭,೫೩೬ ಹೆಕ್ಟೇರ್‌ನಲ್ಲಿ ಏಕದಳ ಮತ್ತು ಉಪತೃಣ ಧಾನ್ಯಗಳನ್ನು ಹಾಗೂ ೮೮,೫೯೫ ಹೆಕ್ಟೇರ್‌ನಲ್ಲಿ ದ್ವಿದಳ ಧಾನ್ಯಗಳನ್ನು, ಹೀಗೆ ೩,೫೬,೧೩೧ ಹೆಕ್ಟೇರ್‌ನಲ್ಲಿ ಒಟ್ಟು ಆಹಾರ ಪದಾರ್ಥಗಳನ್ನು ಬೆಳೆಯಲಾಗಿತ್ತು. ಅಲ್ಲದೆ ೨,೨೬೫ ಹೆಕ್ಟೇರ್‌ನಲ್ಲಿ ಕಬ್ಬು, ೧೦,೨೮೫ ಹೆಕ್ಟೇರ್‌ನಲ್ಲಿ ಮಸಾಲೆ ಮತ್ತು ಸಾಂಬಾರು ಪದಾರ್ಥಗಳನ್ನು ಹಾಗೂ ೪,೭೭೯ ಹೆಕ್ಟೇರ್‌ನಲ್ಲಿ ಹಣ್ಣುಗಳನ್ನು ಬೆಳೆಯಲಾಗಿತ್ತು. ೧೯೯೯-೨೦೦೦ರಲ್ಲಿ ೨,೨೨,೭೨೫ ಹೆಕ್ಟೇರ್‌ನಲ್ಲಿ ಏಕದಳ ಮತ್ತು ಉಪತೃಣ ಧಾನ್ಯಗಳು, ೭೨,೫೧೭ ಹೆಕ್ಟೇರ್‌ನಲ್ಲಿ ದ್ವಿದಳ ಧಾನ್ಯಗಳು ಸೇರಿ ೨,೯೫,೨೪೨ ಹೆಕ್ಟೇರ್‌ನಲ್ಲಿ ಒಟ್ಟು ಆಹಾರ ಧಾನ್ಯಗಳನ್ನು ಬೆಳೆಯಲಾಗಿತ್ತು. ಅಲ್ಲದೆ ೧,೬೭೪ ಹೆಕ್ಟೇರ್‌ನಲ್ಲಿ ಕಬ್ಬು, ೧೩,೮೦೭ ಹೆಕ್ಟೇರ್‌ನಲ್ಲಿ ಮಸಾಲೆ ಮತ್ತು ಸಾಂಬಾರ ಪದಾರ್ಥಗಳು, ೧೧,೨೩೫ ಹೆಕ್ಟೇರ್‌ನಲ್ಲಿ ಹಣ್ಣುಗಳು, ೧,೬೮೪ ಹೆಕ್ಟೇರ್‌ನಲ್ಲಿ ತರಕಾರಿಗಳನ್ನು ಬೆಳೆಯಲಾಗಿತ್ತು. ೧,೮೮,೯೮೮ ಹೆಕ್ಟೇರ್‌ನಲ್ಲಿ ಎಣ್ಣೆಕಾಳುಗಳನ್ನು ಬೆಳೆಯಲಾಗಿತ್ತು. ೨೦೦೯-೧೦ರಲ್ಲಿ ೨,೪೭,೯೧೧ ಹೆಕ್ಟೇರ್‌ನಲ್ಲಿ ಒಟ್ಟು ಏಕದಳ ಹಾಗೂ ಉಪತೃಣ ಧಾನ್ಯಗಳು, ೬೫,೦೪೦ ಹೆಕ್ಟೇರ್‌ನಲ್ಲಿ ದ್ವಿದಳ ಧಾನ್ಯಗಳು ಸೇರಿ ೩,೧೨,೨೩೧ ಹೆಕ್ಟೇರ್‌ನಲ್ಲಿ ಒಟ್ಟು ಆಹಾರ ಧಾನ್ಯಗಳನ್ನು ಬೆಳೆಯಲಾಗಿತ್ತು. ೨೧,೬೩೫ ಹೆಕ್ಟೇರ್‌ನಲ್ಲಿ ಹಣ್ಣುಗಳನ್ನು ಬೆಳೆಯಲಾಗಿದ್ದರೆ, ೨,೫೯೨ ಹೆಕ್ಟೇರ್‌ನಲ್ಲಿ ತರಕಾರಿಗಳನ್ನು ಬೆಳೆಯಲಾಗಿತ್ತು. ೧,೧೪,೫೩೨ ಹೆಕ್ಟೇರ್‌ನಲ್ಲಿ ಎಣ್ಣೆಕಾಳುಗಳನ್ನು ಬೆಳೆಯಲಾಗಿತ್ತು. ೧೯೮೦-೮೧ ರಿಂದ ೨೦೧೦-೧೧ರ ವರೆಗಿನ ಅವಧಿಯಲ್ಲಿ ಆಹಾರ ಪದಾರ್ಥಗಳ ಉತ್ಪಾದನಾ

ವಿವರಗಳನ್ನು ಕೋಷ್ಟಕ ೮.೨೦ರಲ್ಲಿ ನೀಡಲಾಗಿದೆ.

**ಕೋಷ್ಟಕ ೮..೨೦ ಜಿಲ್ಲೆಯಲ್ಲಿ ೧೯೮೦-೮೧ರಿಂದ ೨೦೧೦-೧೧ರ ವರೆಗಿನ ಆಹಾರ ಪದಾರ್ಥಗಳ ಉತ್ಪಾದನಾ ವಿವರ**

| ಆಹಾರ ಪದಾರ್ಥಗಳು | | ೧೯೮೦-೮೧ | ೧೯೮೫-೮೬ | ೧೯೯೦-೯೧ | ೧೯೯೫-೯೬ | ೨೦೦೦-೦೧ | ೨೦೦೫-೦೬ | ೨೦೦೯-೧೦ | ೨೦೧೦-೧೧ |
|---|---|---|---|---|---|---|---|---|---|
| ಏಕದಳ ಮತ್ತು ಉಪತೃಣ ಧಾನ್ಯಗಳು | ವಿಸ್ತೀರ್ಣ | ೨೭೧೩೩೮ | ೨೧೮೬೧೦ | ೨೨೯೦೦೮ | ೨೨೦೦೩೭ | ೨೭೭೨೪೩ | ೨೫೬೫೫೭ | ೨೪೭೧೯೧ | ೨೪೦೬೫೮ |
| | ಉತ್ಪನ್ನ | ೨೫೨೪೩೩ | ೨೧೬೬೮೩ | ೨೧೨೬೫೭ | ೩೨೭೦೭೯ | ೫೦೧೩೬೮ | ೪೫೨೨೦೫ | ೩೯೨೦೩ | ೪೬೬೨೬೫ |
| | ಇಳುವರಿ | ೯೭೯ | ೧೦೪೩ | ೯೭೭ | ೧೫೬೫ | ೧೯೦೪ | ೧೮೫೫ | ೧೬೭೩ | ೨೦೩೯ |
| ದ್ವಿದಳ ಧಾನ್ಯಗಳು | ವಿಸ್ತೀರ್ಣ | ೮೮೮೮೦ | ೯೧೪೦೭ | ೫೮೦೮೨ | ೬೫೨೯೭ | ೬೦೦೮೩ | ೬೧೦೯೦ | ೬೫೦೪೦ | ೬೭೨೫೭ |
| | ಉತ್ಪನ್ನ | ೨೫೯೪೬ | ೨೬೩೨೧ | ೧೮೧೩೭ | ೩೫೨೦೯ | ೨೪೮೨೦ | ೩೧೧೦೧ | ೩೬೧೩೬ | ೩೪೧೪೧ |
| | ಇಳುವರಿ | ೩೦೭ | ೩೦೩ | ೩೨೯ | ೫೬೮ | ೪೩೫ | ೫೩೬ | ೫೮೫ | ೫೩೪ |
| ಒಟ್ಟು ಆಹಾರ ಧಾನ್ಯಗಳು | ವಿಸ್ತೀರ್ಣ | ೩೬೦೨೧೮ | ೩೧೦೦೧೭ | ೨೮೭೦೯೦ | ೨೮೫೩೩೪ | ೩೭೩೨೬ | ೩೧೭೬೪೭ | ೩೧೨೨೩೧ | ೩೦೭೯೧೫ |
| | ಉತ್ಪನ್ನ | ೨೭೮೩೭೯ | ೨೪೩೦೦೪ | ೨೩೦೭೯೪ | ೩೬೨೨೮೮ | ೫೨೬೧೮೮ | ೪೮೩೩೦೬ | ೪೨೮೯೩೯ | ೫೦೦೪೦೬ |
| | ಇಳುವರಿ | ೮೧೪ | ೮೨೫ | ೮೪೬ | ೧೩೩೭ | ೧೬೪೨ | ೧೬೦೨ | ೧೪೪೬ | ೧೭೧೧ |
| ಎಣ್ಣೆ ಬೀಜಗಳು (ತೆಂಗುಹೊರತುಪಡಿಸಿ) | ವಿಸ್ತೀರ್ಣ | ೮೬೭೬೮ | ೧೦೭೮೯೫ | ೧೮೯೦೨೭ | ೧೮೬೮೨೮ | ೧೮೩೧೩೪ | ೧೯೭೩೨೪ | ೧೧೪೫೩೨ | ೧೪೪೯೨೯ |
| | ಉತ್ಪನ್ನ | ೪೨೮೧೩ | ೬೫೬೦೪ | ೯೬೧೨೫ | ೨೧೮೦೭೩ | ೨೪೫೧೩೧ | ೯೪೧೯೮ | ೪೫೩೩೯ | ೭೪೮೧೭ |
| | ಇಳುವರಿ | ೫೧೯ | ೬೪೦ | ೫೩೫ | ೧೨೨೯ | ೧೪೦೯ | ೫೦೩ | ೪೧೭ | ೫೪೩ |

**ಆಧಾರ: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು. ವಿಸ್ತೀರ್ಣ(ಹೆಕ್ಟೇರುಗಳಲ್ಲಿ), ಉತ್ಪನ್ನ(ಟನ್ನುಗಳಲ್ಲಿ) ಇಳುವರಿ (ಹೆ.ಗೆ. ಕೆ.ಜಿಗಳಲ್ಲಿ)**

# ನೀರಾವರಿ

ಜಿಲ್ಲೆಯು ವ್ಯವಸಾಯ ಪ್ರಧಾನ ಹಾಗೂ ಮಳೆಯಾಧಾರಿಸಿದ್ದು, ಯಾವುದೇ ಬೃಹತ್ ಪ್ರಮಾಣದ ನೀರಾವರಿ ಯೋಜನೆಗಳು ಜಿಲ್ಲೆಯಲ್ಲಿರುವುದಿಲ್ಲ. ಜಿಲ್ಲೆಯಲ್ಲಿ ಬೋರನಕಣಿವೆ (೧೮೯೨) ಚಿಕ್ಕನಾಯಕನಹಳ್ಳಿ ತಾಲ್ಲೂಕು, ಶಂಕನಪುರ ಅಣೆಕಟ್ಟು (೧೯೦೧), ಮಾರ್ಕೊಂಡನಹಳ್ಳಿ ಜಲಾಶಯ (೧೯೩೯) ಹಾಗೂ ಮಂಗಳ (೧೯೬೦) ಕುಣಿಗಲ್ ತಾಲ್ಲೂಕು ಹಾಗೂ ತೀತಾ ಡ್ಯಾಂ ಕೊರಟಗೆರೆ ತಾಲ್ಲೂಕಿನಲ್ಲಿ ನಿರ್ಮಿಸಿದ್ದರೂ, ಇವುಗಳಿಗೆ ನೀರಿನ ಮೂಲದ ಕೊರತೆಯಿದೆ. ಹಾಗಾಗಿ ಮಳೆ ಬಂದರೆ ಮಾತ್ರ ತುಂಬುವ ಇವು ಅರೆನೀರಾವರಿ ಬೆಳೆಗಳನ್ನು ಮಾತ್ರ ಬೆಳೆಯಲು ನೆರವಾಗುತ್ತಿವೆ. ಜಿಲ್ಲೆಯಲ್ಲಿ ೧೯೧೩–೧೪ರಲ್ಲಿ ೩,೬೬೪ ಎಕರೆ ನದಿಗಳಿಂದ, ೪೯,೩೩೧ ಹೆ ಕೆರೆಗಳಿಂದ, ೧,೪೮೨ ಹೆ ಕಾಲುವೆಗಳಿಂದ, ೬೪೧ ಹೆ ಕೆರೆಗಳಿಂದ, ೧೭,೪೨೫ ಹೆ ಬಾವಿಗಳಿಂದ, ೧,೬೭೬ ಹೆ ಸ್ಪ್ರಿಂಗ್ಸ್ ಅಥವಾ ತಲಪರಿಗೆಗಳಿಂದ, ಹೀಗೆ ಒಟ್ಟು ೭೨,೦೩೬ ಹೆ ನೀರಾವರಿ ಸೌಲಭ್ಯ ಪಡೆದಿತ್ತು. ಹಾಗೆಯೇ ೧೯೫೮–೫೯ರಲ್ಲಿ ೨೯೨ ಹೆ ಕಾಲುವೆಗಳಿಂದ, ೩೯,೩೪೫ ಹೆ ಕೆರೆಗಳಿಂದ, ೯,೪೬೦ ಹೆ ಬಾವಿಗಳಿಂದ ಹಾಗೂ ೨,೦೨೫ ಹೆ ಇತರೆ ಮೂಲಗಳಿಂದ ನೀರಾವರಿ ಸೌಲಭ್ಯ ಪಡೆದಿತ್ತು. ೧೯೭೦–೭೧ರಲ್ಲಿ ಒಟ್ಟು ೭೭,೬೬೩ ಹೆಕ್ಟೇರುಗಳಿಗೆ ನೀರಾವರಿ ಸೌಲಭ್ಯವಿದ್ದು, ೧,೦೨೩ ಹೆಕ್ಟೇರ್ ಕಾಲುವೆಗಳಿಂದಲೂ, ೩೮,೮೧೨ ಹೆಕ್ಟೇರ್ ಕೆರೆಗಳಿಂದಲೂ, ೩೧,೩೨೩ ಹೆಕ್ಟೇರ್ ಬಾವಿಗಳಿಂದಲೂ ಹಾಗೂ ೬,೫೦೫ ಹೆಕ್ಟೇರ್ ಇತರೆ ಮೂಲಗಳಿಂದ ನೀರಾವರಿ ಸೌಲಭ್ಯ ಕಲ್ಪಿಸಲಾಗಿತ್ತು. ಜಿಲ್ಲೆಯಲ್ಲಿ ಇದೇ ಅವಧಿಯಲ್ಲಿ ೨,೭೯,೨೫೦ ಬಾವಿಗಳಿದ್ದವು. ೧೯೭೯–೮೦ರಲ್ಲಿ ೩೨೪ ಹೆಕ್ಟೇರ್ ಕಾಲುವೆಗಳಿಂದ ನೀರಾವರಿಯಾಗಿದ್ದರೆ, ೩೧,೬೫೪ ಹೆಕ್ಟೇರ್ ಕೆರೆಗಳಿಂದ, ೨೩,೪೧೫ ಹೆಕ್ಟೇರ್ ಬಾವಿಗಳಿಂದ, ೨೧೨ ಹೆಕ್ಟೇರು ಇತರೆ ಮೂಲಗಳಿಂದ ಹೀಗೆ ಒಟ್ಟು ೫೫,೬೦೭ ಹೆಕ್ಟೇರ್ ನೀರಾವರಿ ಸೌಲಭ್ಯ ಪಡೆದಿತ್ತು. ೨೦೦೪–೦೫ರಲ್ಲಿ ೭೩,೯೦೦ ಕೊಳವೆಬಾವಿಗಳು ಹಾಗೂ ೪೫,೯೦೦ ತೆರೆದ ಬಾವಿಗಳಿದ್ದವು. ಏಳು ಏತನೀರಾವರಿಗಳಿದ್ದವು. ೪೨೬ ಕೆರೆಗಳು ೪೦ ಹೆಕ್ಟೇರ್‌ಕ್ಕಿಂತಲೂ ಹೆಚ್ಚು ಅಚ್ಚುಕಟ್ಟು ಹೊಂದಿದ್ದರೆ, ೧,೨೧೬ ಕೆರೆಗಳು ೪೦ ಹೆಕ್ಟೇರ್‌ಗಿಂತಲೂ ಕಡಿಮೆ ಅಚ್ಚುಕಟ್ಟು ಹೊಂದಿದ್ದವು. ಹಾಗಾಗಿ ೨,೫೦೦ ಹೆಕ್ಟೇರ್ ಕಾಲುವೆಗಳಿಂದ, ೧೦,೩೦೦ ಹೆಕ್ಟೇರ್ ಕೆರೆಗಳಿಂದ, ೨,೭೦೦ ಹೆಕ್ಟೇರ್ ಬಾವಿಗಳಿಂದ, ೧,೧೭,೨೦೦ ಹೆಕ್ಟೇರ್ ಕೊಳವೆ ಬಾವಿಗಳಿಂದ ಹೀಗೆ ಒಟ್ಟು ೧,೩೨,೭೦೦ ಹೆಕ್ಟೇರ್ ಪ್ರದೇಶ ನೀರಾವರಿ ಸೌಲಭ್ಯ ಪಡೆದಿತ್ತು. ೨೦೧೦–೧೧ರಲ್ಲಿ ೪,೧೯೯ ಹೆಕ್ಟೇರ್ ಬಾವಿಗಳಿಂದಲೂ, ೨೨,೪೩೯ ಹೆಕ್ಟೇರ್ ಕೆರೆಗಳಿಂದಲೂ, ೧,೫೪೭ ಹೆಕ್ಟೇರ್ ಬಾವಿಗಳಿಂದಲೂ, ೧೬,೫೩೬ ಹೆಕ್ಟೇರ್ ಕೊಳವೆಬಾವಿಗಳಿಂದಲೂ ಹೀಗೆ ಒಟ್ಟು ೧,೯೩,೫೪೭ ಹೆಕ್ಟೇರ್ ಪ್ರದೇಶ ನೀರಾವರಿ ಸೌಲಭ್ಯ ಪಡೆದಿತ್ತು. ೧೯೬೦–೬೧ರಿಂದ ೨೦೧೧–೧೨ ರವರೆಗೆ ವಿವಿಧ

ಮೂಲಗಳಿಂದ ನೀರಾವರಿಯಾದ ವಿವರಗಳನ್ನು ಕೋಷ್ಟಕ ೮.೨೧ರಲ್ಲಿ ನೀಡಲಾಗಿದೆ.

## ಕೋಷ್ಟಕ: ೮.೨೧ರಲ್ಲಿ ಜಿಲ್ಲೆಯಲ್ಲಿ ವಿವಿಧ ಮೂಲಗಳಿಂದ ಒಟ್ಟು ನೀರಾವರಿಯಾದ ಕ್ಷೇತ್ರ

ಕ್ಷೇತ್ರ: ಹೆಕ್ಟೇರ್‌ಗಳಲ್ಲಿ

| ನೀರಾವರಿಯ ಮೂಲಗಳು | ೧೯೬೦-೬೧ | ೧೯೭೦-೭೧ | ೧೯೮೦-೮೧ | ೧೯೯೦-೯೧ | ೧೯೯೫-೯೬ | ೨೦೦೦-೦೧ | ೨೦೦೫-೦೬ | ೨೦೦೬-೦೭ | ೨೦೦೯-೧೦ | ೨೦೧೧-೧೨ |
|---|---|---|---|---|---|---|---|---|---|---|
| ಕಾಲುವೆಗಳು | ೭,೨೧೭ | ೮೦೯ | ೨೯೯ | ೨೨೯ | ೨೭೦ | ೭೩೨೧ | ೫೦೩೪ | ೩,೫೧೬ | ೪,೧೯೯ | ೪,೧೯೯ |
| ಕೆರೆಗಳು | ೩೮,೯೬೧ | ೩೭,೨೧೩ | ೩೯,೨೮೮ | ೨೮,೦೧೯ | ೧೮,೨೦೨ | ೫೦,೪೬೪ | ೨೫,೪೮೫ | ೨೭,೦೩೫ | ೨೨,೪೩೯ | ೧೩,೨೬೫ |
| ಬಾವಿಗಳು | ೧೧,೨೯೩ | ೩೧,೨೧೫ | ೩೧,೮೪೨ | ೩೯,೭೨೪ | ೨೦,೫೪೯ | ೧೯,೦೩೫ | ೨,೦೮೧ | ೧,೭೭೩ | ೧,೫೪೭ | ೮೯೬ |
| ಕೊಳವೆ ಬಾವಿಗಳಿಂದ | ೦ | ೦ | ೦ | ೧೫,೨೧೪ | ೫೧,೦೭೧ | ೯೨,೬೩೧ | ೧,೪೧,೦೨೩ | ೧,೨೯,೧೮೦ | ೧,೬೫,೩೬೨ | ೧,೬೪,೭೮೧ |
| ಏತನೀರಾವರಿಯಿಂದ | ೦ | ೦ | ೦ | ೧೫೧ | ೧೫೧ | ೦ | ೦ | ೦ | ೦ | ೦ |
| ಇತರೆ ಜಲಮೂಲಗಳಿಂದ | ೭೭೩ | ೩೦೪ | ೨೫೪ | ೦ | ೧೦೮ | ೦ | ೦ | ೦ | ೦ | ೦ |
| ಒಟ್ಟು | ೫೮,೨೪೪ | ೬೯,೫೪೧ | ೭೧,೬೮೩ | ೮೩,೩೩೭ | ೯೦,೩೫೧ | ೧,೬೯,೪೫೧ | ೧,೭೩,೬೨೩ | ೧,೬೧,೫೦೪ | ೧,೯೩,೫೪೭ | ೧,೮೩,೧೪೧ |

**ಆಧಾರ: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು**

## ರೇಷ್ಮೆ

ರೇಷ್ಮೆಯು ಜಿಲ್ಲೆಯ ಗೃಹ ಕೈಗಾರಿಕೆಗಳಲ್ಲಿ ಒಂದಾಗಿರುವುದಲ್ಲದೆ, ವ್ಯವಸಾಯಕ್ಕೆ ಪೂರಕವಾಗಿದೆ. ಟಿಪ್ಪುಸುಲ್ತಾನ್ ತನ್ನ ರಾಜ್ಯದ ದಕ್ಷಿಣ ಭಾಗದಲ್ಲಿ ರೇಷ್ಮೆ ಹುಳುಗಳ ಸಾಕಾಣಿಕೆ ಘಟಕವನ್ನು ಸ್ಥಾಪಿಸಿ, ಚೀನಾದಿಂದ ಮೊಟ್ಟೆಗಳನ್ನು ತರಿಸಿ, ಮೈಸೂರು ಸಂಸ್ಥಾನದಲ್ಲಿ ಈ ಕೈಗಾರಿಕೆಯನ್ನು ಬೆಳೆಸಿದ್ದು, ಒಂದು ಐತಿಹಾಸಿಕ ಸಂಗತಿಯಾಗಿದೆ. ಮೈಸೂರು ರಾಜ್ಯವನ್ನು ಪ್ರಪಂಚದ ರೇಷ್ಮೆ ಉತ್ಪಾದಿಸುವ ರಾಜ್ಯಗಳಲ್ಲಿ ಒಂದನ್ನಾಗಿ ಮಾಡುವುದು ಟಿಪ್ಪುವಿನ ಮಹದಾಕಾಂಕ್ಷೆಯಾಗಿತ್ತು. ೧೯೧೪ರಲ್ಲಿ ಹನ್ನೆರಡು ಜಾತಿಯ ರೇಷ್ಮೆ ಹುಳುಗಳ ತಳಿಯನ್ನು ಇಟಲಿಯಿಂದ ತರಿಸಿ ಅಭಿವೃದ್ಧಿಪಡಿಸಲಾಯಿತು. ೧೯೧೫ರಲ್ಲಿ ಮೈಸೂರು ಮತ್ತು ಇಟಲಿ ತಳಿಯನ್ನು ಸೇರಿಸಿ ಅಧಿಕ ಇಳುವರಿಯ ಮಿಶ್ರತಳಿಯನ್ನು ಪಡೆಯಲಾಯಿತು. ಇದೇ ಕಾಲಾವಧಿಯಲ್ಲಿ ಅನೇಕ ರೇಷ್ಮೆ ಕೃಷಿ ಮತ್ತು ಹುಳು ಸಾಕಣೆ ಕೇಂದ್ರಗಳು ಸ್ಥಾಪಿತಗೊಂಡವು.

ರೇಷ್ಮೆ ಕೈಗಾರಿಕೆಯು ಪ್ರಧಾನವಾಗಿ ಹಿಪ್ಪುನೇರಳೆಯನ್ನು ಬೆಳೆಸುವುದು, ರೇಷ್ಮೆ ಹುಳುಗಳನ್ನು ಸಾಕುವುದು ಮತ್ತು ನೂಲು ತಯಾರಿಸುವ ಕಾರ್ಯಗಳನ್ನೊಳಗೊಂಡಿದೆ. ಮೊದಲೆರಡು ಕಾರ್ಯಗಳು ಕೃಷಿಯ ವ್ಯಾಪ್ತಿಗೊಳಪಟ್ಟಿದ್ದರೆ, ಮೂರನೆಯದು ಸಂಪೂರ್ಣವಾಗಿ ಕೈಗಾರಿಕಾ ವ್ಯಾಪ್ತಿಗೊಳಪಟ್ಟಿದೆ. ಜಿಲ್ಲೆಯಲ್ಲಿ ರೇಷ್ಮೆ ಬೆಳೆಗೆ ಸೂಕ್ತವಾದ ಹವಾಗುಣವಿದ್ದು, ಮಳೆ ಹಾಗೂ ನೀರಾವರಿ ಸೌಲಭ್ಯದಿಂದಲೂ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿಯೂ ಹಿಪ್ಪುನೇರಳೆಯನ್ನು ಬೆಳೆಯಲಾಗುತ್ತಿದೆ. ಜಿಲ್ಲೆಯಲ್ಲಿ ೨೦೧೨ರ ಮಾರ್ಚಿ ಅಂತ್ಯಕ್ಕೆ ೩೦೫೩.೪೨ ಹೆಕ್ಟೇರು ವಿಸ್ತೀರ್ಣದಲ್ಲಿ ರೇಷ್ಮೆ ಬೆಳೆಯಲಾಗುತ್ತಿದ್ದು, ೨೩೦೦.೯೭೩ ಟನ್ ರೇಷ್ಮೆಗೂಡು ಉತ್ಪಾದಿಸಲಾಗಿತ್ತು. ಜಿಲ್ಲೆಯ ೧,೧೨೫ ಹಳ್ಳಿಗಳು ಈ ಕೃಷಿಯಲ್ಲಿ ತೊಡಗಿದ್ದು, ೮,೬೫೧ ಜನರು ರೇಷ್ಮೆ ಕಸುಬು ಕೈಗೊಂಡಿದ್ದರು. ಇವರಲ್ಲಿ ೫೦೪ ಮಂದಿ ಪರಿಶಿಷ್ಟ ಜಾತಿಯವರು, ೩೫೨ ಮಂದಿ ಪರಿಶಿಷ್ಟ ಪಂಗಡದವರು ಹಾಗೂ ೭,೭೯೫

ಮಂದಿ ಇತರೆ ಜನಾಂಗದವರು ಈ ಕೃಷಿಯಲ್ಲಿ ತೊಡಗಿದ್ದು,ರೂ. ೪೬೭೩.೯೫ ಲಕ್ಷಮೌಲ್ಯದ ರೇಷ್ಮೆ ಉತ್ಪಾದಿಸಿ ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಿಕೊಂಡಿದ್ದಾರೆ. ಜಿಲ್ಲೆಯಲ್ಲಿ ಒಟ್ಟು ಏಳು ರೇಷ್ಮೆಗೂಡಿನ (ಐದು ಕುಣಿಗಲ್‌ನಲ್ಲಿ ಹಾಗೂ ಎರಡು ತುಮಕೂರಿನಲ್ಲಿ)ಮಾರುಕಟ್ಟೆಗಳಿವೆ. ವಿವರಗಳಿಗೆ ಕೋಷ್ಟಕ ೮.೨೨ ಅನ್ನು ನೋಡಿ.

**ಕೋಷ್ಟಕ ೮.೨೨ ೨೦೧೨ರ ಮಾರ್ಚ ಅಂತ್ಯಕ್ಕೆ ತಾಲೂಕುವಾರು ರೇಷ್ಮೆ ಉತ್ಪಾದನಾ ವಿವರ**

| ತಾಲೂಕುಗಳು | ಹಿಪ್ಪು ನೇರಳೆ ಬೆಳೆ ವಿಸ್ತೀರ್ಣ | ರೇಷ್ಮೆ ಗೂಡು ಉತ್ಪಾದನೆ (ಟನ್‌ಗಳಲ್ಲಿ) | ರೇಷ್ಮೆ ಕೃಷಿಯಲ್ಲಿ ನಿರತವಾಗಿದ್ದ ಗ್ರಾಮಗಳ ಸಂಖ್ಯೆ | ಕಸುಬು ಕೈಗೊಂಡ ರೈತರ ಸಂಖ್ಯೆ | | | | ಉತ್ಪಾದಿಸಿದ ರೇಷ್ಮೆಯ ಮೌಲ್ಯ (ರೂ. ಲಕ್ಷಗಳಲ್ಲಿ) | ರೇಷ್ಮೆ ಗೂಡಿನ ಮಾರುಕಟ್ಟೆಗಳು |
|---|---|---|---|---|---|---|---|---|---|
| | | | | ಪ.ಜಾತಿ | ಪ.ಪಂ | ಇತರೆ | ಒಟ್ಟು | | |
| ಚಿಕ್ಕನಾಯಕನ ಹಳ್ಳಿ | ೮೨.೯೫ | ೩೬.೯೫೪ | ೭೨ | ೩೪ | ೯ | ೧೪೩ | ೧೮೬ | ೭೩.೯೧ | – |
| ಗುಬ್ಬಿ | ೬೬.೫೬ | ೩೬.೨೮೩ | ೪೪ | ೮ | ೬ | ೭೯ | ೯೩ | ೭೨.೫೭ | – |
| ಕೊರಟಗೆರೆ | ೩೦೯.೪೬ | ೩೫೬.೪೨೮ | ೧೧೫ | ೩೧ | ೧೮ | ೫೨೫ | ೫೭೪ | ೭೧೨.೮೬ | – |
| ಕುಣಿಗಲ್ | ೮೮೭.೨೬ | ೪೫೯ | ೨೬೨ | ೨೧೪ | ೪೩ | ೪೪೨೪ | ೪೬೮೧ | ೯೧೮ | ೫ |
| ಮಧುಗಿರಿ | ೫೨೮.೭೬ | ೪೩೭.೧೧೮ | ೧೫೯ | ೫೯ | ೯೮ | ೮೫೨ | ೧೦೦೯ | ೮೭೪.೨೪ | – |
| ಪಾವಗಡ | ೫೬೪.೭೭ | ೩೬೮.೧೧೬ | ೧೪೪ | ೯೬ | ೧೩೫ | ೮೫೩ | ೧೦೮೪ | ೭೩೬.೨೩ | – |
| ಶಿರಾ | ೩೯೨.೪೯ | ೫೧೯.೦೦೨ | ೯೭ | ೧೮ | ೨೩ | ೫೧೦ | ೫೫೧ | ೧೦೩೮ | – |
| ತಿಪಟೂರು | ೬೪.೮೬ | ೩೦.೧೯೨ | ೫೬ | ೨೩ | ೬ | ೧೧೩ | ೧೪೨ | ೬೦.೩೮ | – |
| ತುಮಕೂರು | ೭೨.೩೯ | ೫೩.೪೨೫ | ೧೧೮ | ೧೨ | ೬ | ೧೪೪ | ೧೬೨ | ೧೦೬.೮೫ | ೨ |
| ತುರುವೇಕೆರೆ | ೮೩.೯೨ | ೪.೪೫೫ | ೫೮ | ೯ | ೮ | ೧೫೨ | ೧೬೯ | ೮೦.೯೧ | – |

| | | | | | | | | |
|---|---|---|---|---|---|---|---|---|
| **ಜಿಲ್ಲಾ ಮೊತ್ತ** | ೩೦೫೩.೪೨ | ೨೩೦೦.೯೭೩ | ೧೧೨೫ | ೫೦೪ | ೩೫೨ | ೭೯೫ | ೮೬೫೧ | |

**ಉಪನಿರ್ದೇಶಕರು, ರೇಷ್ಮೆ ಇಲಾಖೆ, ತುಮಕೂರು.**

## ಸಾರಿಗೆ ಮತ್ತು ಸಂಪರ್ಕ

ಸಾರಿಗೆ ಸಾರ್ವಜನಿಕ ಉಪಯುಕ್ತ ಸೇವೆಯಾಗಿದ್ದು, ಇದು ಸರಕು ಮತ್ತು ಸೇವೆಗಳಿಗೆ ಸ್ಥಳ ಮತ್ತು ಕಾಲ ತೃಪ್ತಿ ಗುಣವನ್ನು ನೀಡುತ್ತದೆ. ಆರ್ಥಿಕ ಅಭಿವೃದ್ಧಿಯ ಸಾಧನೆಗೆ ಅಗತ್ಯವಾದ ಸಮೃದ್ಧ ಪ್ರಾಕೃತಿಕ ಸಂಪನ್ಮೂಲ ಉತ್ಪಾದನಾಶೀಲ ಕೃಷಿ, ಪ್ರಗತಿಶೀಲ ಕೈಗಾರಿಕೆ, ಕ್ರಿಯಾಶೀಲ ವಾಣಿಜ್ಯ, ಉದ್ಯಮಶೀಲ ಬ್ಯಾಂಕಿಂಗ್‌ಗಳಂತಹ ವಿವಿಧ ಆರ್ಥಿಕ ಚಟುವಟಿಕೆಗಳ ನಡುವೆ ಸಮನ್ವಯ ಸಾಧಿಸುವ ಸಂಪರ್ಕ ಸೇತುವೆಯಾಗಿರುವುದು ಉಲ್ಲೇಖಾರ್ಹವಾಗಿದೆ. ಸಾರಿಗೆ ಒಂದು ಆರ್ಥಿಕ ವ್ಯವಸ್ಥೆಯ ಜೀವನಾಡಿ ಇದ್ದಂತೆ. ಹಾಗಾಗಿ ಕೃಷಿ ಮತ್ತು ಕೈಗಾರಿಕೆಗಳನ್ನು ಕ್ರಮವಾಗಿ ಮಾನವನ ಶರೀರ ಮತ್ತು ಮೂಳೆಗಳಿಗೆ ಹೋಲಿಸಿದರೆ, ಸಾರಿಗೆಯನ್ನು ದೇಹದ ನರಮಂಡಲಕ್ಕೆ ಹೋಲಿಸಿರುವುದು ಸಾರಿಗೆಯ ಮಹತ್ವವನ್ನು ಸಾರುತ್ತದೆ.

ತುಮಕೂರು ಜಿಲ್ಲೆಯಲ್ಲಿ ೧೯೬೯–೭೦ರಲ್ಲಿ ಕೇವಲ ೭೮ ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿ ಇತ್ತು. ಇದು ೧೯೭೬–೭೭ರಲ್ಲಿ ೧೦೫ ಕಿ.ಮೀಗಳಾಯಿತು. ೧೯೯೮–೯೯ರವರೆವಿಗೂ ಈ ಸಂಖ್ಯೆಯಲ್ಲಿ ಬದಲಾವಣೆ ಇರಲಿಲ್ಲ. ಆದರೆ ೧೯೯೮–೯೯ರಲ್ಲಿ ೧೯೫ ಕಿ.ಮೀಗಳಿಗೂ ೨೦೦೭–೦೮ರಲ್ಲಿ ೧೯೬ ಕಿ.ಮೀಗಳಿಗೂ ಹಾಗೂ ೨೦೧೦–೧೧ರಲ್ಲಿ ೩೨೫.೯ ಕಿ.ಮೀ.ಗಳಿಗೂ, ಹೆಚ್ಚಾಗಿರುವುದು ಗಮನಾರ್ಹವಾಗಿದೆ. ಹಾಗೆಯೇ ರಾಜ್ಯ ಹೆದ್ದಾರಿ ೧೯೬೯–೭೦ರಲ್ಲಿ ೨೪೦.೬ ಕಿ.ಮೀ. ಗಳಿಗೂ, ೧೯೭೬–೭೭ರಲ್ಲಿ ೩೩೪ ಕಿ.ಮೀಗಳಿಗೂ, ೧೯೮೩–೮೪ರಲ್ಲಿ ೩೪೫ ಕಿ.ಮಿಗಳಿಗೂ, ೧೯೮೮–೮೯ರಲ್ಲಿ ೫೬೧ ಕಿ.ಮೀಗಳಿಗೆ ಹೆಚ್ಚಳಗೊಂಡಿದ್ದರೂ, ೧೯೯೮–೯೯ರಲ್ಲಿ ೪೦೨ ಕಿ.ಮೀಗೆ ಕಡಿಮೆಯಾಗಿದೆ. ೨೦೦೭–೨೦೦೮ರಲ್ಲಿ ೭೫೩ ಕಿ.ಮೀ.ಗಳಿಗೆ ಹೆಚ್ಚಳಗೊಂಡಿದ್ದರೂ, ಮತ್ತೆ ೨೦೧೦–೧೧ರಲ್ಲಿ ೬೩೨.೨೧ ಕಿ.ಮೀಗಳಿಗೆ ಕಡಿಮೆಯಾಯಿತು. ರಾಷ್ಟ್ರೀಯ ಹೆದ್ದಾರಿಯ ಉದ್ದ ಹೆಚ್ಚಾಗಿರುವುದೇ ರಾಜ್ಯ ಹೆದ್ದಾರಿಯ ಉದ್ದ ಕಡಿಮೆಯಾಗಲು ಕಾರಣವಾಗಿರಬಹುದು.

ಮುಖ್ಯ ಜಿಲ್ಲಾ ರಸ್ತೆಗಳು ೧೯೬೯–೭೦ರಲ್ಲಿ ೧೦೧೧.೮ ಕಿ.ಮೀ ಉದ್ದವಿದ್ದರೆ, ೧೯೮೩–೮೪ರಲ್ಲಿ ೧೧೪೯ ಕಿ.ಮೀ. ಗಳಿಗೂ, ೧೯೮೮–೮೯ರಲ್ಲಿ ೧೨೫೩ ಕಿ.ಮೀ.ಗಳಿಗೂ, ೧೯೯೩–೯೪ರಲ್ಲಿ ೧೯೦೪ ಕಿ.ಮೀ.ಗಳಿಗೂ, ೨೦೦೭–೦೮ರಲ್ಲಿ ೨೯೧೪ ಕಿ.ಮೀ.ಗಳಿಗೂ ಹಾಗೂ ೨೦೧೦–೧೧ರಲ್ಲಿ ೩೭೫೨.೪೮ ಕಿ.ಮೀ.ಗಳಿಗೂ ಹೆಚ್ಚಳಗೊಂಡಿರುವುದು ಗಮನಾರ್ಹವಾಗಿದೆ.

ಜಿಲ್ಲೆಯಲ್ಲಿ ೧೯೭೦ರ ಮಾರ್ಚ ಅಂತ್ಯಕ್ಕೆ ೭೮ ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿ, ೨೪೦.೬ ಕಿ.ಮೀ ಉದ್ದದ ರಾಜ್ಯ ಹೆದ್ದಾರಿ, ೧೦೧೧.೮ ಕಿ.ಮೀ ಉದ್ದದ ಜಿಲ್ಲಾ ಮುಖ್ಯರಸ್ತೆಗಳು, ೮೨೭ ಕಿ.ಮೀ ಉದ್ದದ ಇತರೆ ಜಿಲ್ಲಾ ರಸ್ತೆಗಳು, ೫೮೨.೪ ಕಿ.ಮೀ ಉದ್ದದ ಹಳ್ಳಿ ರಸ್ತೆಗಳು ಸೇರಿದಂತೆ ಒಟ್ಟು ೨೭೩೯.೮ ಕಿ.ಮೀ ಉದ್ದದ ರಸ್ತೆ ಜಾಲವಿತ್ತು. ಇವು ೨೦೦೮ರ ಮಾರ್ಚ ಅಂತ್ಯಕ್ಕೆ ೧೯೬ ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿ, ೭೫೩ ಕಿ.ಮೀ ಉದ್ದದ ರಾಜ್ಯ ಹೆದ್ದಾರಿ, ೨೯೧೪ ಕಿ.ಮೀ ಉದ್ದದ ಮುಖ್ಯ ಜಿಲ್ಲಾ ರಸ್ತೆಗಳು, ೪೭.೨೦ ಕಿ.ಮೀ ಉದ್ದದ ಇತರೆ ಜಿಲ್ಲಾ ರಸ್ತೆಗಳು, ೮೩೮.೨೩ ಕಿ.ಮೀ ಉದ್ದದ ಮುನಿಸಿಪಾಲಿಟಿ ರಸ್ತೆಗಳು, ೫೮೧ ಕಿ.ಮೀ ಉದ್ದದ ನೀರಾವರಿ ಇಲಾಖಾ ರಸ್ತೆಗಳು, ೬೮.೪೦ ಕಿ.ಮೀ ಉದ್ದದ ಅರಣ್ಯ ರಸ್ತೆಗಳು ಹೀಗೆ ಒಟ್ಟು ೫೩೯೭.೮೩ ಕಿ.ಮೀ ಉದ್ದದ ರಸ್ತೆ ಜಾಲವಿತ್ತು. ಇವುಗಳಲ್ಲದೆ ೯,೧೬೨ ಕಿ.ಮೀ ಉದ್ದದ ಹಳ್ಳಿ ರಸ್ತೆಗಳಿದ್ದವು. ೨೦೧೧–೧೨ರಲ್ಲಿ ೩೨೫.೯ ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿ, ೬೩೨.೨೧ ಕಿ.ಮೀ ಉದ್ದದ ರಾಜ್ಯ ಹೆದ್ದಾರಿ, ೩,೭೩೨.೪೮ ಕಿ.ಮೀ ಉದ್ದದ ಮುಖ್ಯ ಜಿಲ್ಲಾ ರಸ್ತೆಗಳು, ೪೭.೨ ಕಿ.ಮೀ ಉದ್ದದ ಇತರೆ ಜಿಲ್ಲಾ ರಸ್ತೆ, ೧,೨೨೯.೩೫ ಕಿ.ಮೀ ಉದ್ದದ ಮುನಿಸಿಪಾಲಿಟಿ ರಸ್ತೆ, ೫೮೧ ಕಿ.ಮೀ ಉದ್ದದ ನೀರಾವರಿ ಇಲಾಖಾ ರಸ್ತೆ ಹಾಗೂ ೬೮.೪೨ ಕಿ.ಮೀ ಉದ್ದದ ಅರಣ್ಯ ರಸ್ತೆ ಸೇರಿದಂತೆ ಒಟ್ಟು ೬,೬೧೧.೫೬ ಕಿ.ಮೀ ಉದ್ದದ ರಸ್ತೆ ಸಂಪರ್ಕಜಾಲವಿತ್ತು, ಅಲ್ಲದೇ ೯,೨೬೪.೬೩ ಕಿ.ಮೀ. ಉದ್ದದ (ಇದರಲ್ಲಿ ೩,೫೪೩.೧೯ ಕಿ.ಮೀ. ಉದ್ದದ ಪಕ್ಕ ರಸ್ತೆಗಳು ಮತ್ತು ೫,೭೨೧.೪೪ ಕಿ.ಮೀ ಉದ್ದದ ಕಚ್ಚ ರಸ್ತೆಗಳು ಸೇರಿದ್ದವು) ಹಳ್ಳಿಗಳ ರಸ್ತೆ ಸಂಪರ್ಕವಿದ್ದು, ಜಿಲ್ಲೆಯ ಸರ್ವತೋಮುಖ ಏಳಿಗೆಗೆ ನಾಂದಿಯಾಗಿದೆ.

ಜಿಲ್ಲೆಯಲ್ಲಿ ೧೯೬೮-೬೯ರಲ್ಲಿ ೮೯ ಕಿ.ಮೀ ಉದ್ದದ ಮೀಟರ್‌ಗೇಜ್ ರೈಲುಮಾರ್ಗವಿದ್ದು, ೧೯೮೩-೮೪ರಲ್ಲಿ ೯೮ ಕಿ.ಮೀ ರೈಲುಮಾರ್ಗವಿತ್ತು. ೨೦೧೨ರ ಮಾರ್ಚ್ ಅಂತ್ಯಕ್ಕೆ ೯೭ ಕಿ.ಮೀ ಉದ್ದದ ಬ್ರಾಡ್‌ಗೇಜ್ ಮಾರ್ಗವಿತ್ತು. ಅಲ್ಲದೆ ಜಿಲ್ಲೆಯಲ್ಲಿ ೧೬ ರೈಲುನಿಲ್ದಾಣಗಳಿದ್ದು, ತಿಪಟೂರು ತಾಲ್ಲೂಕಿನಲ್ಲಿ ಆರು, ತುಮಕೂರು ತಾಲೂಕಿನಲ್ಲಿ ಐದು, ತುರುವೇಕರೆ ತಾಲೂಕಿನಲ್ಲಿ ಮೂರು ಹಾಗೂ ಗುಬ್ಬಿ ತಾಲೂಕಿನಲ್ಲಿ ಎರಡು ರೈಲ್ವೆ ನಿಲ್ದಾಣಗಳಿದ್ದವು. ಅವುಗಳಲ್ಲಿ ಬೆಂಗಳೂರು–ಅರಸೀಕೆರೆ ಮಾರ್ಗದಲ್ಲಿ ಹಿರೇಹಳ್ಳಿ–ಕ್ಯಾತ್ಸಂದ್ರ, ಮಲ್ಲಸಂದ್ರ, ಗುಬ್ಬಿ, ಅಮ್ಮಸಂದ್ರ ರೈಲುನಿಲ್ದಾಣಗಳಾಗಿವೆ. ಹೆಚ್ಚಿನ ವಿವರಗಳಿಗೆ ಅಧ್ಯಾಯ–೭ ನೋಡಿ.

## ಅಂಚೆ ಕಛೇರಿಗಳು

ಅಂಚೆ ಕಚೇರಿ ಜಿಲ್ಲೆಯ ಆರ್ಥಿಕಾಭಿವೃದ್ಧಿಗೆ ಪೂರಕವಾದ ಮತ್ತೊಂದು ಸಂಪರ್ಕ ಮಾಧ್ಯಮವಾಗಿದೆ. ಜಿಲ್ಲೆಯಲ್ಲಿ ೧೯೭೬–೭೭ರಲ್ಲಿ ೫೨೭ ಅಂಚೆ ಕಛೇರಿಗಳು, ೧೪ ದೂರವಾಣಿ ವಿನಿಮಯ ಕೇಂದ್ರಗಳು, ೧೭೩೭ ದೂರವಾಣಿಗಳು, ೬೮ ತಂತಿ ಕಛೇರಿಗಳು, ೭೨,೧೮೯ ರೇಡಿಯೋಗಳಿದ್ದವು. ೧೯೮೮–೮೯ರಲ್ಲಿ ೫೬೦ ಅಂಚೆಕಛೇರಿಗಳು, ೧೪ ತಂತಿಕಛೇರಿಗಳು, ೬೮ ದೂರವಾಣಿ ವಿನಿಮಯ ಕೇಂದ್ರಗಳು, ೫೦೦೦ ದೂರವಾಣಿಗಳಿದ್ದರೆ, ೧೯೯೩–೯೪ರಲ್ಲಿ ೫೬೭ ಅಂಚೆ ಕಛೇರಿಗಳು, ಎರಡು ತಂತಿ ಕಛೇರಿಗಳು, ೮೧ ದೂರವಾಣಿ ವಿನಿಮಯ ಕೇಂದ್ರಗಳು ಹಾಗೂ ೧೦,೩೦೦ ದೂರವಾಣಿಗಳಿದ್ದವು. ೨೦೦೮ರ ಮಾರ್ಚ್ ಅಂತ್ಯಕ್ಕೆ ೫೬೯ ಅಂಚೆ ಕಛೇರಿಗಳು, ಎರಡು ತಂತಿ ಕಛೇರಿಗಳು, ೧೧೨ ದೂರವಾಣಿ ವಿನಿಮಯ ಕೇಂದ್ರಗಳು ಹಾಗೂ ೬೫,೦೯೯ ದೂರವಾಣಿಗಳು ಅಸ್ತಿತ್ವದಲ್ಲಿದ್ದವು. ೨೦೧೧–೧೨ರಲ್ಲಿ ೫೬೪ ಅಂಚೆ ಕಛೇರಿಗಳು, ಎರಡು ತಂತಿ ಕಛೇರಿಗಳು, ೧೧೨ ದೂರವಾಣಿ ವಿನಿಮಯ ಕೇಂದ್ರಗಳು, ೪೨,೮೪೯ ದೂರವಾಣಿಗಳು ಹಾಗೂ ೯೬,೧೯೧ ಸಂಚಾರಿ ದೂರವಾಣಿ (ಮೊಬೈಲ್‌ಗಳು) ಸಂಪರ್ಕವಿದ್ದಿತು. ಒಟ್ಟು ೫,೪೪೪ ಅಂತರ್ಜಾಲ ಸಂಪರ್ಕದಲ್ಲಿ ೧,೧೪೧ ಸಂಸ್ಥೆಗಳು ಸಂಪರ್ಕ ಪಡೆದಿದ್ದರೆ, ೩,೭೯೮ ಗೃಹಬಳಕೆ ಹಾಗೂ ೫೦೫ ಇತರೆ ಸಂಪರ್ಕವಿದ್ದಿತು. (ಹೆಚ್ಚಿನ ವಿವರಗಳಿಗೆ ಅಧ್ಯಾಯ–೭ ನೋಡಿ)

## ಪಶು ಸಂಪತ್ತು

ಪಶುಪಾಲನೆ ಮಾನವನ ಅತ್ಯಂತ ಪುರಾತನ ಚಟುವಟಿಕೆಗಳಲ್ಲಿ ಒಂದು. ಕೃಷಿಯ ಅಭಿವೃದ್ಧಿಗೆ ಪೂರಕವಾದ ಈ ಚಟುವಟಿಕೆಯಿಂದ ಗ್ರಾಮೀಣ ಪ್ರದೇಶದ ಜನರಿಗೆ ಉಂಟಾಗುವ ಲಾಭ ಅಪರಿಮಿತ. ಪಶುಪಾಲನೆ ಇಂದು ಒಂದು ಲಾಭದಾಯಕವಾದ ಉದ್ಯಮವಾಗಿರುವುದರ ಜೊತೆಗೆ ವಿವಿಧ ಬಗೆಯ ಉದ್ಯಮಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ಸಹಕಾರಿಯಾಗಿದೆ. ೧೯೬೬ರ ಜಾನುವಾರು ಗಣತಿ ಪ್ರಕಾರ ಜಿಲ್ಲೆಯಲ್ಲಿ ೬,೧೩,೩೪೫ ದನಕರುಗಳು, ೧,೫೨,೬೩೮ ಎಮ್ಮೆಗಳು, ೩,೮೨೩ ಕುದುರೆಗಳು, ೮,೫೧೭ ಕತ್ತೆಗಳು, ೨೨ ಹೇಸರಗತ್ತೆಗಳು, ೭,೨೩,೪೯೯ ಕುರಿಗಳು, ೨,೫೫,೫೫೭ ಮೇಕೆಗಳು, ಎರಡು ಒಂಟೆಗಳು ಹಾಗೂ ೨೦,೫೭೮ ಹಂದಿಗಳಿದ್ದವು. ಅಲ್ಲದೆ ೫,೫೨,೦೭೮ ಕೋಳಿಗಳಿದ್ದವು. ೧೯೬೯–೭೦ರಲ್ಲಿ ಒಂದು ಪಶು ವೈದ್ಯಕೀಯ ಆಸ್ಪತ್ರೆ, ೧೩ ತಾಲ್ಲೂಕು ಚಿಕಿತ್ಸಾಲಯಗಳು, ೩೩ ಗ್ರಾಮೀಣ ಚಿಕಿತ್ಸಾಲಯಗಳು ಹೀಗೆ ಒಟ್ಟು ೪೭ ಪಶುವೈದ್ಯ ಶಾಲೆಗಳು ಜಿಲ್ಲೆಯಲ್ಲಿದ್ದವು. ೧೯೮೩ರ ಜಾನುವಾರು ಗಣತಿಯಂತೆ ೬,೪೨,೭೦೦ ದನಕರುಗಳು, ೨,೪೩,೬೦೦ ಎಮ್ಮೆಗಳು, ೫,೭೬,೬೦೦ ಕುರಿಗಳು, ೩,೫೬,೭೦೦ ಮೇಕೆಗಳು, ೧೫ ಕುದುರೆಗಳು, ಒಂದು ಹೇಸರಗತ್ತೆ, ೧೧೦ ಕತ್ತೆಗಳು, ೧೯೨ ಒಂಟೆಗಳಿದ್ದವು ಹಾಗೂ ೫,೪೬,೪೦೦ ಕೋಳಿಗಳಿದ್ದವು. ೧೯೮೩–೮೪ರಲ್ಲಿ ಒಂದು ಪಶುವೈದ್ಯಕೀಯ ಆಸ್ಪತ್ರೆ, ೩೬ ಪಶುವೈದ್ಯಕೀಯ ಚಿಕಿತ್ಸಾಲಯಗಳು, ೫೨ ಗ್ರಾಮೀಣ ಪಶುವೈದ್ಯಕೀಯ ಚಿಕಿತ್ಸಾಲಯಗಳು, ಹೀಗೆ ಒಟ್ಟು ೮೯ ಪಶುವೈದ್ಯಕೀಯ ಶಾಲೆಗಳಿದ್ದವು. ಜಿಲ್ಲೆಯಲ್ಲಿ ೨೦೦೩ರಲ್ಲಿ ನಡೆದ ಜಾನುವಾರು ಗಣತಿಯಂತೆ, ೫,೦೩,೭೯ ದನಕರುಗಳು, ೨,೧೭,೫೨೮ ಎಮ್ಮೆಗಳು, ೮,೮೪,೬೮೧ ಕುರಿಗಳು, ೩,೨೨,೩೭೩ ಮೇಕೆಗಳು ೧೩,೩೧೭ ಹಂದಿಗಳು, ೪೬೫ ಮೊಲಗಳು, ೧,೨೬,೪೧೪ ನಾಯಿಗಳು ಹಾಗೂ ೭೪೯೧ ಇತರೆ ಜಾನುವಾರುಗಳಿದ್ದವು. ಅಲ್ಲದೆ ೬,೪೨,೩೮೨ ಕೋಳಿಗಳಿದ್ದವು. ಜಿಲ್ಲೆಯಲ್ಲಿ ೨೦೧೨ರ ಮಾರ್ಚ್ ಅಂತ್ಯಕ್ಕೆ ೧೮ ಪಶುವೈದ್ಯಕೀಯ ಆಸ್ಪತ್ರೆಗಳು, ೧೦೪ ಚಿಕಿತ್ಸಾಲಯಗಳು, ೮೫ ಪ್ರಾಥಮಿಕ ಪಶುವೈದ್ಯ ಕೇಂದ್ರಗಳು, ೧೦ ಸಂಚಾರಿ ಚಿಕಿತ್ಸಾಲಯಗಳು ಹಾಗೂ ೧೬ ಕೃತಕ ಗರ್ಭಧಾರಣಾ ಕೇಂದ್ರಗಳು ಸೇರಿದಂತೆ ಒಟ್ಟು ೨೩೩ ಪಶುವೈದ್ಯ ಶಾಲೆಗಳಿದ್ದವು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೨೩ನ್ನು ನೋಡಿ.

**ಕೋಷ್ಟಕ ೮.೨೩ ಜಿಲ್ಲೆಯಲ್ಲಿ ೧೯೭೨ರಿಂದ ೨೦೦೭ರವರೆಗೆ ನಡೆದ ವಿವಿಧ ಜಾನುವಾರು ಗಣತಿಗಳಂತೆ ಜಾನುವಾರುಗಳ ವಿವರ**

| ಕ್ರ. ಸಂ. | ಜಾನುವಾರು | ಜಾನುವಾರು ಗಣತಿಯ ವರ್ಷಗಳು | | | | | | |
|---|---|---|---|---|---|---|---|---|
| | | ೧೯೭೨ | ೧೯೭೭ | ೧೯೯೨ | ೧೯೯೭ | ೨೦೦೩ | ೨೦೦೭ | ೨೦೧೨ |
| ೧ | ದನಕರುಗಳು | ೫,೬೪,೬೯೦ | ೬,೨೫,೪೦೦ | ೬,೦೯,೧೦೦ | ೫,೯೮,೨೫೮ | ೫,೦೩,೭೯೯ | ೫,೮೯,೨೨೬ | ೫೨೭೦೬೭ |
| ೨ | ಎಮ್ಮೆಗಳು | ೧,೭೫,೪೮೫ | ೨,೦೦,೮೦೦ | ೨,೪೫,೩೦೦ | ೨,೬೮,೭೭೮ | ೨,೧೭,೫೨೮ | ೨,೪೧,೯೦೭ | ೧೮೧೧೧೮ |
| ೩ | ಕುರಿಗಳು | ೬,೭೦,೯೧೫ | ೫,೮೪,೫೦೦ | ೫,೯೬,೯೦೦ | ೮,೯೫,೮೬೩ | ೮,೮೪,೬೮೧ | ೧೦,೬೭,೭೧೯ | ೧೦೬೧೩೩೦ |
| ೪ | ಮೇಕೆಗಳು | ೩,೦೬,೭೭೯ | ೨,೩೫,೩೦೦ | ೨,೯೭೨ | ೩,೪೨,೪೯೫ | ೩,೨೨,೩೦೨ | ೫,೧೭,೭೬೩ | ೩೨೬೮೯೦ |
| ೫ | ಹಂದಿಗಳು | ೧೯,೯೭೯ | ೨೦,೭೦೦ | ೧೭,೩೦೦ | ೧೯,೨೭೨ | ೧೩,೩೧೩ | ೭,೭೧೮ | ೭೧೨೨ |
| ೬ | ಮೊಲಗಳು | – | – | – | – | ೪೬೫ | ೧೨೧ | ೧೦೬೫ |
| ೭ | ನಾಯಿಗಳು | – | – | ೯೭,೮೦೦ | ೧,೩೦,೪೨೫ | ೧,೨೬,೪೧೪ | ೯೦,೧೧೯ | ೪೯೬೭೩ |
| ೮ | ಇತರೆ | – | ೫,೦೦೦ | – | ೯,೭೦೫ | ೭,೪೧೯ | ೯,೪೭೦ | – |
| ೯ | ಕೋಳಿಗಳು | ೬,೦೨,೧೭೯ | ೬,೩೭,೬೦೦ | ೫,೯೪,೯೦೦ | ೮,೦೦,೦೮೩ | ೬,೪೨,೩೮೨ | ೭,೧೧,೨೭೩ | ೨೧೦೭೭೯೮ |
| ೧೦ | ಪಶುವೈದ್ಯ ಆಸ್ಪತ್ರೆಗಳು | ೦೧ | ೦೧ | ೧೧ | ೧೫ | ೧೭ | ೧೮ | – |
| ೧೧ | ಚಿಕಿತ್ಸಾಲಯ ಗಳು | ೭೬ | ೮೮ | ೫೮ | ೧೮೧ | ೧೦೨ | ೧೦೪ | – |
| ೧೨ | ಪ್ರಾಥಮಿಕ ಪಶುವೈದ್ಯ ಕೇಂದ್ರಗಳು | – | – | ೮೪ | ೧೮ | ೮೫ | ೮೫ | – |
| ೧೩ | ಸಂಚಾರಿ ಚಿಕಿತ್ಸಾಲಯ | – | – | ೧೦ | ೧೦ | ೧೦ | ೧೦ | – |
| ೧೪ | ಕೃತಕ ಗರ್ಭಧಾರಣಾ ಕೇಂದ್ರಗಳು | – | – | – | – | ೧೮ | ೧೬ | – |

**ಆಧಾರ: ಜಾನುವಾರು ಗಣತಿ**

## ಹೈನುಗಾರಿಕೆ

ಜಿಲ್ಲೆಯ ರೈತರ ಜೀವನಾಡಿಯಾಗಿರುವ ಹೈನುಗಾರಿಕೆಯು ‘ಕ್ಷೀರ ಕ್ರಾಂತಿ’ಯ ಮೂಲಕ ಜನರ ಆರ್ಥಿಕ, ಸಾಮಾಜಿಕ ಸ್ಥಾನಮಾನಗಳನ್ನು ಉನ್ನತೀಕರಿಸಿ, ಉನ್ನತ ಮಟ್ಟದ ಜೀವನ ನಿರ್ವಹಣೆಗೆ ನಾಂದಿ ಹಾಡಿದೆ. ತುಮಕೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತವು ೩೦ನೇ ಮಾರ್ಚ್ ೧೯೭೭ರಲ್ಲಿ ಆರಂಭಗೊಂಡಿತು. ಈ ಒಕ್ಕೂಟದಲ್ಲಿ ೨೦೦೬–೦೭ರಲ್ಲಿ ೬೬೨ ಸಂಘಗಳು ಕಾರ್ಯನಿರ್ವಹಿಸುತ್ತಿದ್ದರೆ, ೨೦೦೯–೧೦ರಲ್ಲಿ ೮೩೨ ಸಂಘಗಳು, ೨೦೧೨–೧೩ರಲ್ಲಿ ೯೬೮ ಸಂಘಗಳು ಹಾಗೂ ೨೦೧೩–೧೪ ರಲ್ಲಿ ೧೦೧೭ ಸಂಘಗಳು ಕಾರ್ಯನಿರ್ವಹಿಸುತ್ತಿದ್ದವು. ಇವುಗಳಲ್ಲಿ ೧೨೧ ಸ್ಟೆಪ್ ಮಹಿಳಾ ಸಂಘಗಳು ಮತ್ತು ೧೦೪ ಸಾಮಾನ್ಯ ಮಹಿಳಾ ಸಂಘಗಳಿದ್ದವು. ಈ ಸಂಘಗಳಲ್ಲಿ ಒಟ್ಟು ೨,೪೫,೮೮೫ ಸದಸ್ಯರಿದ್ದು, ಇವರಲ್ಲಿ೨೪,೦೬೪ ಹರಿಜನರು, ೧೯,೪೭೮ ಗಿರಿಜನರು ಹಾಗೂ ೭೧,೦೩೮ ಮಹಿಳಾ ಸದಸ್ಯರಿದ್ದರು. ೨೦೧೩–೧೪ ರಲ್ಲಿ ಒಕ್ಕೂಟವು ರೂ.೧೪.೦೯ ಕೋಟಿ ಮೊತ್ತದ ಷೇರು ಬಂಡವಾಳ ಹೊಂದಿರುತ್ತದೆ. ಇದೇ ಸಾಲಿನಲ್ಲಿ ದಿನವಹಿ ಸರಾಸರಿ ೪.೨೨ ಲಕ್ಷ ಕೆ.ಜಿ ಹಾಲು ಶೇಖರಣೆಯಾಗಿದ್ದು ೨೦೧೨–೧೩ ನೇ ಸಾಲಿಗಿಂತ ಶೇಕಡಾ ೯ ರಷ್ಟು ಹೆಚ್ಚಳವಾಗಿರುತ್ತದೆ. ಹಾಲು ಶೇಖರಣೆ ಪ್ರತಿದಿನ ೨೦೦೬–೦೭ರಲ್ಲಿ ೧,೯೦,೨೧೮ ಲಕ್ಷ ಕೆ.ಜಿ. ಆಗಿದ್ದರೆ, ೨೦೦೯–೧೦ರಲ್ಲಿ ೨,೯೮,೭೧೦ ಲಕ್ಷ ಕೆ.ಜಿ. ಹಾಗೂ ೨೦೧೩–೧೪ರಲ್ಲಿ ೪,೨೨,೩೮೧ ಲಕ್ಷ ಕೆ.ಜಿಗಳಾಗಿತ್ತು. ಒಕ್ಕೂಟದ ಮಾರುಕಟ್ಟೆ ವ್ಯಾಪ್ತಿಯು ತುಮಕೂರು ಜಿಲ್ಲೆಯ ಎಲ್ಲಾ ತಾಲೂಕುಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ

ನೆಲಮಂಗಲ ತಾಲೂಕು ಹಾಗೂ ಬೆಂಗಳೂರು ನಗರದ ಶಿವನಹಳ್ಳಿ, ಮಂಜುನಾಥನಗರ, ಮಹಾಲಕ್ಷ್ಮಿ ಲೇಔಟ್, ನಂದಿನಿ ಲೇಔಟ್, ಪೀಣ್ಯಾ, ದಾಸರಹಳ್ಳಿ ಮುಂತಾದ ನಿಗದಿತ ಮಾರಾಟ ಪ್ರದೇಶಗಳಾಗಿರುತ್ತವೆ. ೨೦೦೬-೦೭ರಲ್ಲಿ ದಿನವಹಿ ೧,೦೩,೨೭೯ ಲೀಟರ್ ಹಾಲು ಮಾರಾಟ ಆಗಿದ್ದರೆ, ೨೦೦೯-೧೦ರಲ್ಲಿ ೧,೪೪,೬೩೦ ಲೀಟರ್, ೨೦೧೧-೧೨ ರಲ್ಲಿ ೧,೮೫,೭೬೬ ಲೀಟರ್, ೨೦೧೨-೧೩ ರಲ್ಲಿ ೧,೯೮,೫೧೭ ಲೀಟರ್ ಹಾಗೂ ೨೦೧೩-೧೪ ರಲ್ಲಿ ೨,೦೧,೫೨೨ ಲೀಟರ್ ಹಾಲು ಮಾರಾಟವಾಗಿರುತ್ತದೆ. ತುಮಕೂರು ಒಕ್ಕೂಟವು ೨೦೧೩-೧೪ ನೇ ಸಾಲಿನಲ್ಲಿ ತಿಂಗಳುವಾರು ಉತ್ಪನ್ನ ಹಾಗೂ ಮಾರಾಟದ ವಿವರಗಳನ್ನು ನೀಡಲಾಗಿದೆ. ೧೫,೪೧,೬೮,೯೭೫(೮೦,೮೩,೦೨೧೨) ಕೆ.ಜಿ. ಹಾಲು, ೯೪,೫೭,೨೨೩(೯೪,೨೮,೯೨೩) ಕೆ.ಜಿ.ಮೊಸರು, ೭,೮೨,೫೦೭(೭,೮೦,೧೦೩) ಲೀಟರ್ ತುಪ್ಪ, ೨೯,೮೧೦(೨೯,೮೫೯) ಕೆ.ಜಿ. ಪೇಡ, ೧,೦೭,೯೭೪(೧,೩೩,೭೧೨) ಕೆ.ಜಿ. ಮಸಾಲೆ ಮಜ್ಜಿಗೆ ಹಾಗೂ ೧೦,೧೯೩(೧೦,೩೯೫) ಕೆ.ಜಿ. ಮೈಸೂರು ಪಾಕ್ ತಯಾರಿಸಲಾಗಿತ್ತು. ಆವರಣದಲ್ಲಿ ನೀಡಿರುವ ಅಂಕಿ ಅಂಶಗಳು ಮಾರಾಟವನ್ನು ಬಿಂಬಿಸುತ್ತವೆ. ಒಕ್ಕೂಟವು ೨೦೦೬-೦೭ರಲ್ಲಿ ರೂ.೧೦೮ ಕೋಟಿ ವಹಿವಾಟು ನಡೆಸಿದ್ದರೆ, ೨೦೦೯-೧೦ರಲ್ಲಿ ರೂ.೨೧೮ ಕೋಟಿ, ೨೦೧೧-೧೨ರಲ್ಲಿ ರೂ.೩೬೮ ಕೋಟಿ, ೨೦೧೨-೧೩ ರಲ್ಲಿರೂ.೪೨೩ ಕೋಟಿ ಹಾಗೂ ೨೦೧೩-೧೪ ರಲ್ಲಿ ರೂ. ೫೨೯ ಕೋಟಿ ವಹಿವಾಟು ನಡೆಸಿ, ರೂ.೪.೦೯ ಕೋಟಿ ನಿವ್ವಳ ಲಾಭಗಳಿಸಿರುವುದು ಅಂಕಿಅಂಶಗಳಿಂದ ಸ್ಪಷ್ಟವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಅಧ್ಯಾಯ-೫, ಕೈಗಾರಿಕೆಗಳು ಅಧ್ಯಾಯವನ್ನು ನೋಡಿ.

## ಕೈಗಾರಿಕೆ

ಆರ್ಥಿಕತೆಯ ಎಲ್ಲಾ ವಲಯಗಳನ್ನು ಮೂರು ಭಾಗಗಳಾಗಿ ವರ್ಗೀಕರಿಸಿದಾಗ ಕೈಗಾರಿಕೆಯು 'ದ್ವಿತೀಯ ವಲಯ' ಎನಿಸಿಕೊಳ್ಳುತ್ತದೆ. ಕೈಗಾರಿಕೆಗಳು ಒಂದು ದೇಶದ ಮೂಳೆಗಳಿದ್ದಂತೆ. ಮಾನವ ದೇಹಕ್ಕೆ ಪೂರ್ಣ ಚೈತನ್ಯವನ್ನು ಒದಗಿಸಲು ಮೂಳೆಗಳು ಹೇಗೆ-ಅವಶ್ಯವೋ ಹಾಗೆಯೇ ಆರ್ಥಿಕತೆಗೆ ಚೇತನ ನೀಡಿ ದೀರ್ಘಕಾಲೀನ ಅಭಿವೃದ್ಧಿ ಸಾಧನೆಗೆ ನೆರವಾಗಲು ಕೈಗಾರಿಕೆಗಳು ಅತ್ಯಂತ ಅವಶ್ಯಕ. ಜಿಲ್ಲೆಯಲ್ಲಿ ನೋಂದಣಿಗೊಂಡ ಸಣ್ಣ ಕೈಗಾರಿಕೆಗಳು ೧೯೭೯-೮೦ರಲ್ಲಿ ೮೯೩, ೧೯೮೩-೮೪ರಲ್ಲಿ ೧೮೪೦, ೧೯೯೮-೯೯ರಲ್ಲಿ ೯೪೨ ಘಟಕಗಳು ನೋಂದಣಿಗೊಂಡಿದ್ದವು. ೨೦೧೨ರ ಮಾರ್ಚ್ ಅಂತ್ಯಕ್ಕೆ ಒಟ್ಟು ೨೩,೮೦೪ ಸಣ್ಣ ಮತ್ತು ಅತಿ ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದು, ಇವುಗಳಲ್ಲಿ ರೂ.೬೮,೯೮೪ ಲಕ್ಷ ಬಂಡವಾಳ ತೊಡಗಿಸಲಾಗಿತ್ತು. ಇವು ೧,೩೨,೨೩೫ ಮಂದಿಗೆ ಉದ್ಯೋಗ ಒದಗಿಸಿದ್ದವು. ಈ ಉದ್ದಿಮೆಗಳ ವರ್ಗವಾರು ವಿವರ ಹೀಗಿದೆ. ಆಹಾರ ಮತ್ತು ಆಹಾರ ಸಂಸ್ಕರಣೆ ೨,೭೩೪ (೮,೧೯೦), ರೇಷ್ಮೆ ಜವಳಿ ಮತ್ತು ಸಿದ್ಧಉಡುಪು ಉದ್ದಿಮೆಗಳು ೪,೬೩೩ (೧೨,೯೬೦), ಮರ ಮತ್ತು ಮರದ ಆಧಾರಿತ ಉದ್ದಿಮೆಗಳು ೩,೩೨೮ (೯,೯೧೫), ಕಾಗದ ಮತ್ತು ಉತ್ಪನ್ನಗಳು ೫೩೩ (೧೦,೧೨೫), ಚರ್ಮ ಮತ್ತು ಚರ್ಮ ಆಧಾರಿತ ಕೈಗಾರಿಕೆಗಳು ೩೩೮ (೩,೫೩೦), ರಬ್ಬರ್ ಮತ್ತು ಪ್ಲಾಸ್ಟಿಕ್ ಆಧಾರಿತ ಉದ್ದಿಮೆಗಳು ೨೭೬ (೩,೧೫೦), ರಾಸಾಯನಿಕ ಆಧಾರಿತ ಉದ್ದಿಮೆಗಳು ೪೦೨ (೩,೨೭೯), ಖನಿಜ ಆಧಾರಿತ ಕೈಗಾರಿಕೆಗಳು ೫೨೮ (೩,೫೦೦), ಬೇಸಿಕ್ ಮೆಟಲ್ ಕೈಗಾರಿಕೆಗಳು ೫೨೯ (೧೧,೫೯೦), ಜನರಲ್ ಇಂಜಿನಿಯರಿಂಗ್ ಮತ್ತು ಸಂಬಂಧಿಸಿದ ಉದ್ದಿಮೆಗಳು ೫೩೦ (೯,೯೧೦), ಎಲೆಕ್ಟ್ರಿಕಲ್ ಟ್ರಾನ್ಸ್‌ಪೋರ್ಟ್ ಅಂಡ್ ಎಕ್ವಿಪ್‌ಮೆಂಟ್ಸ್ ಉದ್ದಿಮೆಗಳು ೩೮೮ (೨,೦೦೦), ದುರಸ್ತಿ ಮತ್ತು ಸೇವಾ ಘಟಕಗಳು ೨,೧೩೪ (೨೦,೦೦೦), ಫೆರಸ್, ದುರಸ್ತಿ ಮತ್ತು ಸೇವಾ ಘಟಕಗಳು ೦೫ (೩೪), ಇತರೆ ಸೇವಾಘಟಕಗಳು ೭,೪೭೧ (೩೩,೮೯೬) ನೋಂದಣಿಗೊಂಡಿದ್ದವು. ಆವರಣದಲ್ಲಿ ನೀಡಿರುವ ಅಂಕಿಅಂಶಗಳು ಈ ಉದ್ದಿಮೆಗಳು ಒದಗಿಸಿರುವ ಉದ್ಯೋಗಗಳ ಸಂಖ್ಯೆಯನ್ನು ಬಿಂಬಿಸುತ್ತವೆ. ಅದೇ ಅವಧಿಯಲ್ಲಿ ಜಿಲ್ಲೆಯಲ್ಲಿ ೨೪ ಬೃಹತ್ ಮತ್ತು ಒಂಬತ್ತು ಮಧ್ಯಮಪ್ರಮಾಣದ ಕೈಗಾರಿಕೆಗಳು ಸ್ಥಾಪನೆಗೊಂಡಿದ್ದವು. ಮೇಲಿನ ಅಂಕಿ ಅಂಶಗಳಲ್ಲಿ ಜಿಲ್ಲೆಯ ಆರ್ಥಿಕ ಚಟುವಟಿಕೆ ಕೈಗಾರಿಕೆಯತ್ತ ವಾಲುತ್ತಿರುವುದು ಸ್ಪಷ್ಟವಾಗಿದೆ. ಹೆಚ್ಚಿನ ವಿವರಗಳಿಗೆ ಅಧ್ಯಾಯ-೫ (ಕೈಗಾರಿಕೆಗಳು) ಅನ್ನು ನೋಡಿ.

## ವಿದ್ಯುತ್

ಜಿಲ್ಲೆಯಲ್ಲಿ ಸಂಪ್ರದಾಯಕ/ಅಸಂಪ್ರದಾಯಕ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದ್ದು, ಇದು ಕೇವಲ ೯೬.೫೦ ಮೆ. ವ್ಯಾ ಆಗಿದೆ. ಉಳಿದ ವಿದ್ಯುತ್ ಅನ್ನು ಶರಾವತಿ, ನಾಗಝುರಿ, ರಾಯಚೂರು ಶಾಖೋತ್ಪನ್ನ, ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳಿಂದಲೂ ಹಾಗೂ ಕೇಂದ್ರೀಯ ವಿದ್ಯುತ್ ಗ್ರಿಡ್‌ನಿಂದಲೂ ಪೂರೈಸಿಕೊಳ್ಳಲಾಗುತ್ತಿದೆ. ಜಿಲ್ಲೆಯ ಒಟ್ಟು ವಿದ್ಯುತ್

ಬೇಡಿಕೆ ೬೨೦ ಮೆ.ವ್ಯಾ ಆಗಿದ್ದು, ೪೮೦ ಮೆ.ವ್ಯಾ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಇನ್ನೂ ೧೪೦ ಮೆ.ವ್ಯಾ ವಿದ್ಯುತ್ ಕೊರತೆಯಿತ್ತು. ೧೯೬೫–೬೬ರಲ್ಲಿ ೬೦೩ (೬,೮೫೯) ಗ್ರಾಮ ಮತ್ತು ಪಟ್ಟಣಗಳು ವಿದ್ಯುತ್ ಸಂಪರ್ಕಪಡೆದಿದ್ದರೆ, ೧೯೭೦–೭೧ರಲ್ಲಿ ೯೭೮ (೧೪,೯೪೬), ೧೯೭೫–೭೬ರಲ್ಲಿ ೧,೫೩೦ (೨೨,೮೩೭), ೧೯೮೦–೮೧ರಲ್ಲಿ ೧,೩೭೫ (೩೦,೫೦೦), ೧೯೮೫–೮೬ ರಲ್ಲಿ ೨,೧೬೧ (೪೬,೩೦೦), ೧೯೯೦–೯೧ರಲ್ಲಿ ೨,೪೫೦ (೭೦,೬೦೦), ೨೦೦೧–೦೨ರಲ್ಲಿ ೨,೫೮೬ (೧,೨೮,೨೮೯) ಹಾಗೂ ೨೦೧೩–೧೪ ರಲ್ಲಿ ೨,೭೦೮(೨೦೫೦೪೯) ಗ್ರಾಮ ಮತ್ತು ಪಟ್ಟಣಗಳು ವಿದ್ಯುತ್ ಸೌಲಭ್ಯ ಪಡೆದಿದ್ದವು. ಆವರಣದಲ್ಲಿ ನೀಡಿರುವ ಅಂಕಿಅಂಶಗಳು ನೀರಾವರಿ ಪಂಪುಸೆಟ್ಟುಗಳು ವಿದ್ಯುತ್ ಸಂಪರ್ಕ ಪಡೆದಿದ್ದವೆಂಬ ಅಂಶವನ್ನು ತಿಳಿಸುತ್ತದೆ.

ಜಿಲ್ಲೆಯಲ್ಲಿ ಮಾರ್ಚ್ ೨೦೧೪ರ ಅಂತ್ಯದಲ್ಲಿದ್ದಂತೆ ವಿದ್ಯುತ್ ಬಳಕೆದಾರರ ವಿವರವನ್ನು ಹಾಗೂ ಆವರಣದಲ್ಲಿ ವಿದ್ಯುತ್ ಬಳಕೆಯನ್ನು ಮಿಲಿಯನ್ ಯೂನಿಟ್‌ಗಳಲ್ಲಿ ನೀಡಲಾಗಿದೆ. ಗೃಹಬಳಕೆ ೬,೮೮,೫೭೪ (೨೦೩.೪೭), ಕೈಗಾರಿಕೆ ಬಳಕೆ ೧೬,೮೮೯ (೫೦.೫೨), ವಾಣಿಜ್ಯ ಬಳಕೆ ೪೭,೯೫೧ (೫೫.೪೩), ನೀರಾವರಿ ಪಂಪುಸೆಟ್‌ಗಳಿಗೆ ೨,೦೦,೪೨೦ (೧೭೯೮.೬೬) ಹಾಗೂ ಇತರೆ ೧೮,೩೭೫ (೪೫೯.೮೯) ಹೀಗೆ ಒಟ್ಟು ೯,೭೨,೨೦೯ (೨೫೬೭.೯೭) ವಿದ್ಯುತ್ ಬಳಕೆದಾರರಿದ್ದರು. ಹೆಚ್ಚಿನ ವಿವರಗಳಿಗೆ ಅಧ್ಯಾಯ–೫ (ಕೈಗಾರಿಕೆಗಳು) ಅನ್ನು ನೋಡಿ.

## ಸಹಕಾರ ಚಳುವಳಿ

ಜನರು ತಮ್ಮ ಸ್ವಾರ್ಥವನ್ನು ಮರೆತು ಒಗ್ಗೂಡಿ ಪರಸ್ಪರ ಹಿತಾಸಕ್ತಿಗಳನ್ನು ಕಾಪಾಡಲು ಸಾಂಘಿಕವಾಗಿ ಪ್ರಯತ್ನಿಸುವ ವ್ಯವಸ್ಥೆಯೇ ಸಹಕಾರ ಚಳುವಳಿ. ತಮ್ಮ ಆರ್ಥಿಕ ಹಿತಾಸಕ್ತಿಗಳನ್ನು ಕಾಪಾಡಲು ಜನರು ಸಮಾನತೆಯ ಆಧಾರದ ಮೇಲೆ ಸ್ವ–ಇಚ್ಛೆಯಿಂದ ಸಂಘಟಿತರಾಗುವುದೇ ಸಹಕಾರಿ ಸಂಘ. "ತಾನು ಎಲ್ಲರಿಗಾಗಿ, ಎಲ್ಲರೂ ತನಗಾಗಿ" (Each for all and all for each) ಎಂಬುದು ಸಹಕಾರದ ಮೂಲ ತತ್ವವಾಗಿದೆ.

ತುಮಕೂರು ಜಿಲ್ಲೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಪಟ್ಟಣ ಸಹಕಾರ ಸಂಘ, ವಿವಿಧೋದ್ದೇಶ ಸಹಕಾರ ಸಂಘ, ಹಾಲು ಉತ್ಪಾದಕರ ಸಹಕಾರ ಸಂಘ, ಗೃಹನಿರ್ಮಾಣ ಸಹಕಾರ ಸಂಘ, ಮಹಿಳಾ ಸಹಕಾರ ಸಂಘ ಮುಂತಾದವುಗಳಿದ್ದು, ಇವು ಜಿಲ್ಲೆಯ ಆರ್ಥಿಕಾಭಿವೃದ್ಧಿಗೆ ಪೂರಕವಾಗಿವೆ. ಜಿಲ್ಲೆಯಲ್ಲಿ ೨೦೧೧–೧೨ರಲ್ಲಿ ೨೩೬ ವ್ಯವಸಾಯ ಪತ್ತಿನ ಸಹಕಾರ ಸಂಘಗಳು (೩,೪೮,೪೫೧ ಸದಸ್ಯರು), ೧೩೨ ವ್ಯವಸಾಯೇತರ ಪತ್ತಿನ ಸಹಕಾರ ಸಂಸ್ಥೆಗಳು (೧,೨೬,೫೧೭ ಸದಸ್ಯರು) ಹೀಗೆ ಒಟ್ಟು ೩೬೮ ಪತ್ತಿನ ಸಹಕಾರ ಸಂಘಗಳಿದ್ದು ೪,೭೪,೯೬೮ ಮಂದಿ ಸದಸ್ಯರುಗಳಿದ್ದರು. ಪತ್ತೇತರ ಸಹಕಾರ ಸಂಘಗಳಲ್ಲಿ ೧೦ ಮಾರುಕಟ್ಟೆ ಸಂಘಗಳು (೧೪,೦೪೮), ೩೨ ಗೃಹನಿರ್ಮಾಣ ಸಂಘಗಳು (೧೦,೮೭೦), ೯೮೨ ಹಾಲು ಉತ್ಪಾದಕರ ಸಹಕಾರ ಸಂಘಗಳು (೨,೧೬,೯೮೭) ಹಾಗೂ ೩೬೬ ಇತರೆ ಸಂಘಗಳು (೧,೪೩,೮೮೩) ಹೀಗೆ ಒಟ್ಟು ೧,೩೯೦ ಪತ್ತೇತರ ಸಹಕಾರ ಸಂಘಗಳಿದ್ದು, ಇವುಗಳಲ್ಲಿ ೩,೮೪,೮೯೮ ಮಂದಿ ಸದಸ್ಯರುಗಳಿದ್ದರು. ಜಿಲ್ಲೆಯಲ್ಲಿ ೧,೭೫೮ ಒಟ್ಟು ಸಹಕಾರ ಸಂಘಗಳಿದ್ದು (ಪತ್ತಿನ+ಪತ್ತೇತರ), ೮,೫೯,೮೬೬ ಮಂದಿ ಸದಸ್ಯರುಗಳಿದ್ದರು. ಆವರಣದಲ್ಲಿ ನೀಡಿರುವ ಅಂಕಿ–ಅಂಶಗಳು ಆಯಾ ಸಂಘಗಳ ಸದಸ್ಯರ ಸಂಖ್ಯೆಯನ್ನು ಪ್ರತಿಬಿಂಬಿಸುತ್ತದೆ. ೧೨ ನಗರ ಪ್ರದೇಶದ ಸಹಕಾರಿ ಬ್ಯಾಂಕುಗಳ ಶಾಖೆಗಳಿದ್ದು, ರೂ. ೧,೩೨,೬೭೩.೦೬ ಲಕ್ಷ ಠೇವಣಿ ಹೊಂದಿದ್ದು, ರೂ. ೧,೦೫,೪೫೭.೯೩ ಲಕ್ಷ ಸಾಲ ನೀಡಿದ್ದವು. ಹೆಚ್ಚಿನ ವಿವರಗಳಿಗೆ ಅಧ್ಯಾಯ–೬ನ್ನು ನೋಡಿ.

## ಮಾನವ ಸಂಪತ್ತು

ಜಿಲ್ಲೆಯಲ್ಲಿ ೧೯೦೧ರ ಜನಗಣತಿಯಲ್ಲಿ ೬,೭೧,೮೦೧ ಜನಸಂಖ್ಯೆ ಇದ್ದದ್ದು, ೨೦೧೧ರಲ್ಲಿ ೨೬,೭೮,೯೮೦ ಹೆಚ್ಚಳಗೊಂಡಿರುವುದು ಗಮನಾರ್ಹವಾಗಿದೆ. ಇವರಲ್ಲಿ ೨೦,೭೯,೯೦೨ ಮಂದಿ ಗ್ರಾಮಾಂತರದಲ್ಲೂ, ೫,೯೯,೦೭೮ ಮಂದಿ ನಗರ ಪ್ರದೇಶದಲ್ಲೂ ವಾಸವಾಗಿದ್ದಾರೆ. ಜಿಲ್ಲೆಯಲ್ಲಿ ೫,೦೬,೯೦೧ ಮಂದಿ ಪರಿಶಿಷ್ಟ ಜಾತಿಗೂ, ೨,೫೪,೫೩೫ ಮಂದಿ ಪರಿಶಿಷ್ಟ ಪಂಗಡಕ್ಕೂ ಸೇರಿದವರಿದ್ದಾರೆ. ೧೯೦೧ರಿಂದ ೨೦೧೧ರವರೆಗಿನ ಹನ್ನೊಂದು ದಶಕಗಳಲ್ಲಾಗಿರುವ ಜನಸಂಖ್ಯೆಯ ಬೆಳವಣಿಗೆಯ ದರ, ಸ್ತ್ರೀ–ಪುರುಷರ ಪ್ರಮಾಣ (೧೦೦೦ ಗಂಡಸರಿಗೆ ಲಭ್ಯವಿರುವ ಸ್ತ್ರೀಯರ ಸಂಖ್ಯೆ) ಹಾಗೂ ಜನಸಾಂದ್ರತೆಯನ್ನು ಕೋಷ್ಟಕ ೮.೨೪ ರಲ್ಲಿ ನೀಡಲಾಗಿದೆ.

## ಕೋಷ್ಟಕ: ೮.೨೪ ಜಿಲ್ಲೆಯಲ್ಲಿ ದಶವಾರ್ಷಿಕ ಜನಸಂಖ್ಯಾ ಬೆಳವಣಿಗೆ.

| ವರ್ಷ | ಜನಸಂಖ್ಯೆ | ದಶವಾರ್ಷಿಕ ವ್ಯತ್ಯಾಸ | ದಶವಾರ್ಷಿಕ ಶೇ. ವ್ಯತ್ಯಾಸ | ಪುರುಷರು | ಮಹಿಳೆಯರು | ಸ್ತ್ರೀ–ಪುರುಷರ ಪ್ರಮಾಣ | ಜನಸಾಂದ್ರತೆ |
|---|---|---|---|---|---|---|---|
| ೧೯೦೧ | ೬೭೧೮೦೧ | – | – | ೩೩೮೩೯೯ | ೩೩೩೪೦೨ | ೯೮೫ | – |
| ೧೯೧೧ | ೭೩೮೭೮೬ | +೬೬೯೮೫ | + ೯.೯೭ | ೩೭೩೬೯೭ | ೩೬೫೦೮೯ | ೯೭೭ | – |
| ೧೯೨೧ | ೭೭೬೮೨೫ | +೩೮೦೩೯ | + ೫.೧೫ | ೩೯೬೭೧೩ | ೩೮೦೧೧೨ | ೯೫೮ | – |
| ೧೯೩೧ | ೮೬೩೨೨೭ | + ೮೬೪೦೨ | + ೧೧.೧೨ | ೪೪೦೦೩೬ | ೪೨೩೧೯೧ | ೯೬೨ | – |
| ೧೯೪೧ | ೯೫೫೮೦೯ | +೯೨೫೮೨ | +೧೦.೭೩ | ೪೮೯೮೮೮ | ೪೬೫೯೨೧ | ೯೫೧ | – |
| ೧೯೫೧ | ೧೧೫೧೩೬೨ | +೧೯೫೫೫೩ | +೨೦.೪೬ | ೫೮೭೯೮೮ | ೫೬೩೩೭೪ | ೯೫೮ | – |
| ೧೯೬೧ | ೧೩೬೭೪೦೨ | +೨೧೬೦೪೦ | +೧೮.೭೬ | ೬೯೯೧೯೧ | ೬೬೮೨೧೧ | ೯೫೬ | – |
| ೧೯೭೧ | ೧೬೨೭೭೨೧ | +೨೬೦೩೧೯ | +೧೯.೦೪ | ೮೩೧೮೫೯ | ೭೯೫೮೬೨ | ೯೫೭ | – |
| ೧೯೮೧ | ೧೯೭೭೮೫೪ | +೩೫೦೧೩೩ | +೨೧.೫೧ | ೧೦೦೮೫೨೨ | ೯೬೯೩೩೨ | ೯೬೧ | – |
| ೧೯೯೧ | ೨೩೦೫೮೧೯ | +೩೨೭೯೬೫ | +೧೬.೫೮ | ೧೧೭೭೨೩೩ | ೧೧೨೮೫೮೬ | ೯೫೯ | – |
| ೨೦೦೧ | ೨೫೮೪೭೧೧ | +೯೬೭೩೮ | +೧೨.೧೦ | ೧೩೧೩೮೦೧ | ೧೨೭೦೯೧೦ | ೯೬೭ | ೨೪೪ |
| ೨೦೧೧ | ೨೬,೭೮,೯೮೦ | +೯೪,೨೬೯ | +೩.೬೫ | ೧೩,೫೦,೫೯೪ | ೧೩,೨೮,೩೮೬ | ೯೮೪ | ೨೫೩ |

**ಆಧಾರ : ಜನರಲ್ ಪಾಪ್ಯುಲೇಷನ್ ೧೯೯೧, ೨೦೦೧ ಹಾಗೂ ೨೦೧೧.**

## ಮಾನವ ಶಕ್ತಿ ಯೋಜನೆ

ವಿವಿಧ ವಲಯ ಮತ್ತು ಕಸಬುಗಳ ಶ್ರಮದ ಬೇಡಿಕೆ ಮತ್ತು ಪೂರೈಕೆಯನ್ನು ಸರಿದೂಗಿಸಿ ಶ್ರಮವನ್ನು ದಕ್ಷವಾಗಿ ಬಳಸಿಕೊಳ್ಳುವುದೇ ಮಾನವಶಕ್ತಿ ಯೋಜನೆಯಾಗಿದೆ. ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳಿಗೆ ಈ ಯೋಜನೆ ಸೂಕ್ತ ಪರಿಹಾರವಾಗಬಲ್ಲದು. ತುಮಕೂರು ಜಿಲ್ಲೆಯು ಕೃಷಿ ಪ್ರಧಾನ ಜಿಲ್ಲೆಯಾಗಿದ್ದು, ಒಟ್ಟು ಕೆಲಸಗಾರರಲ್ಲಿ ಕೃಷಿಯನ್ನು ಅವಲಂಬಿಸಿರುವವರ ಪ್ರಮಾಣ ೧೯೬೧ರಲ್ಲಿ ಶೇ.೭೯.೯೬ ಇದ್ದದ್ದು, ೧೯೭೧ರಲ್ಲಿ ಶೇ.೭೭.೮೦ಕ್ಕೆ ಕುಸಿದಿತ್ತು. ೧೯೮೧ರಲ್ಲಿ ಶೇ.೭೯.೧೭ಕ್ಕೆ ಹೆಚ್ಚಳಗೊಂಡಿದ್ದರೂ ಮತ್ತೆ ಇದು ೧೯೯೧ರಲ್ಲಿ ಶೇ.೭೫.೭೮ ಹಾಗೂ ೨೦೧೧ರಲ್ಲಿ ಶೇ.೬೯.೫೮ಕ್ಕೆ ಇಳಿದಿತ್ತು. ದ್ವಿತೀಯ ಹಾಗೂ ತೃತೀಯ ವಲಯಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗಿರುವುದು ಇದಕ್ಕೆ ಪ್ರಮುಖ ಕಾರಣವಾಗಿದೆ. ಮಾನವಶಕ್ತಿ ಯೋಜನೆ ಯಶಸ್ವಿಯಾಗಬೇಕಾದರೆ, ಜನ ಸಾಕ್ಷರತರಾಗುವುದು ಅವಶ್ಯಕ. ಜಿಲ್ಲೆಯಲ್ಲಿ ಸಾಕ್ಷರತೆಯ ಪ್ರಮಾಣ ೧೯೬೧ರಲ್ಲಿ ಕೇವಲ ಶೇ.೨೨.೬೪ರಷ್ಟಿತ್ತು. ಇದು ಕ್ರಮೇಣ ಹೆಚ್ಚಳಗೊಂಡಿರುವುದು ಮುಂದಿನ ಅಂಕಿಅಂಶಗಳಿಂದ ಸ್ಪಷ್ಟವಾಗಿದೆ. ೧೯೭೧ರಲ್ಲಿ ಶೇ.೨೯.೩೬ಕ್ಕೂ, ೧೯೮೧ರಲ್ಲಿ ಶೇ.೩೬.೯೨ಕ್ಕೂ, ೧೯೯೧ರಲ್ಲಿ ಶೇ.೫೪.೪೮ಕ್ಕೂ ೨೦೦೧ರಲ್ಲಿ ಶೇ.೭೫.೧೪ಕ್ಕೆ ಹೆಚ್ಚಳಗೊಂಡಿದ್ದರೂ ೨೦೧೧ರಲ್ಲಿ ಶೇ.೬೭.೦೧ಕ್ಕೂ ಕುಸಿತಗೊಂಡಿದೆ.

ಜಿಲ್ಲೆಯಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಒಟ್ಟು ಕೆಲಸಗಾರರ ಪ್ರಮಾಣ ೧೯೬೧ರಲ್ಲಿ ಶೇ.೫೦.೨೧ ಇದ್ದದ್ದು, ೧೯೭೧ರಿಂದ ೧೯೯೧ರಲ್ಲಿ ಇವರ ಪ್ರಮಾಣ ಕ್ರಮವಾಗಿ ಶೇ.೩೪.೦೨, ಶೇ. ೪೧.೩೬ ಹಾಗೂ ಶೇ.೪೭.೬೯ ಕುಸಿತಗೊಂಡಿದೆ. ಮತ್ತೆ ೨೦೦೧ರಲ್ಲಿ ಶೇ.೫೦.೯೫ಕ್ಕೆ ಹೆಚ್ಚಳಗೊಂಡಿದ್ದರೂ, ೨೦೧೧ರಲ್ಲಿ ೫೦.೫೭ಕ್ಕೆ ಕುಸಿದಿರುವುದು ಗಮನಾರ್ಹವಾಗಿದೆ. ೨೦೦೧ರ ಜನಗಣತಿಯಂತೆ ಒಟ್ಟು ಜನಸಂಖ್ಯೆ ೨೫,೮೪,೭೧೧ ಆಗಿದ್ದು, ಇವರಲ್ಲಿ ೧೩,೧೬,೯೩೯ ಮಂದಿ ಒಟ್ಟು ಕೆಲಸಗಾರರು ಹಾಗೂ ೧೨,೬೭,೭೭೨ ಮಂದಿ ಕೆಲಸಗಾರರಲ್ಲದವರಿದ್ದರು. ೧೩,೧೬,೯೩೯ ಮಂದಿ ಒಟ್ಟು ಕೆಲಸಗಾರರಲ್ಲಿ ೧೦,೫೦,೨೯೧ ಮಂದಿ ಮುಖ್ಯ ಕೆಲಸಗಾರರು ಹಾಗೂ ೨,೬೬,೬೪೮ ಮಂದಿ ಸೀಮಾಂತ (ಮಾರ್ಜಿನಲ್) ಕೆಲಸಗಾರರು ಸೇರಿದ್ದರು. ೧೦,೫೦,೨೯೧ ಮಂದಿ ಮುಖ್ಯ ಕೆಲಸಗಾರರಲ್ಲಿ ೫,೩೧,೦೫೨ ಮಂದಿ ವ್ಯವಸಾಯಗಾರರು, ೧,೬೭,೩೬೫ ಮಂದಿ ಕೃಷಿಕಾರ್ಮಿಕರು, ೪೭,೮೬೫ ಮಂದಿ ಗೃಹ ಕೈಗಾರಿಕಾ ಕಾರ್ಮಿಕರು ಹಾಗೂ ೩,೦೪,೦೧೯ ಮಂದಿ ಇತರೆ

ಕೆಲಸಗಾರರು ಸೇರಿದ್ದರು. ೨,೬೬,೬೪೮ ಮಂದಿ ಸೀಮಾಂತ ಕೆಲಸಗಾರರಲ್ಲಿ ೭೧,೩೦೯ ಮಂದಿ ವ್ಯವಸಾಯಗಾರರು, ೧,೪೬,೫೪೧ ಮಂದಿ ಕೃಷಿ ಕಾರ್ಮಿಕರು, ೧೩,೦೮೧ ಮಂದಿ ಗೃಹ ಕೈಗಾರಿಕಾ ಕಾರ್ಮಿಕರು ಹಾಗೂ ೩೫,೭೧೭ ಮಂದಿ ಇತರೆ ಕೆಲಸಗಾರರು ಸೇರಿದ್ದರು. ೨೦೧೧ರ ಜನಗಣತಿಯಂತೆ ಜಿಲ್ಲೆಯಲ್ಲಿ ೧೩,೫೪,೬೪೬ ಮಂದಿ ಒಟ್ಟು ಕೆಲಸಗಾರರಿದ್ದರು. ಇವರಲ್ಲಿ ೫,೦೫,೯೧೦ ಮಂದಿ ವ್ಯವಸಾಯಗಾರರು, ೩,೫೨,೨೮೬ ಮಂದಿ ಕೃಷಿ ಕಾರ್ಮಿಕರು, ೫೪,೫೨೩ ಗೃಹ ಕೈಗಾರಿಕೆಗಳಲ್ಲಿ ಹಾಗೂ ೪,೪೧,೯೨೭ ಮಂದಿ ಇತರೆ ಕೆಲಸಗಾರರು ಸೇರಿದ್ದರು. ಅಲ್ಲದೆ ೨,೭೬,೨೧೫ ಮಂದಿ ಸೀಮಾಂತ(ಮಾರ್ಜಿನಲ್) ಕೆಲಸಗಾರರಿದ್ದರು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೨೫ ನ್ನು ನೋಡಿ.

## ಕೋಷ್ಟಕ ೮.೨೫ ರಲ್ಲಿ ೧೯೭೧ರಿಂದ ೨೦೧೧ರವರೆಗಿನ ಜನಗಣತಿಯಂತೆ ಕೆಲಸಗಾರರ ವಿವರ

(ಸಂಖ್ಯೆಗಳಲ್ಲಿ)

| ವರ್ಗ | ಕೆಲಸಗಾರರು | ೧೯೭೧ | ೧೯೮೧ | ೨೦೦೧ | ೨೦೧೧ |
|---|---|---|---|---|---|
| ವರ್ಗ–I | ವ್ಯವಸಾಯಗಾರರು | ೩೧೫೧೬೭ | ೪೧೮೯೫೩ | ೬೦೨೩೬೧ | ೫೦೫೯೧೦ |
| ವರ್ಗ–II | ಕೃಷಿಕಾರ್ಮಿಕರು | ೧೦೬೯೨೭ | ೧೪೮೧೪೩ | ೩೧೩೯೦೬ | ೩೫೨೨೮೬ |
| ವರ್ಗ-III | ಪಶುಪಾಲನೆ, ಅರಣ್ಯ, ಮೀನುಗಾರಿಕೆ, ಬೇಟೆ, ತೋಟಗಾರಿಕೆ, ಅರ್ಚರ್ಡ್ಸ್ ಮತ್ತು ಸಂಬಂಧಿಸಿದ ಚಟುವಟಿಕೆಗಳು | ೧೯೩೯೫ | ೧೨೯೧೨ | – | – |
| ವರ್ಗ-IV | ಗಣಿ ಮತ್ತು ಕಲ್ಲುಗಣಿ | ೧೨೯೮ | ೧೦೧೫ | – | – |
| ವರ್ಗ- V | ತಯಾರಿಕೆ ಎ. ಗೃಹಕೈಗಾರಿಕೆ<br>ಬಿ.ಗೃಹ ಕೈಗಾರಿಕೆ ಬಿಟ್ಟು | ೨೧೨೯೪ | ೪೯೨೧೩ | ೬೦೯೪೬ | ೫೪೫೨೩ |
| ವರ್ಗ-VI | ನಿರ್ಮಾಣ | ೪೪೧೩ | ೭೨೭೬ | – | – |
| ವರ್ಗ-VII | ವ್ಯಾಪಾರ ಮತ್ತು ವಾಣಿಜ್ಯ | ೯೬೫೪ | ೩೦೬೬೩ | – | – |
| ವರ್ಗ-VIII | ಸಾರಿಗೆ, ಸಂಗ್ರಹಣೆ ಮತ್ತು ಸಂಪರ್ಕ | ೧೮೬೩ | ೯೪೭೮ | – | – |
| ವರ್ಗ-IX | ಇತರೆ ಸೇವೆಗಳು | ೧೮೪೭೮ | ೩೮೬೮೧ | ೩೩೯೭೨೬ | ೪೪೧೯೨೭ |

**ಆಧಾರ: ಜನಗಣತಿ–೧೯೬೧, ೧೯೭೧, ೧೯೮೧, ೧೯೯೧, ೨೦೦೧ ಮತ್ತು ೨೦೧೧**

## ಪಂಚವಾರ್ಷಿಕ ಯೋಜನೆಗಳು

ನಾಡಿನ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಾದ ಕೃಷಿ, ಕೈಗಾರಿಕೆ, ಪಶುಸಂಗೋಪನೆ, ಸಹಕಾರ ಸಂಘ, ಅರಣ್ಯ, ಶಿಕ್ಷಣ, ಪಂಚಾಯತ್‌ರಾಜ್, ಸಮಾಜ ಕಲ್ಯಾಣ, ಕಾರ್ಮಿಕ ಕಲ್ಯಾಣ ಮುಂತಾದವುಗಳನ್ನು ಪ್ರಗತಿಯತ್ತ ಮುನ್ನುಗ್ಗುವಂತೆ ಮಾಡುವುದೇ ಪಂಚವಾರ್ಷಿಕ ಯೋಜನೆಗಳ ಪ್ರಧಾನ ಉದ್ದೇಶಗಳಾಗಿವೆ. ದೇಶದಲ್ಲಿ ಪಂಚವಾರ್ಷಿಕ ಯೋಜನೆಗಳು ಪ್ರಾರಂಭವಾಗುವುದಕ್ಕೆ ಮೊದಲೇ ಕರ್ನಾಟಕವು ಇಂತಹ ಯೋಜನೆಯ ಅವಶ್ಯಕತೆಯನ್ನು ಮನಗಂಡಿತ್ತು. ಹಿಂದಿನ ಮೈಸೂರು ಸಂಸ್ಥಾನದಲ್ಲಿ ಯೋಜಿತ ಆರ್ಥಿಕಾಭಿವೃದ್ಧಿ ೧೯೧೦ರಲ್ಲೇ ಪ್ರಾರಂಭವಾಯಿತು. ಈ ಯೋಜನೆಗಳ ಮಹತ್ತರ ಉದ್ದೇಶ ಬಡತನ ನಿರ್ಮೂಲನೆ, ಆರ್ಥಿಕ ಸ್ವಾವಲಂಬನೆಗಳನ್ನು ಸಾಧಿಸುವುದು ಮುಂತಾದುವೇ ಆಗಿದ್ದವು.

ಮೊದಲ ಆರು ಪಂಚವಾರ್ಷಿಕ ಯೋಜನೆಗಳ (೧೯೫೧–೫೬ ರಿಂದ ೧೯೮೦–೮೫)ಅವಧಿಯಲ್ಲಿ ಕೃಷಿ, ಕೈಗಾರಿಕೆ, ನೀರಾವರಿ, ವಿದ್ಯುಚ್ಛಕ್ತಿ, ಸಾರಿಗೆ, ಸಂಪರ್ಕ, ಸಾಮಾಜಿಕ ಸೇವಾಕಾರ್ಯಗಳ ಅಭಿವೃದ್ಧಿ, ತಲಾ ಆದಾಯದಲ್ಲಿ ಗಣನೀಯ ಹೆಚ್ಚಳ ಹಾಗೂ ಜೀವನ ಮಟ್ಟದಲ್ಲಿ ಸುಧಾರಣೆ ಮುಂತಾದವು ಈ ಯೋಜನೆಗಳ ಉದ್ದೇಶಗಳಾಗಿತ್ತು. ಈ ಯೋಜನೆಗಳಾವಧಿಯಲ್ಲಿ ೧೯೬೦–೬೧ರಲ್ಲಿ ತಲಾದಾಯ ಕೇವಲ ರೂ.೨೫೬ಗಳಾಗಿದ್ದರೆ, ೧೯೭೦–೭೧ರಲ್ಲಿ ರೂ. ೩೯೯ಗಳಿಗೂ, ೧೯೭೪–೭೫ರಲ್ಲಿ ರೂ. ೬೫೩ ಗಳಿಗೂ, ೧೯೮೫–೮೬ರಲ್ಲಿ ರೂ. ೧೯೬೪ ಗಳಿಗೂ ಹೆಚ್ಚಳಗೊಂಡಿರುವುದು ಜನರ ಜೀವನ ಮಟ್ಟ ಉತ್ತಮಗೊಂಡಿರುವುದರ ಸಂಕೇತವಾಗಿದೆ. ಉತ್ತಮವಾದ ವಿದ್ಯಾಭ್ಯಾಸ, ಉದ್ಯೋಗಾವಕಾಶಗಳು ಜನರ ಜೀವನ ಶೈಲಿಯನ್ನು ಬದಲಿಸಿವೆ.

## ಏಳನೆಯ ಪಂಚವಾರ್ಷಿಕ ಯೋಜನೆ: (೧೯೮೫–೯೦)

ಈ ಯೋಜನೆಯಲ್ಲಿ ಬಡತನ ನಿರ್ಮೂಲನಾ ಕಾರ್ಯಕ್ರಮದಡಿ ಬಡತನವನ್ನು ಕಡಿಮೆಗೊಳಿಸುವುದು, ಕನಿಷ್ಠ ಅಗತ್ಯಗಳ ಕಾರ್ಯಕ್ರಮದ ವಿಸ್ತರಣೆಯ ಮೂಲಕ ಸಾಧಿಸಲಾಗುವ ಸಾಮಾಜಿಕ ಒಳಿತು ಹಾಗೂ ಸೇವೆಗಳಿಗೆ ಅವಕಾಶ ಕಲ್ಪಿಸುವುದು, ರಸ್ತೆ, ಸಾರಿಗೆ, ಕೃಷಿ ಮತ್ತು ಇತರ ಸಂಬಂಧಪಟ್ಟ ಸೇವೆಗಳನ್ನು ಅಭಿವೃದ್ಧಿ ಪಡಿಸುವುದು ಹಾಗೂ ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವುದು ಇವುಗಳಿಗೆ ಒತ್ತು ನೀಡಲಾಗಿತ್ತು. ಈ ಯೋಜನಾವಧಿಯ ಕೊನೆಯ ಮೂರು ವರ್ಷಗಳಲ್ಲಿ ೧೯೮೭–೮೮ರಲ್ಲಿ ರೂ. ೪೬೯೭.೫೮ ಲಕ್ಷಗಳು (ರೂ. ೫೧೪೭.೬೭), ೧೯೮೮–೮೯ರಲ್ಲಿ ರೂ. ೬೦೬೩.೭೮ ಲಕ್ಷ(ರೂ. ೬೧೩೭.೬೫) ಹಾಗೂ ೧೯೮೯–೯೦ರಲ್ಲಿ ರೂ. ೫೯೭೪.೭೪ ಲಕ್ಷ (ರೂ. ೫೭೪೭.೩೨) ಗಳನ್ನು ವೆಚ್ಚ ಮಾಡಲಾಗಿತ್ತು. ಆವರಣದಲ್ಲಿ ನೀಡಿರುವುದು ಆಯಾ ವರ್ಷಗಳ ಅನುದಾನವಾಗಿರುತ್ತದೆ. ಜಿಲ್ಲೆಯ ವಿವಿಧ ಅಭಿವೃದ್ಧಿ ಕಾರ್ಯಗಳಿಗಾಗಿ ೧೯೮೭–೮೮ರಿಂದ ೧೯೮೯–೯೦ ರವರೆಗಿನ ಈ ಯೋಜನೆಯ ಕೊನೆಯ ಮೂರು ವರ್ಷಗಳಲ್ಲಿ ವಿವಿಧ ವಲಯವಾರು ಹಣ ಒದಗಿಸಿದ್ದು ಹಾಗೂ ಭರಿಸಿದ ವೆಚ್ಚದ ವಿವರಗಳನ್ನು ಕೋಷ್ಟಕ ೮.೨೬ ರಲ್ಲಿ ನೀಡಲಾಗಿದೆ.

**ಕೋಷ್ಟಕ: ೮.೨೬ ೭ನೇ ಪಂಚ ವಾರ್ಷಿಕ ಯೋಜನೆಯ (೧೯೮೫–೧೯೯೦) ಕೊನೆಯ ಮೂರು ವರ್ಷಗಳಲ್ಲಿ ವಲಯವಾರು ಮಾಡಿದ ವೆಚ್ಚದ ವಿವರ**

| ಕ್ರ.ಸಂ | ವಲಯಗಳು | ೧೯೮೭–೮೮ | | ೧೯೮೮–೮೯ | | ೧೯೮೯–೯೦ | |
|---|---|---|---|---|---|---|---|
| | | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ |
| ೧ | ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ | ೨೦೫೮.೧೭ | ೨೨೩೧.೨೨ | ೨೭೧೬.೩೭ | ೨೭೦೩.೩೬ | ೨೮೫೧.೨೭ | ೨೯೪೮.೪೭ |
| ೨ | ವಯಸ್ಕರ ಶಿಕ್ಷಣ | ೧೩.೭೨ | ೧೪.೮೪ | ೪೧.೭೮ | ೨೭.೮೦ | ೧೯.೫೨ | ೧೯.೬೦ |
| ೩ | ಯುವಜನಸೇವೆ ಮತ್ತು ಕ್ರೀಡೆ | ೨.೮೦ | ೪.೭೯ | ೩.೮೨ | ೩.೮೮ | ೫.೪೭ | ೪.೫೯ |
| ೪ | ಗ್ರಾಮೀಣ ಆರೋಗ್ಯ | ೨೯೪.೪೪ | ೩೧೩.೦೨ | ೩೭೪.೦೮ | ೩೩೯.೩೧ | ೩೭೭.೦೫ | ೩೯೨.೩೪ |
| ೫ | ಭಾರತೀಯ ವೈದ್ಯ ಪದ್ಧತಿ | – | – | – | – | – | – |
| ೬ | ಕುಟುಂಬ ಕಲ್ಯಾಣ ಕಾರ್ಯಕ್ರಮಗಳು | ೧೫೨.೨೨ | ೧೬೦.೮೦ | ೧೩೮.೩೬ | ೧೭೧.೧೭ | ೧೮೨.೮೩ | ೧೮೮.೭೩ |
| ೭ | ಗ್ರಾಮೀಣ ನೀರು ಪೂರೈಕೆ | ೨೫೪.೪೯ | ೨೧೮.೬೬ | ೨೦೮.೪೮ | ೩೦೨.೪೨ | ೧೫೪.೦೭ | ೨೨೬.೯೬ |
| ೮ | ಸಮಾಜ ಕಲ್ಯಾಣ | ೫೭೧.೪೨ | ೨೯೩.೮೭ | ೫೫೧.೩೨ | ೫೪೩.೯೬ | ೫೦೮.೬೫ | ೫೩೧.೪೬ |
| ೯ | ವಿಶೇಷ ಘಟಕ ಯೋಜನೆ | – | – | – | – | – | – |
| ೧೦ | ಹಿಂದುಳಿದ ವರ್ಗಗಳ ಕಲ್ಯಾಣ | – | – | – | – | – | – |
| ೧೧ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | ೧೩೬.೧೫ | ೧೧೪.೬೬ | ೧೧೩.೯ | ೧೧೫.೧೬ | ೧೧೭.೨೯ | ೧೧೮.೨೩ |
| ೧೨ | ಪೌಷ್ಟಿಕ ಆಹಾರ | ೧೨೨.೨೮ | ೧೦೨.೬೬ | ೧೭೦.೧೫ | ೧೩೫.೧೨ | ೧೨೫.೦೨ | ೧೧೩.೨೨ |
| ೧೩ | ವ್ಯವಸಾಯ | ೧೮೭.೧೪ | ೨೨೪.೮೮ | ೨೬೨.೧೧ | ೨೨೬.೮೩ | ೨೧೭.೯೫ | ೨೧೩.೩೮ |
| ೧೪ | ತೋಟಗಾರಿಕೆ | | | | | | |
| ೧೫ | ಭೂಸಾರ ಮತ್ತು ಜಲರಕ್ಷಣೆ | ೧೦೯.೯೮ | ೮೭.೫೪ | ೧೫೧.೧ | ೧೧೫.೨೮ | ೯೮.೦೩ | ೧೦೨.೭೬ |
| ೧೬ | ಪಶುಪಾಲನೆ | ೭೦.೪೨ | ೮೭.೧೦ | ೧೦೩.೩೨ | ೧೦೩.೯೦ | ೧೧೭.೩೭ | ೧೨೦.೬೫ |

**ಕೋಷ್ಟಕ: ೮.೨೬** (ಮುಂದು.....)

| ಕ್ರ.ಸಂ | ವಲಯಗಳು | ೧೯೮೭–೮೮ | | ೧೯೮೮–೮೯ | | ೧೯೮೯–೯೦ | |
|---|---|---|---|---|---|---|---|
| | | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ |
| ೧೮ | ಸಾಮಾಜಿಕ ಅರಣ್ಯ | ೭೪.೨೩ | ೬೦.೧೯ | ೧೧೦.೫೩ | ೯೦.೨೯ | ೯೮.೨೭ | ೭೮.೨೧ |
| ೧೯ | ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು | ೨೬೨.೪೦ | ೨೦೬.೧೪ | ೨೪೦.೭೨ | ೨೪೪.೯೯ | ೨೨೯.೯೦ | ೨೨೩.೦೩ |
| ಅ | ಜೀತದಾಳು ಪುನರ್ ವಸತಿ | – | – | – | – | – | – |
| ಆ | ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ (ಉಸ್ತುವಾರಿ ಕೋಶ) | – | – | – | – | – | – |
| ಇ | ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ(ಸಹಾಯಧನ) | – | – | – | – | – | – |
| ಈ | ಟ್ರೈಸಂ ತರಬೇತಿ | – | – | – | – | – | – |
| ಉ | ಡ್ವಾಕ್ರಾ | – | – | – | – | – | – |
| ಊ | ಗ್ರಾಮೀಣ ಇಂಧನ | – | – | – | – | – | – |
| ಋ | ಭೂ ಸುಧಾರಣೆ | – | – | – | – | – | – |
| ೠ | ಜವಹಾರ್ ರೋಜ್‌ಗಾರ್ ಯೋಜನೆ | ೪೧೨.೬೮ | ೩೩೨.೮೧ | ೫೧೮.೬೪ | ೬೫೦.೪೨ | ೩೦೧.೬೭ | ೩೯೨.೨೦ |
| ಎ | ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳಿಗೆ | – | – | – | – | – | – |
| ಏ | ಗ್ರಾಮ ಪಂಚಾಯತಿಗಳಿಗೆ ಅನುದಾನ | – | – | – | – | – | – |
| ಐ | ಕೃಷಿ ಉತ್ಪಾದನೆ ಹೆಚ್ಚಿಸಲು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೆರವು | – | – | – | – | – | – |
| ಒ | ಜಿಲ್ಲಾ ಮಟ್ಟದ ಉಪಯೋಜನೆ | – | – | – | – | – | – |
| ಓ | ಜೈವಿಕ ಅನಿಲ ಮೇಲ್ವಿಚಾರಕರಿಗೆ ಸಂಭಾವನೆ | – | – | – | – | – | – |
| ೨೦ | ಸಹಕಾರ | ೭೬.೩೫ | ೨೧.೨೭ | ೨೦.೦೯ | ೨.೩೭ | ೯.೪೮ | ೩.೪೩ |
| ೨೧ | ಸಣ್ಣ ನೀರಾವರಿ | ೧೦೧.೮೭ | ೪೮.೮೨ | ೧೨೩.೬೬ | ೬೨.೫೫ | ೭೫.೧೪ | ೪೪.೦೪ |
| ೨೨ | ಖಾದಿ ಮತ್ತು ಗ್ರಾಮಾಂತರ ಕೈಗಾರಿಕೆಗಳು | ೫೧.೧೦ | ೫೧.೯೩ | ೭೨.೩೪ | ೬೪.೫೨ | ೭೩.೭೬ | ೭೨.೫೮ |
| ೨೩ | ರೇಷ್ಮೆ | | | | | | |
| ೨೪ | ಕೈಮಗ್ಗ ಮತ್ತು ಜವಳಿ | | | | | | |
| ೨೫ | ರಸ್ತೆಗಳು ಮತ್ತು ಸೇತುವೆಗಳು | ೧೭೪.೭೬ | ೧೦೨.೪೫ | ೧೯೩.೭ | ೧೩೭.೯೧ | ೧೫೨.೨೫ | ೧೫೦.೩೩ |
| ೨೬ | ಸಚಿವಾಲಯ ಆರ್ಥಿಕ ಸೇವೆಗಳು | ೪.೭೨ | ೨.೭೮ | ೪.೫೩ | ೪.೫೬ | ೫.೫೪ | ೫.೯೪ |
| | **ಒಟ್ಟು ಮೊತ್ತ** | ೫೧೪೭.೬೭ | ೪೬೯೭.೫೮ | ೬೧೩೭.೬೫ | ೬೦೬೩.೭೮ | ೫೭೪೭.೩೨ | ೫೯೭೪.೭೪ |

**ಆಧಾರ: ಜಿಲ್ಲಾ ಪಂಚಾಯತಿ, ತುಮಕೂರು**

ಈ ಯೋಜನೆಯ ಆರಂಭದಲ್ಲಿ (೧೯೮೫–೮೬) ಕೇವಲ ರೂ. ೨೧೦೦ ಗಳಿದ್ದ ತಲಾ ಆದಾಯವು ಈ ಯೋಜನೆಯ ಅಂತ್ಯಕ್ಕೆ (೧೯೯೦–೯೧ಕ್ಕೆ) ರೂ. ೩೬೮೧ ಕ್ಕೆ ಹೆಚ್ಚಳಗೊಂಡಿರುವುದು ಸ್ಪಷ್ಟವಾಗಿದೆ.

ಎಂಟನೇ ಪಂಚವಾರ್ಷಿಕ ಯೋಜನೆ ತಡವಾಗಿ ಆರಂಭಗೊಂಡ ಕಾರಣ ೧೯೯೦–೯೧ ಹಾಗೂ ೧೯೯೧–೯೨ರಲ್ಲಿ ವಾರ್ಷಿಕ ಯೋಜನೆಗಳನ್ನು ಜಾರಿಗೆ ತರಲಾಯಿತು. ೧೯೯೦–೯೧ ರಲ್ಲಿ ರೂ. ೭,೦೩೨.೪೭ ಲಕ್ಷ ಅನುದಾನವಿದ್ದು ರೂ. ೬,೮೬೧.೭೫ ಲಕ್ಷಗಳನ್ನು ವೆಚ್ಚ ಮಾಡಲಾಯಿತು. ಹಾಗೆಯೇ ೧೯೯೧–೯೨ ರಲ್ಲಿ ರೂ. ೮೬೧೪.೭೪ ಲಕ್ಷ ಅನುದಾನವಿದ್ದು, ರೂ. ೮೧೯೨.೯೨ ಲಕ್ಷ ವೆಚ್ಚ ಮಾಡಲಾಯಿತು. ಜಿಲ್ಲೆಯ ಅಭಿವೃದ್ಧಿಗಾಗಿ ವಿವಿಧ ವಲಯವಾರು ಬಿಡುಗಡೆಗೊಂಡ ಅನುದಾನ ಹಾಗೂ ವೆಚ್ಚವನ್ನು ಕೋಷ್ಟಕ ೮.೨೭ ರಲ್ಲಿ ನೀಡಿದೆ.

**ಕೋಷ್ಟಕ ೮.೨೭ ರಲ್ಲಿ ೧೯೯೦–೯೧ರ ಹಾಗೂ ೧೯೯೧–೯೨ರ ವಾರ್ಷಿಕ ಯೋಜನೆಗಳಲ್ಲಿ ವಲಯವಾರು ಆದ ಖರ್ಚಿನ ವಿವರಗಳು**

| ಕ್ರ.ಸಂ | ವಲಯಗಳು | ೧೯೯೦–೯೧ | | ೧೯೯೧–೯೨ | |
|---|---|---|---|---|---|
| | | ಅನು | ವೆಚ್ಚ | ಅನು | ವೆಚ್ಚ |
| ೧ | ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ | ೩೩೯೯.೬೫ | ೩೩೨೯.೧೨ | ೩೯೬೦.೭೬ | ೩೭೯೮.೦೩ |
| ೨ | ವಯಸ್ಕರ ಶಿಕ್ಷಣ | ೨೯.೬೯ | ೧೮.೦೨ | ೩೭.೫ | ೩೮.೧೬ |
| ೩ | ಯುವಜನಸೇವೆ ಮತ್ತು ಕ್ರೀಡೆ | ೫.೨೬ | ೬.೧೦ | ೧೫.೪೫ | ೧೨.೭೦ |
| ೪ | ಗ್ರಾಮೀಣ ಆರೋಗ್ಯ | ೪೩೫.೪೬ | ೪೪೬.೫೧ | ೫೦೩.೪೫ | ೪೪೧.೩೩ |
| ೫ | ಭಾರತೀಯ ವೈದ್ಯ ಪದ್ಧತಿ | – | – | – | – |
| ೬ | ಕುಟುಂಬ ಕಲ್ಯಾಣ ಕಾರ್ಯಕ್ರಮಗಳು | ೧೯೭.೦೭ | ೧೭೫.೨೫ | ೨೧೬.೫ | ೧೯೧.೫೧ |
| ೭ | ಗ್ರಾಮೀಣ ನೀರು ಪೂರೈಕೆ | ೧೮೨.೧೧ | ೨೫೬.೩೨ | ೨೩೨.೫೧ | ೩೫೧.೨೫ |
| ೮ | ಸಮಾಜ ಕಲ್ಯಾಣ | ೫೭೩.೫೪ | ೫೯೪.೦೯ | ೬೨೧.೯೭ | ೬೨೯.೮೯ |
| ೯ | ವಿಶೇಷ ಘಟಕ ಯೋಜನೆ | – | – | – | – |
| ೧೦ | ಹಿಂದುಳಿದ ವರ್ಗಗಳ ಕಲ್ಯಾಣ | – | – | – | – |
| ೧೧ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | ೧೬೩.೬೩ | ೧೩೭.೭೫ | ೨೦೪.೪೧ | ೧೪೩.೫೯ |
| ೧೨ | ಪೌಷ್ಟಿಕ ಆಹಾರ | ೧೫೦.೮೫ | ೧೪೪.೩೫ | ೨೨೦.೨೯ | ೧೮೦.೨೭ |
| ೧೩ | ವ್ಯವಸಾಯ | ೨೨೭.೭೬ | ೨೩೯.೨೮ | ೨೫೬.೭೩ | ೨೮೦.೩೫ |
| ೧೪ | ತೋಟಗಾರಿಕೆ | | | | |
| ೧೫ | ಭೂಸಾರ ಮತ್ತು ಜಲರಕ್ಷಣೆ | ೧೧೭.೦೭ | ೧೧೦.೧೯ | ೧೪೧.೦೨ | ೮೭.೪೬ |
| ೧೬ | ಪಶುಪಾಲನೆ | ೧೫೧.೬೨ | ೧೩೪.೩೭ | ೧೭೬.೮೯ | ೧೬೫.೯೪ |
| ೧೭ | ಮೀನುಗಾರಿಕೆ | ೨೩.೩೬ | ೨೭.೦೭ | ೩೦.೭೦ | ೨೬.೯೯ |
| ೧೮ | ಸಾಮಾಜಿಕ ಅರಣ್ಯ | ೧೦೧.೭೩ | ೨೭.೯೪ | ೧೦೯.೪೬ | ೮೪.೬೫ |
| ೧೯ | ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು | ೩೩೩.೯೦ | ೨೨೯.೫೫ | ೩೭೪.೩೪ | ೨೫೬.೬೬ |
| ಅ | ಜೀತದಾಳು ಪುನರ್ ವಸತಿ | – | – | – | – |
| ಆ | ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ (ಉಸ್ತುವಾರಿ ಕೋಶ) | – | – | – | – |
| ಇ | ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ(ಸಹಾಯಧನ) | – | – | – | – |

| ಕೋಷ್ಟಕ: ೮.೨೭ (ಮುಂದು.....) | | | | | |
|---|---|---|---|---|---|
| ಕ್ರ.ಸಂ | ವಲಯಗಳು | ೧೯೯೦–೯೧ | | ೧೯೯೧–೯೨ | |
| | | ಅನು | ವೆಚ್ಚ | ಅನು | ವೆಚ್ಚ |
| ಈ | ದ್ವಾಕ್ರಾ | – | – | – | – |
| ಉ | ಗ್ರಾಮೀಣ ಇಂಧನ | – | – | – | – |
| ಊ | ಭೂ–ಸುಧಾರಣೆಗಳು | – | – | – | – |
| ಋ | ಜವಹಾರ್ ರೋಜ್‌ಗಾರ್ ಯೋಜನೆ | ೬೪೧.೬೦ | ೬೯೮.೮೯ | ೧೧೨೯.೯೫ | ೧೦೩೪.೫೦ |
| ೠ | ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳಿಗೆ ಸಹಾಯ | – | – | – | – |
| ಎ | ಗ್ರಾಮ ಪಂಚಾಯತಿಗಳಿಗೆ ಅನುದಾನಗಳು | – | – | – | – |
| ಏ | ಕೃಷಿ ಉತ್ಪಾದನೆ ಹೆಚ್ಚಿಸಲು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೆರವು | – | – | – | – |
| ಐ | ಜಿಲ್ಲಾ ಮಟ್ಟದ ಉಪಯೋಜನೆ | – | – | – | – |
| ಒ | ಜೈವಿಕ ಅನಿಲ ಮೇಲ್ವಿಚಾರಕರಿಗೆ ಸಂಭಾವನೆ | – | – | – | – |
| ೨೦ | ಸಹಕಾರ | ೧.೨೦ | ೧.೭೯ | ೧.೦೫ | ೧.೦೦ |
| ೨೧ | ಸಣ್ಣ ನೀರಾವರಿ | ೬೪.೧೫ | ೫೦.೫೬ | ೭೫.೩೪ | ೬೧.೦೦ |
| ೨೨ | ಖಾದಿ ಮತ್ತು ಗ್ರಾಮಾಂತರ ಕೈಗಾರಿಕೆಗಳು | ೯೫.೫೭ | ೭೭.೬೭ | ೯೮.೧೮ | ೧೦೩.೫೭ |
| ೨೩ | ರೇಷ್ಮೆ | | | | |
| ೨೪ | ಕೈಮಗ್ಗ ಮತ್ತು ಜವಳಿ | | | | |
| ೨೫ | ರಸ್ತೆಗಳು ಮತ್ತು ಸೇತುವೆಗಳು | ೧೩೦.೩೦ | ೧೫೦.೯೮ | ೧೯೮.೦೫ | ೧೯೮.೮೩ |
| ೨೬ | ಸಚಿವಾಲಯ ಆರ್ಥಿಕ ಸೇವೆಗಳು | ೬.೯೫ | ೫.೯೫ | ೧೦.೧೯ | ೫.೨೪ |
| ಒಟ್ಟು ಮೊತ್ತ | | ೭೦೩೨.೪೭ | ೬೮೬೧.೭೫ | ೮೬೧೪.೭೪ | ೮೦೯೨.೯೨ |

**ಆಧಾರ: ಜಿಲ್ಲಾ ಪಂಚಾಯತ್, ತುಮಕೂರು.**

## ಎಂಟನೇ ಪಂಚವಾರ್ಷಿಕ ಯೋಜನೆ (೧೯೯೨–೯೭)

ಈ ಯೋಜನೆಯು ಬಡತನ ನಿರ್ಮೂಲನೆ, ಉದ್ಯೋಗ ನಿರ್ಮಾಣ, ಜನರ ಮೂಲಭೂತ ಅವಶ್ಯಕತೆಗಳ ಪೂರೈಕೆ, ಸಮರ್ಪಕ ಆರ್ಥಿಕ ಬೆಳವಣಿಗೆ, ಅದರಲ್ಲೂ ಪ್ರಮುಖವಾಗಿ ನೀರಾವರಿ, ವಿದ್ಯುತ್, ಕೃಷಿ ಹಾಗೂ ಕೈಗಾರಿಕೆಗಳಂತಹ ಪ್ರಮುಖ ವಲಯ ಅಭಿವೃದ್ಧಿ ಮುಂತಾದ ಉದ್ದೇಶಗಳನ್ನು ಹೊಂದಿತ್ತು. ಈ ಯೋಜನಾವಧಿಯಲ್ಲಿ ಪ್ರಮುಖ ವಲಯಗಳಿಗೆ ಒದಗಿಸಿರುವ ಅನುದಾನ ಹಾಗೂ ವೆಚ್ಚವನ್ನು ಕೋಷ್ಟಕ ೮.೨೮ ರಲ್ಲಿ ನೀಡಲಾಗಿದೆ.

## ಕೋಷ್ಟಕ ೮.೨೮ ೮ನೇ ಪಂಚವಾರ್ಷಿಕ (೧೯೯೨–೯೭) ಯೋಜನೆಯಲ್ಲಿ ವಲಯವಾರು ವೆಚ್ಚದ ವಿವರ

| ಕ್ರ. ಸಂ | ವಲಯಗಳು | ೧೯೯೨–೯೩ | | ೧೯೯೩–೯೪ | | ೧೯೯೪–೯೫ | | ೧೯೯೫–೯೬ | | ೧೯೯೬–೯೭ | |
|---|---|---|---|---|---|---|---|---|---|---|---|
| | | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ |
| ೧ | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ | ೪೭೬೬.೪೪ | ೪೬೦೨.೧ | ೫೫೬೮.೨೨ | ೫೨೫೬.೧೧ | ೬೧೨೦.೩೨ | ೫೮೯೫.೮೧ | ೭೦೬೮.೭೨ | ೬೯೩೫.೨೫ | ೮೦೨೬.೭೪ | ೮೨೭೧.೨೯ |
| ೨ | ವಯಸ್ಕರ ಶಿಕ್ಷಣ | ೫೦.೯೦ | ೯೨.೫೨ | ೬.೭೨ | ೧೨.೮೮ | ೭.೦೯ | ೭.೨೦ | – | – | – | – |
| ೩ | ಯುವಜನಸೇವೆ ಮತ್ತು ಕ್ರೀಡೆ | ೧೮.೪೪ | ೨೪.೨೮ | ೨೦.೩೮ | ೧೬.೮೦ | ೧೯.೮೪ | ೨೦.೯೬ | ೧೭.೦೦ | ೨೭.೧೩ | ೨೦.೧೪ | ೨೨.೬೯ |
| ೪ | ಗ್ರಾಮೀಣ ಆರೋಗ್ಯ | ೬೮೭.೧೮ | ೫೩೯.೩೯ | ೭೩೪.೪೧ | ೬೪೭.೪೩ | ೭೨೭.೩೫ | ೬೬೦.೭೫ | ೭೯೧.೬೩ | ೭೭೪.೭೮ | ೮೫೩.೧೮ | ೮೪೬.೫೫ |
| ೫ | ಭಾರತೀಯ ವೈದ್ಯ ಪದ್ಧತಿ | – | – | – | – | – | – | – | – | – | – |
| ೬ | ಕುಟುಂಬ ಕಲ್ಯಾಣ ಕಾರ್ಯಕ್ರಮಗಳು | ೨೪೧.೪೭ | ೨೧೧.೩೨ | ೨೨೪.೪೮ | ೨೪೧.೧೨ | ೨೩೯.೭೨ | ೨೫೯.೫೧ | ೩೫೩.೨೩ | ೩೦೫.೩೬ | ೪೦೬.೩೪ | ೩೦೭.೨೭ |
| ೭ | ಗ್ರಾಮೀಣ ನೀರು ಪೂರೈಕೆ | ೩೨೫.೫೩ | ೫೭೭.೪೭ | ೪೪೮.೩೧ | ೬೧೫.೩೨ | ೩೬೦.೬೯ | ೫೭೦.೩೬ | ೫೮೫.೭೭ | ೧೦೮೮.೯೫ | ೭೫೮.೩೯ | ೯೫೩.೧೪ |
| ೮ | ಸಮಾಜ ಕಲ್ಯಾಣ | ೭೦೧.೩೩ | ೭೩೯.೪೯ | ೮೬೨.೦೪ | ೬೮೭.೬೭ | ೮೯೬.೬೩ | ೬೯೦.೨೧ | ೧೦೧೮.೦೫ | ೭೦೩.೧೫ | ೧೧೨೧.೪೩ | ೮೭೨.೭೦ |
| ೯ | ವಿಶೇಷ ಘಟಕ ಯೋಜನೆ | – | – | – | – | – | – | – | – | – | – |
| ೧೦ | ಹಿಂದುಳಿದ ವರ್ಗಗಳ ಕಲ್ಯಾಣ | – | – | – | – | – | – | – | – | – | – |
| ೧೧ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | ೨೪೦.೯೮ | ೨೧೫.೬೨ | ೨೬೨.೮೨ | ೨೫೮.೧೩ | ೨೮೩.೫೭ | ೨೭೩.೨೬ | ೩೪೦.೬ | ೩೧೪.೪೧ | ೩೮೩.೧೯ | ೩೪೫.೪೪ |
| ೧೨ | ಪೌಷ್ಟಿಕ ಆಹಾರ | ೨೬೩.೬೪ | ೨೫೮.೭೭ | ೨೪೦.೩೫ | ೨೬೬.೪೨ | ೩೨೦.೭೦ | ೩೯೧.೫೨ | ೪೦೮.೨೭ | ೪೬೨.೫೭ | ೪೪೨.೫೭ | ೪೩೭.೪೦ |
| ೧೩. / ೧೪ | ವ್ಯವಸಾಯ / ತೋಟಗಾರಿಕೆ | ೩೧೧.೦೪ | ೩೨೫.೮೬ | ೩೭೧.೨೯ | ೩೮೩.೪೦ | ೩೬೯.೪೭ | ೪೩೫.೧೯ | ೪೨೧.೯೫ | ೫೩೬.೯೬ | ೪೨೯.೨೧ | ೫೦೫.೮೨ |
| ೧೫ | ಭೂಸಾರ ಮತ್ತು ಜಲರಕ್ಷಣೆ | ೯೪.೩೮ | ೯೭.೭೦ | ೧೦೨.೩೨ | ೧೦೦.೧೦ | ೯೪.೪೫ | ೧೦೭.೪೦ | ೧೦೫.೨೮ | ೮೬.೪೬ | ೬೫.೧೧ | ೭೯.೩೯ |
| ೧೬ | ಪಶುಪಾಲನೆ | ೧೦೯.೨೫ | ೨೦೩.೬೧ | ೨೩೨.೫೫ | ೨೩೭.೦೦ | ೨೬೪.೫೩ | ೨೬೬.೯೯ | ೩೦೮.೮೧ | ೩೧೪.೧೯ | ೩೬೪.೫೬ | ೩೭೩.೫೦ |
| ೧೭ | ಮೀನುಗಾರಿಕೆ | ೩೬.೧೨ | ೩೯.೫೯ | ೪೪.೬೩ | ೪೨.೭೬ | ೪೧.೪೨ | ೪೧.೬೪ | ೪೪.೫೯ | ೪೯.೦೬ | ೫೩.೫೪ | ೫೩.೩೧ |
| ೧೮ | ಸಾಮಾಜಿಕ ಅರಣ್ಯ | ೨೨೦.೫ | ೧೫೮.೬ | ೮೭.೦೦ | ೨೧೩.೧೫ | ೨೫೨.೦೫ | ೧೭೬.೨೪ | ೧೭೦.೮೦ | ೨೧೬.೦೨ | ೧೮೩.೭೦ | ೧೦೪.೬೮ |
| ೧೯ | ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು | ೩೬೧.೨೨ | ೨೧೯.೪೨ | ೪೪೭.೯೨ | ೨೬೨.೭೬ | ೪೭೬.೮೬ | ೩೭೬.೮೮ | ೪೯೩.೮೬ | ೨೮೩.೭೪ | ೬೫೫.೦೦ | ೩೧೫.೯೮ |

**ಕೋಷ್ಟಕ: ೮.೨೮** (ಮುಂದು.....)

| ಕ್ರ ಸಂ | ವಲಯಗಳು | ೧೯೯೨-೯೩ | | ೧೯೯೩-೯೪ | | ೧೯೯೪-೯೫ | | ೧೯೯೫-೯೬ | | ೧೯೯೬-೯೭ | |
|---|---|---|---|---|---|---|---|---|---|---|---|
| | | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ |
| ಅ | ಜೀತದಾಳು ಪುನರ್ ವಸತಿ | – | – | – | – | – | – | – | – | – | – |
| ಆ | ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ (ಉಸ್ತುವಾರಿ ಕೋಶ) | – | – | – | – | – | – | – | – | – | – |
| ಇ | ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ(ಸಹಾಯಧನ) | – | – | – | – | – | – | – | – | – | – |
| ಈ | ಟ್ರೈಸಂ ತರಬೇತಿ | – | – | – | – | – | – | – | – | – | – |
| ಉ | ಡ್ವಾಕ್ರಾ | – | – | – | – | – | – | – | – | – | – |
| ಊ | ಗ್ರಾಮೀಣ ಇಂಧನ | – | – | – | – | – | – | – | – | – | – |
| ಋ | ಭೂಸುಧಾರಣೆಗಳು | – | – | – | – | – | – | – | – | – | – |
| ೠ | ಜವಹಾರ್ ರೋಜ್‌ಗಾರ್ ಯೋಜನೆ | ೧೯೩.೯೬ | ೯೧೪.೨೨ | ೧೧೬೩.೯೦ | ೧೫೩೮.೦೮ | ೨೦೮೧.೭೦ | ೯೭೮.೦೮ | ೧೭೯೩.೨೫ | ೬೫೮.೭೮ | ೧೭೩೦.೦೦ | ೬೨೨.೨೦ |
| ಎ | ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳಿಗೆ ಸಹಾಯ | – | – | – | – | ೪೧೮.೦೦ | ೭೯.೬೮ | ೪೦೧.೨೫ | ೪೦೬.೨೫ | ೪೯೭.೦೦ | ೪೪೭.೦೦ |
| ಏ | ಗ್ರಾಮ ಪಂಚಾಯತಿಗಳಿಗೆ ಅನುದಾನ | – | – | – | – | – | – | – | – | – | – |
| ಐ | ಕೃಷಿ ಉತ್ಪಾದನೆ ಹೆಚ್ಚಿಸಲು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೆರವು | – | – | – | – | – | – | – | – | – | – |
| ಒ | ಜಿಲ್ಲಾ ಮಟ್ಟದ ಉಪಯೋಜನೆ | – | – | – | – | – | – | – | – | – | – |
| ಓ | ಜೈವಿಕ ಅನಿಲ ಮೇಲ್ವಿಚಾರಕರಿಗೆ ಸಂಭಾವನೆ | – | – | – | – | – | – | – | – | – | – |
| ೨೦ | ಸಹಕಾರ | ೦.೧೫ | ೫.೦೬ | ೨.೦೦ | ೪.೮೨ | ೪.೧೬ | ೫.೫೮ | ೪.೫೯ | ೪.೫೯ | ೬.೩೫ | ೮.೩೫ |
| ೨೧ | ಸಣ್ಣ ನೀರಾವರಿ | ೭೮.೯೬ | ೬೪.೯೪ | ೫೬.೫೮ | ೫೮.೭ | ೫೧.೪೨ | ೪೬.೨೫ | ೫೬.೦೦ | ೪೯.೪೪ | ೫೭.೯೮ | ೫೮.೭೯ |

**ಕೋಷ್ಟಕ: ೮.೨೮** (ಮುಂದು.....)

| ಕ್ರ ಸಂ | ವಲಯಗಳು | ೧೯೯೨-೯೩ | | ೧೯೯೩-೯೪ | | ೧೯೯೪-೯೫ | | ೧೯೯೫-೯೬ | | ೧೯೯೬-೯೭ | |
|---|---|---|---|---|---|---|---|---|---|---|---|
| | | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ |
| ೨೨ | ಖಾದಿ ಮತ್ತು ಗ್ರಾಮಾಂತರ ಕೈಗಾರಿಕೆಗಳು | ೧೩೭.೯೩ | ೧೦೧.೪೩ | ೧೨೪.೧೮ | ೧೦೫.೦೨ | ೧೬೧.೮೭ | ೧೨೨.೫೯ | ೧೬೯.೩೪ | ೧೪೨.೦೨ | ೧೬೪.೯೬ | ೧೨೫.೫೧ |
| ೨೩ | ರೇಷ್ಮೆ | | | | | | | | | | |
| ೨೪ | ಕೈಮಗ್ಗ ಮತ್ತು ಜವಳಿ | | | | | | | | | | |
| ೨೫ | ರಸ್ತೆಗಳು ಮತ್ತು ಸೇತುವೆಗಳು | ೧೮೪.೪೬ | ೨೧೧.೮೭ | ೨೧೩.೩೭ | ೨೫೮.೫೯ | ೨೦೧.೫೬ | ೧೮೪.೨೩ | ೧೮೯.೨೮ | ೧೮೨.೮೫ | ೧೯೭.೫೪ | ೨೮೯.೨೮ |
| ೨೬ | ಸಚಿವಾಲಯ ಆರ್ಥಿಕ ಸೇವೆಗಳು | ೮.೩೮ | ೭.೫೨ | ೯.೬೧ | ೭.೭೨ | ೧೧.೯೭ | ೧೧.೦೯ | ೧೩.೪೦ | ೧೧.೩೧ | ೧೪.೨೦ | ೧೦.೬೯ |
| | ಒಟ್ಟು ಮೊತ್ತ | ೯೦೩೨.೨೬ | ೯೬೧೦.೭೮ | ೧೧೨೨೩.೦೮ | ೧೧೨೧೩.೯೮ | ೧೩೪೦೫.೩೭ | ೧೧೬೦೧.೦೨ | ೧೪೭೫೫.೬೭ | ೧೩೫೫೩.೨೭ | ೧೬೪೩೧.೧೩ | ೧೫೦೫೦.೯೮ |

**ಆಧಾರ: ಜಿಲ್ಲಾ ಪಂಚಾಯತ್, ತುಮಕೂರು.**

ಈ ಯೋಜನಾವಧಿಯ ಕೊನೆಗೆ ತಲಾ ಆದಾಯವು ರೂ. ೯೦೧೧ಗಳಾಗಿದ್ದು, ರಾಜ್ಯದಲ್ಲಿ ೧೮ನೇ ಸ್ಥಾನವನ್ನು ಪಡೆದಿತ್ತು. ಹೆಚ್ಚಿನ ವಿವರಗಳಿಗೆ ಜಿಲ್ಲಾದಾಯ ಹಾಗೂ ತಲಾ ಆದಾಯವನ್ನು ನೋಡಿ.

## ಒಂಬತ್ತನೇ ಪಂಚವಾರ್ಷಿಕ ಯೋಜನೆ(೧೯೯೭–೨೦೦೨)

ಅಭಿವೃದ್ಧಿ ಪ್ರಯತ್ನಗಳ ಅಂತಿಮ ಗುರಿಯು ಮಾನವ ಅಭಿವೃದ್ಧಿ ಮತ್ತು ಅದಕ್ಕೆ ಅತ್ಯಾವಶ್ಯಕವಾಗಿರುವ ಬಡತನ ನಿವಾರಣೆ ಹಾಗೂ ಜೀವನ ಮಟ್ಟದ ಸುಧಾರಣೆ, ಈ ಉದ್ದೇಶದೊಂದಿಗೆ ಒಂಬತ್ತನೇಯ ಪಂಚವಾರ್ಷಿಕ ಯೋಜನೆಯನ್ನು ಜಾರಿಗೆ ತರಲಾಯಿತು. ಈ ಅವಧಿಯಲ್ಲಿ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗಾಗಿ ವಲಯವಾರು ಮಾಡಿದ ವೆಚ್ಚದ ವಿವರಗಳನ್ನು ಕೋಷ್ಟಕ ೮.೨೯ ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೨೯ ಒಂಬತ್ತನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗಾಗಿ ಮಾಡಿದ ವಲಯವಾರು ವೆಚ್ಚದ ವಿವರ.**

| ಕ್ರ.ಸಂ | ವಲಯಗಳು | ೧೯೯೭-೯೮ | | ೧೯೯೮-೯೯ | | ೧೯೯೯-೨೦೦೦ | | ೨೦೦೧-೦೨ | |
|---|---|---|---|---|---|---|---|---|---|
| | | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ |
| ೧ | ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ | ೯೩೦೮.೩೭ | ೬೪೧೪.೬೧ | ೧೦೭೭೭.೨೩ | ೧೦೮೦೧.೫೬ | ೧೩೪೬೬.೩೯ | ೧೫೫೨೬.೧೭ | ೧೫೬೨೮.೬೩ | ೧೪೫೯೩.೧೫ |
| ೨ | ವಯಸ್ಕರ ಶಿಕ್ಷಣ | ೨.೫೩ | ೪.೪೪ | ೧೦.೨೦ | ೬.೪೧ | ೯.೦೮ | ೭.೦೪ | ೯.೧೮ | ೯.೭೫ |
| ೩ | ಯುವಜನಸೇವೆ ಮತ್ತು ಕ್ರೀಡೆ | ೩೨.೫೭ | ೩೦.೯೬ | ೩೪.೭೭ | ೩೫.೪೬ | ೩೧.೩೫ | ೩೧.೦೬ | ೩೧.೮೩ | ೧೭.೬೪ |
| ೪ | ಗ್ರಾಮೀಣ ಆರೋಗ್ಯ | ೧೦೮೬.೨೧ | ೧೦೨೫.೯೭ | ೧೧೯೧.೫೫ | ೧೦೫೫.೪೭ | ೧೨೯೩.೦೯ | ೧೩೯೦.೮೫ | ೧೧೧೮.೩೯ | ೧೪೩೯.೦೩ |
| ೫ | ಭಾರತೀಯ ವೈದ್ಯ ಪದ್ಧತಿ | | | | | | | | |
| ೬ | ಕುಟುಂಬ ಕಲ್ಯಾಣ ಕಾರ್ಯಕ್ರಮಗಳು | ೪೮೨.೬೪ | ೩೬೨.೬೧ | ೫೪೧.೧೮ | ೪೦೧.೫೨ | ೫೭೬.೦೪ | ೪೭೮.೯೧ | ೭೦೧.೬೭ | ೫೫೫.೨೦ |
| ೭ | ಗ್ರಾಮೀಣ ನೀರು ಪೂರೈಕೆ | ೧೨೦೧.೧೨ | ೧೧೮೪.೯೪ | ೧೨೧೬.೧೫ | ೧೫೪೪.೮೬ | ೧೧೫೧.೦೮ | ೧೪೭೧.೯೫ | ೨೦೦೭.೦೩ | ೧೩೬೫.೩೧ |
| ೮ | ಸಮಾಜ ಕಲ್ಯಾಣ | ೧೩೬೦.೫೮ | ೧೧೨೨.೯೯ | ೧೩೨೭.೩೭ | ೧೦೬೫.೮೯ | ೧೧೮೭.೧೮ | ೧೩೮೩.೩೯ | ೧೭೦೯.೯೫ | ೧೪೬೩.೧೫ |
| ೯ | ವಿಶೇಷ ಘಟಕ ಯೋಜನೆ | – | – | – | – | – | – | – | – |
| ೧೦ | ಹಿಂದುಳಿದ ವರ್ಗಗಳ ಕಲ್ಯಾಣ | – | – | – | – | – | – | – | – |
| ೧೧ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | ೪೬೮.೭೫ | ೪೫೦.೫೩ | ೫೫೨.೩೧ | ೫೦೦.೮೧ | ೫೭೨.೫೨ | ೪೬೧.೪೯ | ೬೭೯.೩೪ | ೭೦೯.೭೨ |
| ೧೨ | ಪೌಷ್ಟಿಕ ಆಹಾರ | ೫೧೮.೦೦ | ೪೭೬.೯೧ | ೪೯೫.೭೨ | ೪೪೩.೩೩ | ೪೮೧.೬೮ | ೪೯೪.೪೧ | ೬೬೦.೫೨ | ೫೩೮.೬೬ |
| ೧೩ | ವ್ಯವಸಾಯ | ೫೫೩.೨೦ | ೫೮೭.೪೦ | ೪೯೫.೩೫ | ೬೩೬.೦೨ | ೬೪೯.೭೩ | ೮೩೯.೭೬ | ೭೧೨.೪೪ | ೯೪೩.೮೭ |
| ೧೪ | ತೋಟಗಾರಿಕೆ | | | | | | | | |
| ೧೫ | ಭೂಸಾರ ಮತ್ತು ಜಲರಕ್ಷಣೆ | ೭೫.೦೯ | ೮೭.೫೪ | ೪೬.೭೭ | ೮೮.೬೨ | ೯೭.೬೦ | ೧೧೫.೬೦ | ೧೭೪.೭೩ | ೧೬೭.೬೦ |

**ಕೋಷ್ಟಕ: ೮.೨೯** (ಮುಂದು.....)

| ಕ್ರ.ಸಂ | ವಲಯಗಳು | ೧೯೯೭–೯೮ | | ೧೯೯೮–೯೯ | | ೧೯೯೯–೨೦೦೦ | | ೨೦೦೧–೦೨ | |
|---|---|---|---|---|---|---|---|---|---|
| | | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ |
| ೧೭ | ಮೀನುಗಾರಿಕೆ | ೫೮.೯೩ | ೫೪.೫೦ | ೬೦.೧೭ | ೫೨.೩೫ | ೪೫.೮೩ | ೬೫.೭೪ | ೬೪.೬೨ | ೫೮.೫೬ |
| ೧೮ | ಸಾಮಾಜಿಕ ಅರಣ್ಯ | ೧೯೦.೦೦ | ೭೬.೧೦ | ೧೯೮.೫೦ | ೧೧೮.೯೫ | ೭೯.೦೦ | ೧೬೯.೯೫ | ೧೨೯.೮೮ | ೧೩೮.೩೨ |
| ೧೯ | ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು | ೮೦೮.೦೦ | ೧೯೨.೧೧ | ೫೦೨.೦೦ | ೩೮೫.೭೩ | ೭೦.೦೦ | ೫೦.೭೪ | ೭೫೭.೬೫ | ೧೭೯.೯೬ |
| ಅ | ಜೀತದಾಳು ಪುನರ್ ವಸತಿ | – | – | – | – | – | – | – | – |
| ಆ | ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ (ಉಸ್ತುವಾರಿ ಕೋಶ) | – | ೧೦೨.೭೯ | – | – | – | ೧೭೪.೭೭ | – | – |
| ಇ | ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ(ಸಹಾಯಧನ) | – | ೭.೩೨ | – | – | ೨೪೦.೦೦ | ೨೨.೭೧ | – | ೯೪.೧೧ |
| ಈ | ಟ್ರೈಸಂ ತರಬೇತಿ | – | ೨೭೧.೩೭ | – | – | ೪೪.೦೦ | | – | ೧೫.೦೦ |
| ಉ | ಡ್ವಾಕ್ರಾ | – | ೧.೪೮ | – | – | ೨೦.೦೦ | | – | ೦.೦೦ |
| ಊ | ಗ್ರಾಮೀಣ ಇಂಧನ | – | ೦.೦೦ | – | – | ೮.೦೦ | | – | ೪.೦೯ |
| ಋ | ಭೂಸುಧಾರಣೆಗಳು | – | – | – | – | – | – | – | – |
| ೠ | ಜವಹಾರ್ ರೋಜ್‌ಗಾರ್ ಯೋಜನೆ | ೧೬೫೩.೨೦ | ೪೪೯.೩೮ | ೧೭೧೫.೦೦ | ೩೮೮.೩೦ | ೧೪೫೪.೪೦ | ೩೨೧.೫೪ | ೯೫೮.೬೮ | ೩೧೧.೧೫ |
| ಎ | ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳಿಗೆ ಸಹಾಯ | ೪೨೮.೫೦ | ೪೨೮.೫೦ | ೩೯೧.೦೦ | ೩೯೧.೦೦ | ೮೭.೧೦ | ೧೩೬೦.೦೩ | ೧೨೯೨.೦೦ | ೫೮೦.೦೯ |

**ಕೋಷ್ಟಕ: ೮.೨೯** (ಮುಂದು.....)

| ಕ್ರ.ಸಂ | ವಲಯಗಳು | ೧೯೯೭–೯೮ | | ೧೯೯೮–೯೯ | | ೧೯೯೯–೨೦೦೦ | | ೨೦೦೧–೦೨ | |
|---|---|---|---|---|---|---|---|---|---|
| | | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ |
| ೮ | ಜಿಲ್ಲಾ ಮಟ್ಟದ ಉಪಯೋಜನೆ | – | – | – | – | – | – | – | – |
| ೯ | ಜೈವಿಕ ಅನಿಲ ಮೇಲ್ವಿಚಾರಕರಿಗೆ ಸಂಭಾವನೆ | – | – | – | – | – | – | – | ೧೦.೯೯ |
| ೨೦ | ಸಹಕಾರ | ೬.೨೫ | ೫.೪೦ | ೫.೩೫ | ೪.೦೪ | ೨.೧೫ | ೧.೨೫ | ೧.೦೦ | ೧.೩೪ |
| ೨೧ | ಸಣ್ಣ ನೀರಾವರಿ | ೬೩.೭೮ | ೪೨.೬೩ | ೭೩.೭೫ | ೬೬.೫೭ | ೭೪.೯೩ | ೭೯.೨೦ | ೯೪.೭೦ | ೯೩.೮೩ |
| ೨೨ | ಖಾದಿ ಮತ್ತು ಗ್ರಾಮಾಂತರ ಕೈಗಾ–ರಿಕೆಗಳು | ೧೬೨.೬೦ | ೧೭೧.೬೫ | ೨೦೭.೪೧ | ೧೯೨.೧೧ | ೨೧೧.೮೧ | ೧೯೨.೮೪ | ೨೫೩.೮೬ | ೨೨೫.೫೬ |
| ೨೩ | ರೇಷ್ಮೆ | | | | | | | | |
| ೨೪ | ಕೈಮಗ್ಗ ಮತ್ತು ಜವಳಿ | | | | | | | | |
| ೨೫ | ರಸ್ತೆಗಳು ಮತ್ತು ಸೇತುವೆಗಳು | ೨೮೧.೨೧ | ೨೮೭.೯೭ | ೨೮೧.೨೧ | ೩೨೬.೨೯ | ೩೩೫.೦೨ | ೪೯೨.೪೭ | ೧೦೭೧.೭೯ | ೧೨೭೬.೮೨ |
| ೨೬ | ಸಚಿವಾಲಯ ಆರ್ಥಿಕ ಸೇವೆಗಳು | ೧೩.೩೧ | ೧೧.೩೪ | ೩೦.೦೫ | ೪೨.೯೬ | ೩೩.೮೩ | ೪೦.೮೬ | ೧೯.೪೫ | ೨೯.೧೫ |
| | **ಒಟ್ಟು ಮೊತ್ತ** | **೧೯೧೯೭.೯೭** | **೧೪೩೭೮.೮೫** | **೨೦೮೦೫.೫೦** | **೧೯೧೦೦.೯೫** | **೨೨೭೭೫.೦೦** | **೨೫೮೦೦.೩೩** | **೨೮೭೩೭.೧೩** | **೨೫೪೭೦.೫೦** |

ಆಧಾರ: ಜಿಲ್ಲಾ ಪಂಚಾಯತ್, ತುಮಕೂರು.

ಒಂಬತ್ತನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ತಲಾ ವರಮಾನ ೧೯೯೭–೯೮ರಲ್ಲಿ ರೂ.೯೦೧೧ಗಳಿದ್ದದ್ದು, ೨೦೦೧–೦೨ರ ಕೊನೆಗೆ ರೂ. ೧೨,೯೪೫ಗಳಿಗೆ ಹೆಚ್ಚಳಗೊಂಡಿರುವುದು ಜಿಲ್ಲೆಯ ಅಭಿವೃದ್ಧಿಯ ದ್ಯೋತಕವಾಗಿದೆ. ತಲಾ ವರಮಾನದಲ್ಲಿ ಹೆಚ್ಚಳಗೊಂಡಿದ್ದರೂ ರಾಜ್ಯದಲ್ಲಿ ಜಿಲ್ಲೆಯ ಸ್ಥಾನ ೨೩ಕ್ಕೆ ಕುಸಿದಿತ್ತು. ಇತರೆ ಜಿಲ್ಲೆಗಳ ತಲಾ ಆದಾಯವು ಹೆಚ್ಚಳಗೊಂಡಿರುವುದು ಜಿಲ್ಲೆಯ ಸ್ಥಾನ ಕುಸಿತಕ್ಕೆ ಕಾರಣವಾಗಿದೆ.

## ಹತ್ತನೇ ಪಂಚವಾರ್ಷಿಕ ಯೋಜನೆ (೨೦೦೨–೦೭)

ಈ ಯೋಜನೆಯಲ್ಲಿ ಜಿಲ್ಲೆಯ ಅಭಿವೃದ್ಧಿಗಾಗಿ ೨೦೦೨–೦೩ರಲ್ಲಿ ರೂ. ೨೭,೯೬೯.೧೩ (ರೂ. ೨೬,೩೦೨.೯೮ ಲಕ್ಷ) ಲಕ್ಷಗಳು, ೨೦೦೩–೦೪ರಲ್ಲಿ ರೂ. ೧೩,೮೮೬.೧೨ (ರೂ. ೧೧,೯೯೧.೮೧ಲಕ್ಷ) ಲಕ್ಷಗಳು, ೨೦೦೪–೦೫ರಲ್ಲಿ ರೂ. ೪೨,೧೮೮.೬೪ (ರೂ. ೩೧,೬೭೩.೯೫ ಲಕ್ಷ) ಲಕ್ಷಗಳು, ೨೦೦೫–೦೬ರಲ್ಲಿ ರೂ. ೨೭,೪೬೧.೭೪ (ರೂ. ೨೯,೮೯೯.೭೭ ಲಕ್ಷ) ಲಕ್ಷಗಳು ಹಾಗೂ ೨೦೦೬–೦೭ರಲ್ಲಿ ರೂ. ೩೦,೯೦೭.೪೬ (ರೂ. ೨೯,೦೯೩.೦೭ ಲಕ್ಷ) ಲಕ್ಷ ಅನುದಾನ ಬಿಡುಗಡೆಯಾಗಿತ್ತು. ಆವರಣದಲ್ಲಿ ನೀಡಿರುವ ಅಂಕಿ ಅಂಶಗಳು ಆಯಾ ಸಾಲಿನಲ್ಲಿ ಆದ ನೈಜ ವೆಚ್ಚಗಳಾಗಿವೆ. ಈ ಯೋಜನಾವಧಿಯಲ್ಲಿ ವಲಯವಾರು ಮಾಡಿರುವ ಅನುದಾನ ಹಾಗೂ ವೆಚ್ಚದ ವಿವರಗಳನ್ನು ಕೋಷ್ಟಕ ೮.೩೦ರಲ್ಲಿ ನೀಡಲಾಗಿದೆ.

### ಕೋಷ್ಟಕ: ೮.೩೦ ೧೦ನೇ ಪಂಚ ವಾರ್ಷಿಕ ಯೋಜನಾವಧಿಯಲ್ಲಿ (೨೦೦೨–೦೭) ವಲಯವಾರು ವೆಚ್ಚದ ವಿವರ

| ಕ್ರ.ಸಂ | ವಲಯಗಳು | ೨೦೦೨–೦೩ | | ೨೦೦೩–೦೪ | | ೨೦೦೪–೦೫ | | ೨೦೦೫–೦೬ | | ೨೦೦೬–೦೭ | |
|---|---|---|---|---|---|---|---|---|---|---|---|
| | | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ |
| ೧ | ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ | ೧೫೭೩.೦೫ | ೧೫೧೫೬.೦೪ | ೩೧೫೧.೨೫ | ೩೭೦೭.೦೧ | ೪೯೩೦.೦೩ | ೫೯೨.೧೧ | ೫೯೧೪.೩೪ | ೫೬೬೮.೪೦ | ೭೪೪೨.೮೪ | ೬೪೯೯.೪೧ |
| ೨ | ವಯಸ್ಕರ ಶಿಕ್ಷಣ | ೯.೬೦ | ೮.೮೫ | ೯.೭೦ | ೮.೪೫ | ೧೦.೩೩ | ೭.೬೨ | ೧೧.೪೧ | ೭.೪೫ | ೮.೭೨ | ೭.೮೩ |
| ೩ | ಯುವಜನಸೇವೆ ಮತ್ತು ಕ್ರೀಡೆ | ೨೪.೮೨ | ೧೫.೯೬ | ೨೦.೨೭ | ೧೬.೫೨ | ೧೬.೭೪ | ೧೯.೭೬ | ೨೧.೦೪ | ೨೩.೯೬ | ೨೦.೪೬ | ೨೦.೦೯ |
| ೪ | ಗ್ರಾಮೀಣ ಆರೋಗ್ಯ | ೧೨೫೩.೨೬ | ೧೩೨೯.೦೯ | ೧೨೩೩.೧೬ | ೧೧೨೭.೨೨ | ೧೬೯೦.೨೬ | ೧೪೬೧.೪೯ | ೧೭೨.೯೧ | ೧೬೦.೩೪ | ೨೦೩.೨೬ | ೧೪೧.೦೬ |
| ೫ | ಭಾರತೀಯ ವೈದ್ಯ ಪದ್ಧತಿ | | | | ೧೩೪೫.೯ | ೧೧೮೯.೬೫ | ೨೫೫೦.೮೪ | ೧೨೪೫.೯೪ | – | | |
| ೬ | ಕುಟುಂಬ ಕಲ್ಯಾಣ ಕಾರ್ಯಕ್ರಮಗಳು | ೬೯೭.೩೯ | ೫೪೫.೪೩ | ೧೧.೧೯ | ೧೪.೬೭ | ೬೮೯.೫೮ | ೫೬೭.೭೭ | ೭೦೯.೯೯ | ೬೧೪.೪೨ | ೮೭೬.೮೦ | ೭೬೭.೪೬ |
| ೭ | ಗ್ರಾಮೀಣ ನೀರು ಪೂರೈಕೆ | ೧೪೬೭.೪೫ | ೧೩೯೪.೧೦ | ೧೯೭೮.೬೦ | ೧೬೦೪.೭೯ | ೧೦೩೨.೫೮ | ೮೯೬.೪೫ | ೬೦.೯೭ | ೨೬೨.೬೧ | ೯೭.೫೩ | ೧೭೩.೯೬ |
| ೮ | ಸಮಾಜ ಕಲ್ಯಾಣ | ೧೮೭೩.೯೫ | ೧೪೨೬.೦೭ | ೧೫೨೭.೮೨ | ೭೭೫.೧೪ | ೮೪೫.೫೪ | ೮೩೨.೨೨ | ೫೯೬.೪೦ | ೨೯೪.೦೬ | ೬೯೮.೭೭ | ೩೮೬.೩೧ |
| ೯ | ವಿಶೇಷ ಘಟಕ ಯೋಜನೆ | | | | ೪೧೬.೯೦ | ೮೪೨.೦೮ | ೪೬೬.೬೫ | ೭೭೫.೬೮ | – | | |
| ೧೦ | ಹಿಂದುಳಿದ ವರ್ಗಗಳ ಕಲ್ಯಾಣ | | | | | | | | | | |
| ೧೧ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | ೮೪೮.೨೧ | ೮೭೮.೪ | ೬೬೧.೧೨ | ೧೪೩.೯೫ | ೨೪೫.೪೦ | ೫೯೩.೯೨ | ೨೫೮.೯೯ | ೨೬೭.೮೪ | ೪೦೭.೭೩ | ೩೫೮.೩೦ |
| ೧೨ | ಪೌಷ್ಟಿಕ ಆಹಾರ | ೫೯೮.೦೩ | ೪೬೧.೯೯ | ೬೧೮.೯೧ | ೧೪.೨೦ | ೬೧೮.೯೧ | ೨೮೩.೩೪ | ೯೯.೫೦ | ೦೦.೦೦ | ೦೦.೦೦ | ೦೦.೦೦ |

**ಕೋಷ್ಟಕ: ೮.೩೦** (ಮುಂದು.....)

| ಕ್ರ.ಸಂ | ವಲಯಗಳು | ೨೦೦೨–೦೩ | | ೨೦೦೩–೦೪ | | ೨೦೦೪–೦೫ | | ೨೦೦೫–೦೬ | | ೨೦೦೬–೦೭ | |
|---|---|---|---|---|---|---|---|---|---|---|---|
| | | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ |
| ೧೩ | ವ್ಯವಸಾಯ | ೭೦೩.೮೧ | ೭೧೭.೭೦ | ೭೦೬.೦೫ | ೩೪೮.೨೭ | ೬೪೩.೦೩ | ೭೦೧.೧೫ | ೭೦೨.೮೬ | ೬೯೦.೦೨ | ೭೪೪.೫೦ | ೭೧೮.೫೫ |
| ೧೪ | ತೋಟಗಾರಿಕೆ | | | | | | | | | | |
| ೧೫ | ಭೂಸಾರ ಮತ್ತು ಜಲರಕ್ಷಣೆ | ೩೨೪.೦೫ | ೨೮೨.೫೨ | ೧೫೫.೧೨ | ೮೨೭.೭೦ | ೨೧೫.೬೨ | ೨೪೨.೯೦ | ೨೮೯೨.೦೧ | ೨೬೮೦.೪೪ | ೧೯೧೬.೬೭ | ೨೦೪೫.೩೨ |
| ೧೬ | ಪಶುಪಾಲನೆ | ೬೩೧.೯೮ | ೭೦೦.೦೦ | ೫೫೭.೩೬ | ೩೧೦.೬೧ | ೪೫೭.೫೩ | ೫೩೮.೮೪ | ೩೯೫.೭೬ | ೩೮೬.೧೦ | ೩೫೮.೮೭ | ೩೬೯.೧೫ |
| ೧೭ | ಮೀನುಗಾರಿಕೆ | ೫೯.೬೩ | ೫೫.೨೩ | ೫೮.೯೭ | ೫೫.೬೬ | ೫೨.೯೬ | ೫೫.೧೩ | ೬೦.೪೧ | ೬೩.೪೨ | ೬೨.೩೮ | ೫೮.೫೭ |
| ೧೮ | ಸಾಮಾಜಿಕ ಅರಣ್ಯ | ೧೦೦.೯೩ | ೧೧೮.೮೦ | ೧೧೩.೫೫ | ೧೧೯.೬೪ | ೧೦೫.೦೨ | ೧೧೦.೧೫ | ೧೧೬.೧೦ | ೧೧೭.೪೦ | ೧೩೦.೦೬ | ೧೩೨.೮೮ |
| ೧೯ | ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು | ೧೧೬೨.೨೧ | ೪೭.೩೬ | ೪೬೪.೮೬ | ೧೦೭.೦೪ | ೪೦೧.೪೪ | ೦.೦೦ | ೦.೦೦ | ೦.೦೦ | ೦.೦೦ | ೦.೦೦ |
| ಅ | ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ (ಉಸ್ತುವಾರಿ ಕೋಶ) | ೫೬.೧೯ | ೧೨೯.೦೦ | ೫೯.೧೧ | – | – | ೩೯.೩೦ | – | – | – | – |
| ಆ | ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ(ಸಹಾಯಧನ) | – | ೪.೩೮ | – | ೫೧.೯೧ | – | ೯೬.೭೦ | – | – | – | – |
| ಇ | ಟ್ರೈಸಂ ತರಬೇತಿ | – | ೯.೯೩ | – | – | – | ೩೯.೩೧ | – | –– | – | – |
| ಈ | ಗ್ರಾಮೀಣ ಇಂಧನ | ೭.೪೭ | ೬.೬೫ | – | ೨೪.೦೪ | – | ೭.೬೪ | – | ೦.೧೯ | – | – |
| ಉ | ಭೂ–ಸುಧಾರಣೆಗಳು | – | – | – | – | – | – | – | – | – | – |
| ಊ | ಜವಹಾರ್ ರೋಜ್‌ಗಾರ್ ಯೋಜನೆ | ೯೪೬.೪೯ | ೫೬೧.೦೮ | ೯೦೫.೯೬ | ೩೬೨.೯೬ | ೯೦೫.೯೨ | ೬೯೧.೨೨ | ೧೦೭.೫೫ | ೮೪.೭೮ | ೨೭೧.೪೫ | ೯೫.೩೧ |
| ಋ | ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳಿಗೆ ಸಹಾಯ | ೫೬೮.೮೩ | ೧೫೬೫.೦೫ | ೮೫೨.೧೦ | ೭೯೫.೦೬ | ೨೬೫೨೦.೪೫ | ೧೬೫೧೧೬.೮೧ | ೧೨೨೬೬.೮೩ | ೧೫೭೧೧.೦೧ | ೧೩೯೪೭.೩೮ | ೧೪೦೫೮.೮೪ |

**ಕೋಷ್ಟಕ: ೮.೩೦** (ಮುಂದು.....)

| ಕ್ರ.ಸಂ | ವಲಯಗಳು | ೨೦೦೨-೦೩ | | ೨೦೦೩-೦೪ | | ೨೦೦೪-೦೫ | | ೨೦೦೫-೦೬ | | ೨೦೦೬-೦೭ | |
|---|---|---|---|---|---|---|---|---|---|---|---|
| | | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ |
| ೨೦ | ಸಹಕಾರ | ೦.೬೮ | ೦.೪೨ | ೦.೬೮ | – | – | – | ೧.೦೦ | ೦.೪೦ | ೨.೦೦ | ೦೦ |
| ೨೧ | ಸಣ್ಣ ನೀರಾವರಿ | – | – | – | – | – | – | – | – | – | – |
| ೨೨ | ಖಾದಿ ಮತ್ತು ಗ್ರಾಮಾಂತರ ಕೈಗಾರಿಕೆಗಳು | | | | | | | | | | |
| ೨೩ | ರೇಷ್ಮೆ | ೨೪೨.೯೩ | ೨೦೯.೦೦ | ೨೨೯.೫೫ | ೨೨೬.೧೨ | ೨೩೨.೭೩ | ೨೩೨.೨೪ | ೪೭೪.೩೭ | ೨೯೭.೩೭ | ೪೭೮.೩೦ | ೩೨೧.೨೪ |
| ೨೪ | ಕೈಮಗ್ಗ ಮತ್ತು ಜವಳಿ | | | | | | | | | | |
| ೨೫ | ರಸ್ತೆಗಳು ಮತ್ತು ಸೇತುವೆಗಳು | ೬೧೯.೧೧ | ೬೫೯.೬೬ | ೫೪೫.೩೬ | ೫೩೨.೬೨ | ೭೪೯.೫೩ | ೫೯೯.೨೯ | ೮೪೬.೮೬ | ೫೦೪.೮೯ | ೧೪೯೨.೪೩ | ೯೭೫.೫೪ |
| ೨೬ | ಸಚಿವಾಲಯ ಆರ್ಥಿಕ ಸೇವೆಗಳು | ೨೩.೦೬ | ೧೯.೪೦ | ೨೫.೪೩ | ೧೮.೨೩ | ೨೫.೦೪ | ೨೫.೫೯ | ೨೭.೦೫ | ೨೭.೯೪ | ೨೯.೮೨ | ೩೧.೬೪ |
| | ಒಟ್ಟು ಮೊತ್ತ | ೨೭೯೬೯.೧೩ | ೨೬೩೦೨.೦೯ | ೧೩೮೮೬.೧೨ | ೧೧೧೯೧.೮೧ | ೪೨೧೮೮.೬೪ | ೩೧೬೨೩.೯೫ | ೨೭೪೬೧.೭೪ | ೨೯೮೯೯.೭೭ | ೩೦೯೦೭.೪೬ | ೨೯೦೯೩.೦೭ |

**ಆಧಾರ: ಜಿಲ್ಲಾ ಪಂಚಾಯತ್, ತುಮಕೂರು.**

ಯೋಜನೆಯ ಅಂತಿಮ ವರ್ಷದಲ್ಲಿ ಕುಟುಂಬ ಕಲ್ಯಾಣ, ಔಷಧಿ ಪೂರೈಕೆ ಮತ್ತು ಪಲ್ಸ್ ಪೋಲಿಯೋ ಕಾರ್ಯಕ್ರಮದಡಿಯಲ್ಲಿ ಐದು ವರ್ಷದೊಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕೆಗಳನ್ನು ಹಾಕಲು ರೂ. ೧.೨೦ ಲಕ್ಷ ವೆಚ್ಚ, ಗ್ರಾಮಾಂತರ ಕುಟುಂಬ ಕಲ್ಯಾಣ ಉಪಕೇಂದ್ರಗಳಿಗಾಗಿ ರೂ. ೪೩೮.೯೭ ಲಕ್ಷ, ಹನಿನೀರಾವರಿ ಯೋಜನೆಗಾಗಿ ರೂ. ೬೦ ಲಕ್ಷ ವೆಚ್ಚ ಹಾಗೂ ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ರೂ. ೩.೦೨೫ ಲಕ್ಷ ವೆಚ್ಚ ಮಾಡಲಾಗಿದೆ. ತೋಟಗಾರಿಕೆ ಉತ್ಪನ್ನಗಳನ್ನು ಶೇಖರಿಸುತ್ತಿರುವ ಶೀತಲ ಗೃಹಗಳಲ್ಲಿ ಬಳಕೆಯಾದ ವಿದ್ಯುತ್‌ನ ಪ್ರತಿ ಯೂನಿಟ್‌ಗೆ ರೂ. ಒಂದರಂತೆ ಸಹಾಯಧನ ನೀಡಬೇಕಾಗಿದ್ದು, ಗಾಯತ್ರಿ ಕೋಲ್ಡ್ ಸ್ಟೋರೇಜ್, ತುಮಕೂರು ಇವರಿಗೆ ರೂ. ೦.೪೯೫ ಲಕ್ಷ ಸಹಾಯಧನವನ್ನಾಗಿ ನೀಡಲಾಗಿದೆ.

ಜಿಲ್ಲೆಯು ೧೬೯೧ ನೀರಾವರಿ ಕೆರೆಗಳನ್ನು ಹೊಂದಿ ರಾಜ್ಯದಲ್ಲಿ ದ್ವಿತೀಯ ಸ್ಥಾನ ಪಡೆದುಕೊಂಡಿದೆ. ಅಲ್ಲದೆ ಹೇಮಾವತಿ ನೀರಿನ ಪೂರೈಕೆಯಿಂದ ಮೀನುಗಾರಿಕೆಗೆ ವಿಪುಲ ಅವಕಾಶ ಸಿಕ್ಕಂತಾಗಿದೆ. ೪೦ ಹೆಕ್ಟೇರುಗಳಿಗಿಂತ ಕಡಿಮೆ ಅಚ್ಚುಕಟ್ಟುವುಳ್ಳ ಕೆರೆಗಳನ್ನು ಆಯಾ ಗ್ರಾಮ ಪಂಚಾಯತಿ ವತಿಯಿಂದಲೇ ನಿರ್ವಹಿಸಲಾಗುತ್ತಿದ್ದು, ಅಂತಹ ಕೆರೆಗಳಿಂದ ಬರುವಂತಹ ಆದಾಯವನ್ನು ಗ್ರಾಮ ಪಂಚಾಯತಿಗಳ ಅಭಿವೃದ್ದಿಗೆ ವಿನಿಯೋಗಿಸಿಕೊಳ್ಳುವುದರ ಜೊತೆಗೆ ಇತರೆ ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಲಾಗುವುದು. ಮೀನುಮರಿ ಉತ್ಪಾದನೆ, ಪಾಲನೆ ಹಾಗೂ ವಿತರಣೆ ಯೋಜನೆಯಡಿ ೧೮.೪೭ ಲಕ್ಷ ಬಿತ್ತನೆ ಮರಿ ಉತ್ಪಾದನಾಗುರಿ ಪೂರೈಸಿದೆ. ಇದಕ್ಕಾಗಿ ರೂ. ನಾಲ್ಕು ಲಕ್ಷ ವೆಚ್ಚ ಮಾಡಲಾಗಿದೆ. ಬಾವಿ ಮತ್ತು ಹೊಂಡಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗೆ ಸಹಾಯವಾಗಿ ಪ್ರತಿ ಬಾವಿ ಕೊಳಕ್ಕೆ ೨೫೦ ಬಿತ್ತನೆ ಮರಿಯಂತೆ ಒಟ್ಟು ೧,೦೬೯ ಫಲಾನುಭವಿಗಳಿಗೆ ಒಟ್ಟು ೫,೭೦,೪೫೦ ಸಾಮಾನ್ಯ ಗೆಂಡೆ ಬಿತ್ತನೆ ಮರಿಗಳನ್ನು ವಿತರಿಸಲಾಗಿದ್ದು, ಇದಕ್ಕಾಗಿ ರೂ. ಒಂದು ಲಕ್ಷ ವೆಚ್ಚ ಮಾಡಲಾಗಿದೆ.

ಮೀನು ಮಾರುಕಟ್ಟೆ ಮತ್ತು ಮತ್ಸ್ಯ ವಾಹಿನಿಗೆ ಸಹಾಯ ಯೋಜನೆಯಡಿ ಮೀನು ಹಿಡಿದು ಮಾರಾಟ ಮಾಡುವ ಮೀನುಗಾರರಿಗೆ ಅವರು ಹಿಡಿದ ಮೀನು ಕೆಡದಂತೆ ತ್ವರಿತವಾಗಿ ಮೀನು ಮಾರಾಟ ಮಾಡಲು ಬೈಸಿಕಲ್ ಹಾಗು ಶಾಖ ನಿರೋಧಕ ಪೆಟ್ಟಿಗೆ ಒದಗಿಸಲು ರೂ. ೦.೫೦ ಲಕ್ಷ ವೆಚ್ಚ ಮಾಡಿದ್ದು, ೪೦ ಜನ ಮೀನುಗಾರರು ಇದರಿಂದ ಪ್ರಯೋಜನ ಪಡೆದಿದ್ದಾರೆ. ಅಲ್ಲದೆ ಇಲಾಖಾ ವತಿಯಿಂದ ಕನ್ನಡ ರಾಜ್ಯೋತ್ಸವದಲ್ಲಿ ಸ್ತಬ್ಧ ಚಿತ್ರ ರೂಪಿಸಿ ಭಾಗವಹಿಸಿದೆ ಹಾಗೂ ಪಟ್ಟನಾಯಕನಹಳ್ಳಿ ಹಾಗೂ ಸಿದ್ದಗಂಗಾ ಕೃಷಿ ಕೈಗಾರಿಕಾ ವಸ್ತು ಪ್ರದರ್ಶನದಲ್ಲಿ ಮಳಿಗೆ ಸ್ಥಾಪಿಸಿ ಸಾರ್ವಜನಿಕರಿಗೆ ಮಾಹಿತಿ ನೀಡಲಾಗಿದೆ. ಇದಕ್ಕಾಗಿ ರೂ. ೧.೫೦ ಲಕ್ಷ ವೆಚ್ಚ ಮಾಡಲಾಗಿದೆ, ಸ್ವಂತ ಜಮೀನಿನಲ್ಲಿ ಮೀನುಕೃಷಿ ಕೊಳ ನಿರ್ಮಿಸಲು ಮೀನು ಕೃಷಿಕರಿಗೆ ತಾಂತ್ರಿಕ ನೆರವಿನ ಜೊತೆಗೆ ಸಹಾಯಧನ ನೀಡಿ ಪ್ರೋತ್ಸಾಹಿಸಲಾಗಿದೆ. ಇದಕ್ಕಾಗಿ ೨೦೦೬-೦೭ರಲ್ಲಿ ೬೩ ಜನರಿಗೆ ತರಬೇತಿ ನೀಡಿ, ರೂ. ೧೧.೮೩ ಲಕ್ಷ ವೆಚ್ಚ ಮಾಡಲಾಗಿದೆ. ವಿಶೇಷ ಘಟಕ ಯೋಜನೆಯಡಿಯಲ್ಲಿ ತಾಲೂಕು ಪಂಚಾಯತಿ ನಿಧಿಯಡಿ ಜಿಲ್ಲೆಯಲ್ಲಿ ೬೨ ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ತಲಾ ರೂ. ೩೦೦೦ ವೆಚ್ಚದಲ್ಲಿ ಮೀನು ಹಿಡಿಯುವ ಬಲೆಗಳನ್ನು ಶೇ.೧೦೦ ರ ಸಹಾಯಧನವಾಗಿ ವಿತರಿಸಲಾಯಿತು. ಇದಕ್ಕಾಗಿ ರೂ. ೧.೮೬೨ ಲಕ್ಷ ವೆಚ್ಚ ಮಾಡಲಾಗಿದೆ. ರಾಜ್ಯ ವಲಯ ಯೋಜನೆಯಲ್ಲಿ ಮತ್ಸ್ಯ ಮಹಿಳಾ ಸ್ವಾವಲಂಬನಾ ಯೋಜನೆಯಡಿಯಲ್ಲಿ ಮೀನುಗಾರರ ಸಹಕಾರ ಸಂಘದ ಮಹಿಳಾ ಸದಸ್ಯರಿಗೆ ಸುತ್ತುನಿಧಿಯಾಗಿ ೧೧ ಮೀನುಗಾರರ ಸಹಕಾರ ಸಂಘಗಳಿಗೆ ರೂ. ೧.೨೦ ಲಕ್ಷ ನೀಡಿದೆ. ಸದರಿ ಮೊತ್ತವನ್ನು ಮಹಿಳಾ ಸದಸ್ಯರಿಗೆ ಮೀನುಗಾರಿಕೆ ಚಟುವಟಿಕೆಗೆ ಬಂಡವಾಳವಾಗಿ ನೀಡಿ ಅವರ ಆರ್ಥಿಕ ಮಟ್ಟ ಹೆಚ್ಚಿಸಲು ಸಹಕಾರಿಯಾಗಿದೆ.

ಯುವಜನಸೇವಾ ಮತ್ತು ಕ್ರೀಡಾ ಇಲಾಖೆಯು ಕ್ರೀಡಾ ತರಬೇತಿ ಶಿಬಿರಗಳನ್ನು ತಾಲೂಕು ಮಟ್ಟದಿಂದ ರಾಜ್ಯ ಮಟ್ಟದವರೆಗೂ ಹಮ್ಮಿಕೊಂಡು ಕಾರ್ಯಗತಗೊಳಿಸುತ್ತದೆ. ಅಲ್ಲದೆ ಗ್ರಾಮೀಣ ಕ್ರೀಡಾ ಕೂಟಗಳು, ದಸರಾ ಕ್ರೀಡಾ ಕೂಟ, ಮಹಿಳಾ ಕ್ರೀಡಾ ಕೂಟ, ಯುವಜನ ಮೇಳಗಳು ಮತ್ತು ಯುವಜನೋತ್ಸವ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯುವಜನರನ್ನು ಪ್ರೋತ್ಸಾಹಿಸುತ್ತಿದೆ. ಇದಕ್ಕಾಗಿ ರೂ. ೧೩.೩೫ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

## ಹನ್ನೊಂದನೇಯ ಪಂಚವಾರ್ಷಿಕ ಯೋಜನೆ (೨೦೦೭-೧೨)

ಹನ್ನೊಂದನೇಯ ಪಂಚವಾರ್ಷಿಕ ಯೋಜನೆಯು ೨೦೦೭-೦೮ ರಿಂದ ಆರಂಭಗೊಂಡಿದ್ದು, ಜಿಲ್ಲೆಯ ಅಭಿವೃದ್ದಿಗೆ ಆದ ವಲಯವಾರು ವೆಚ್ಚವನ್ನು ಕೋಷ್ಟಕ ೮.೩೧ ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೩೧ ಹನ್ನೊಂದನೇಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ವಲಯವಾರು (೨೦೦೭-೨೦೧೨) ಮಾಡಿದ ವೆಚ್ಚದ ವಿವರ**

| ಕ್ರ.ಸಂ | ವಲಯಗಳು | ೨೦೦೭-೦೮ | | ೨೦೦೮-೦೯ | | ೨೦೦೯-೧೦ | | ೨೦೧೦-೧೧ | | ೨೦೧೧-೧೨ | |
|---|---|---|---|---|---|---|---|---|---|---|---|
| | | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ |
| ೧ | ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ | ೩೭೨೩.೦೪ | ೩೫೫೫.೩೩ | ೮೯೧೩.೭೧ | ೭೬೬೩.೪೧ | ೯೦೮೬.೪೪ | ೯೦೮೧.೬೮ | ೧೧೦೧೫.೧೬ | ೧೦೬೧೪.೯೧ | ೧೨೧೨೦.೮೬ | ೧೧೪೫೩.೪೫ |
| ೨ | ವಯಸ್ಕರ ಶಿಕ್ಷಣ | ೧೧.೭೪ | ೧೦.೧೦ | ೨೦.೦೫ | ೧೯.೭೪ | ೨೦.೦೫ | ೧೯.೮೧ | ೧೫.೭೬ | ೧೫.೭೦ | ೧೬.೫೯ | ೧೩.೭೦ |
| ೩ | ಯುವಜನಸೇವೆ ಮತ್ತು ಕ್ರೀಡೆ | ೩೩.೮೩ | ೩೧.೮೯ | ೩೮.೭೪ | ೩೩.೫೫ | ೪೫.೧೫ | ೪೩.೪೮ | ೫೬.೩೮ | ೪೯.೭೯ | ೬೯.೯೪ | ೬೯.೦೦ |
| ೪ | ಗ್ರಾಮೀಣ ಆರೋಗ್ಯ | ೮೩೯.೦೪ | ೫೭೪.೫೪ | ೮೪೩.೦೮ | ೬೬೯.೫೨ | ೯೭೧.೬೨ | ೭೩೬.೮೮ | ೧೦೯೨.೮೬ | ೮೯೬.೪೪ | ೧೩೫೮.೮೮ | ೧೧೬೪.೯೦ |
| ೫ | ಭಾರತೀಯ ವೈದ್ಯ ಪದ್ಧತಿ | – | – | ೬೫.೭೫ | ೬೪.೫೦ | ೬೫.೨೫ | ೬೪.೭೫ | ೯೩.೮೪ | ೮೯.೭೦ | ೯೭.೦೭ | ೯೬.೧೦ |
| ೬ | ಕುಟುಂಬ ಕಲ್ಯಾಣ ಕಾರ್ಯಕ್ರಮಗಳು | ೪೦೬.೧೨ | ೩೬೭.೧೭ | ೫೬೭.೩೧ | ೪೭೧.೪೭ | ೫೯೩.೯೮ | ೫೨೩.೫೩ | ೬೩೨.೫೧ | ೫೫೬.೧೧ | ೭೦೪.೭೯ | ೬೨೪.೬೬ |
| ೭ | ಗ್ರಾಮೀಣ ನೀರು ಪೂರೈಕೆ | ೧೯೭೧.೩೮ | ೧೯೭೧.೩೮ | ೧೫೩೪.೦೦ | ೧೨೭೯.೯೮ | ೧೭೩೯.೭೭ | ೧೫೯೦.೫೦ | ೧೬೪೭.೨೯ | ೧೩೭೯.೨೦ | ೭೨೩.೫೬ | ೭೨೩.೫೬ |
| ೮ | ಸಮಾಜ ಕಲ್ಯಾಣ/ಹರಿಜನ ಕಲ್ಯಾಣ | ೧೦೯೧.೩೬ | ೯೮೯.೩೩ | ೧೨೬೫.೦೯ | ೧೧೯೮.೬೭ | ೧೨೯೯.೯೬ | ೧೦೬೦.೧೧ | ೧೭೧೦.೩೩ | ೧೨೬೫.೬೪ | ೧೨೫೨.೫೬ | ೧೧೯೭.೫೨ |
| ೯ | ಹಿಂದುಳಿದ ವರ್ಗಗಳ ಕಲ್ಯಾಣ/ ಅಲ್ಪಸಂಖ್ಯಾತರ ಕಲ್ಯಾಣ | ೩೧೦.೯೬ | ೨೩೦.೪೮ | ೩೮೯.೫೨ | ೩೧೬.೭೦ | ೪೯೯.೧೫ | ೪೫೭.೮೭ | ೫೫೧.೮೪ | ೪೬೬.೫೨ | ೫೨೫.೮೨ | ೪೯೯.೫೧ |
| ೧೦ | ಪರಿಶಿಷ್ಟ ವರ್ಗಗಳ ಕಲ್ಯಾಣ | ೫೭೭.೫೮ | ೩೦೬.೬೯ | ೫೧೩.೪೮ | ೩೪೪.೯೭ | ೬೭೨.೩೫ | ೪೪೧.೯೧ | ೬೬೯.೦೩ | ೫೧೩.೨೩ | ೫೯೫.೯೧ | ೫೧೬.೩೫ |
| ೧೧ | ಹರಿಜನರಿಗಾಗಿ ವಿಶೇಷ ಘಟಕ ಯೋಜನೆ | ೮೫.೦೦ | ೭೦.೦೦ | ೮೬.೧೪ | ೭೨.೦೦ | ೮೬.೧೪ | ೮೧.೦೦ | ೮೬.೧೪ | ೮೨.೧೦ | ೮೭.೦೩ | ೮೩.೦೦ |
| ೧೨ | ಗಿರಿಜನ ಉಪ ಯೋಜನೆ | ೬೭.೪೦ | ೫೮.೦೦ | ೬೪.೧೦ | ೬೨.೦೦ | ೬೪.೦೦ | ೬೧.೦೦ | ೬೪.೦೦ | ೬೨.೦೦ | ೬೪.೦೦ | ೬೧.೦೦ |
| ೧೩ | ಮಹಿಳಾ ಮತ್ತು ಮಕ್ಕಳ ಕಲ್ಯಾಣ | ೭೨೨.೨೪ | ೬೩೨.೭೦ | ೯೪೮.೭೪ | ೬೫೮.೫೧ | ೧೦೦೫.೧೧ | ೭೮೮.೫೩ | ೯೬೪.೨೫ | ೯೨೫.೭೨ | ೧೪೪೯.೧೦ | ೧೩೫೯.೨೩ |
| ೧೪ | ಪೌಷ್ಟಿಕ ಆಹಾರ | ೫೯೫.೯೯ | ೪೪೪.೪೯ | ೬೧೪.೮೪ | ೫೫೪.೬೦ | ೧೨೬೯.೯೨ | ೧೧೦೬.೬೫ | ೧೨೬೬.೧೦ | ೧೧೭೯.೭೮ | ೧೨೨೭.೭೫ | ೧೦೯೭.೨೨ |
| ೧೫ | ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ | ೧.೯೬ | ೧.೮೬ | ೧.೯೯ | ೧.೯೫ | ೧.೯೯ | ೧.೯೬ | ೧.೯೯ | ೧.೯೫ | ೧.೯೯ | ೧.೯೫ |
| ೧೬ | ಕೃಷಿ | ೩೮೯.೮೩ | ೨೭೫.೦೭ | ೩೧೮.೫೨ | ೨೯೦.೦೫ | ೩೪೭.೬೫ | ೩೪೫.೧೩ | ೩೪೧.೫೪ | ೩೩೦.೫೮ | ೨೬೧.೦೯ | ೨೨೫.೬೧ |
| ೧೭ | ಜಲಾನಯನ ಅಭಿವೃದ್ಧಿ | ೮೩.೭೧ | ೧೬೧.೧೩ | ೧೦೫.೦೫ | ೮೪.೦೯ | ೯೬.೩೧ | ೯೦.೭೭ | ೧೪೪.೯೭ | ೧೧೯.೫೭ | ೧೫೮.೭೨ | ೧೦೧.೧೮ |
| ೧೮ | ತೋಟಗಾರಿಕೆ | ೧೮೫.೫೪ | ೧೭೮.೮೦ | ೧೪೧.೫೨ | ೧೩೬.೬೪ | ೧೫೭.೪೩ | ೧೫೬.೮೫ | ೧೬೨.೯೮ | ೧೬೨.೯೭ | ೧೮೩.೬೨ | ೧೭೨.೦೦ |
| ೧೯ | ಪಶು ಸಂಗೋಪನೆ | ೩೫೭.೧೦ | ೩೪೩.೮೩ | ೪೮೭.೩೭ | ೪೬೪.೮೮ | ೫೫೨.೩೯ | ೪೭೬.೮೩ | ೪೯೩.೩೫ | ೪೭೧.೨೭ | ೬೨೮.೦೫ | ೫೯೯.೮೮ |
| ೨೦ | ಮೀನುಗಾರಿಕೆ | ೧೪.೧೮ | ೧೩.೫೭ | ೧೨.೧೧ | ೧೦.೦೧ | ೧೫.೩೦ | ೧೪.೧೨ | ೧೮.೧೪ | ೧೭.೬೩ | ೨೬.೩೪ | ೨೨.೬೨ |
| ೨೧ | ಅರಣ್ಯ ಮತ್ತು ವನ್ಯಜೀವನ | ೮೩.೬೩ | ೭೫.೭೮ | ೧೪೩.೨೧ | ೧೩೬.೬೧ | ೧೫೬.೧೦ | ೧೫೧.೬೫ | ೧೬೪.೬೫ | ೧೬೦.೨೬ | ೧೮೦.೦೮ | ೧೭೮.೨೦ |
| ೨೨ | ಸಹಕಾರ ಮತ್ತು ಇತರೆ | ೯.೭೪ | ೯.೦೪ | ೧೩.೬೯ | ೧೩.೧೮ | ೧೩.೮೧ | ೧೩.೦೦ | ೧೩.೮೧ | ೧೨.೮೧ | ೧೩.೮೧ | ೯.೦೦ |

**ಕೋಷ್ಟಕ: ೮.೩೧** (ಮುಂದು.....)

| ಕ್ರ.ಸಂ | ವಲಯಗಳು | ೨೦೦೭–೦೮ | | ೨೦೦೮–೦೯ | | ೨೦೦೯–೧೦ | | ೨೦೧೦–೧೧ | | ೨೦೧೧–೧೨ | |
|---|---|---|---|---|---|---|---|---|---|---|---|
| | | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ | ಅನು | ವೆಚ್ಚ |
| ೨೩ | ಕಾರ್ಮಿಕ ಉದ್ಯೋಗ/ಗ್ರಾಮೀಣ ಅಭಿವೃದ್ಧಿ/ಪಂಚಾಯತ್ ರಾಜ್ ಕಾರ್ಯಕ್ರಮ | ೩೮೭.೯೦ | ೩೮೭.೯೦ | – | – | – | – | – | – | – | – |
| ೨೪ | ಗ್ರಾಮೀಣ ಇಂಧನ | – | – | – | – | – | – | – | – | – | – |
| ೨೫ | ಗ್ರಾಮೀಣ ಉದ್ಯೋಗ | ೪೨.೭೩ | ೪೨.೭೩ | – | – | – | – | – | – | – | – |
| ೨೬ | ಇತರೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ | ೪೧೦.೫೭ | ೩೮೪.೩೮ | ೪೯೭.೭೫ | ೪೭೯.೭೩ | ೪೪೯.೩೯ | ೪೪೬.೩೯ | ೭೨೩.೦೨ | ೭೨೦.೬೬ | ೯೯೭.೯೯ | ೯೮೫.೭೮ |
| ೨೭ | ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅನುದಾನ | ೨೫.೦೦ | ೨೫.೦೦ | ೩೦.೦೦ | ೩೩.೪೦ | ೫೦.೦೦ | ೫೦.೦೦ | ೩೦.೦೦ | ೩೦.೦೦ | ೧೪೦.೦೦ | ೧೪೦.೦೦ |
| ೨೮ | ಸಣ್ಣ ನೀರಾವರಿ | ೩೬.೬೧ | ೩೨.೧೩ | ೧೬೧.೦೧ | ೯೦.೬೮ | ೯೪.೬೮ | ೬೫.೭೦ | ೧೩೩.೭೦ | ೭೬.೩೮ | ೫೯೦.೦೭ | ೪೮೫.೦೦ |
| ೨೯ | ಗ್ರಾಮೋದ್ಯಮ ಮತ್ತು ಸಣ್ಣ ಪುಟ್ಟ ಉದ್ಯಮ | ೨೨.೬೦ | ೧೭.೨೨ | ೨೮.೪೫ | ೨೩.೪೪ | ೨೯.೯೭ | ೨೮.೫೯ | ೩೪.೦೯ | ೩೨.೩೨ | ೩೨.೯೭ | ೨೧.೨೮ |
| ೩೦ | ರೇಷ್ಮೆ ಉದ್ಯಮ | ೪೧೩.೧೭ | ೩೨೭.೬೭ | ೩೮೯.೧೬ | ೩೭೨.೬೮ | ೩೯೫.೩೨ | ೩೭೮.೪೪ | ೪೩೮.೫೨ | ೩೮೪.೪೦ | ೪೫೦.೨೮ | ೪೧೦.೦೪ |
| ೩೧ | ರಸ್ತೆ ಮತ್ತು ಸೇತುವೆಗಳು | ೬೫೧.೦೦ | ೪೩೦.೧೩ | ೯೦೯.೯೩ | ೭೩೦.೯೫ | ೧೦೧೧.೯೪ | ೮೯೬.೦೦ | ೧೧೨೫.೮೬ | ೯೩೦.೨೪ | ೧೧೨೪.೦೧ | ೭೨೧.೮೧ |
| ೩೨ | ಸಚಿವಾಲಯ ಆರ್ಥಿಕ ಸೇವೆಗಳು (ಜಿ.ಯೋ.ಫ) | ೨೧.೯೪ | ೧೭.೯೨ | ೩೧.೬೬ | ೨೮.೩೬ | ೩೦.೪೨ | ೨೨.೫೧ | ೪೧.೫೯ | ೩೯.೨೬ | ೩೧.೫೫ | ೨೫.೪೭ |
| ೩೩ | ಕೈಮಗ್ಗ ಮತ್ತು ಜವಳಿ | ೧೧.೯೪ | ೧೦.೨೩ | ೧೨.೬೬ | ೧೧.೦೩ | ೧೩.೫೫ | ೧೩.೨೭ | ೧೯.೮೩ | ೧೭.೪೩ | ೧೮.೫೪ | ೧೫.೨೯ |
| ೩೪ | ಕಲೆ, ಸಂಸ್ಕೃತಿ ಮತ್ತು ಗ್ರಂಥಾಲಯ | ೨೬.೬೮ | ೨೬.೬೮ | ೩೪.೭೮ | ೩೪.೭೮ | ೪೨.೭೮ | ೪೨.೭೮ | ೨.೦೦ | – | ೨.೦೦ | – |
| ೩೫ | ವಸತಿ | – | – | ೭.೫೦ | ೭.೫೦ | ೭.೫೦ | ೭.೫೦ | ೭.೫೦ | ೪.೦೦ | ೧೦.೦೦ | ೫.೫೦ |
| ೩೬ | ಉದ್ಯೋಗ ಮತ್ತು ತರಬೇತಿ | ೧.೧೦ | ೧.೧೦ | – | – | ೧.೦೦ | ೧.೦೦ | – | – | ೫.೦೦ | ೩.೫೧ |
| **ಒಟ್ಟು ಮೊತ್ತ** | | – | ೧೨೦೦೪.೨೭ | ೧೯೧೯೦.೯೧ | ೧೬೩೬೦.೫೮ | ೨೦೮೮೬.೪೨ | ೧೯೨೬೦.೧೯ | ೨೩೭೬೩.೦೩ | ೨೧೬೦೮.೫೭ | ೨೫೧೪೯.೯೭ | ೨೩೦೮೩.೩೨ |

**ಆಧಾರ: ಜಿಲ್ಲಾ ಪಂಚಾಯತ್, ತುಮಕೂರು**

## ಬಡತನ ನಿರ್ಮೂಲನೆ

ಬಡತನ ಒಂದು ಸಾಪೇಕ್ಷ ಅಂಶವಾಗಿದ್ದು, ಅದನ್ನು ಭೌತಿಕ ಅಂಶಗಳ ಆಧಾರದ ಮೇಲೆ ವ್ಯಕ್ತಪಡಿಸಲಾಗುತ್ತದೆ. ವಿಶ್ವ ಆಹಾರ ಮತ್ತು ಕೃಷಿ ಸಂಘಟನೆಯ ಮೊದಲ ಮಹಾನಿರ್ದೇಶಕ ಲಾರ್ಡ್ ಬಾಯಿಡಾರ್ ಅವರು ೧೯೪೫ರಲ್ಲಿ ಮೊದಲ ಬಾರಿಗೆ ಬಡತನದ ರೇಖೆಯನ್ನು ವ್ಯಾಖ್ಯಾನಿಸುತ್ತಾ, ಒಬ್ಬ ವ್ಯಕ್ತಿ ಒಂದು ದಿನಕ್ಕೆ ೨೩೦೦ ಕ್ಕಿಂತಲೂ ಕಡಿಮೆ ಕ್ಯಾಲರಿ ಆಹಾರವನ್ನು ಸೇವಿಸುತ್ತಿದ್ದರೆ ಆತ ಬಡತನದ ರೇಖೆಗಿಂತಲೂ (ಬಿ.ಪಿ.ಎಲ್.) ಕೆಳಗಿದ್ದಾನೆಂದು ಪರಿಗಣಿಸಬೇಕಾಗುತ್ತದೆ ಎಂದು ತಿಳಿಸಿರುವರು. ಭಾರತದ ಯೋಜನಾ ಆಯೋಗದ ಮೇರೆಗೆ ದಿನವೊಂದಕ್ಕೆ ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಠ ೨೪೦೦ ಕ್ಯಾಲರಿ ಮತ್ತು ಪಟ್ಟಣ ಪ್ರದೇಶಗಳಲ್ಲಿ ೨೧೦೦ ಕ್ಯಾಲರಿಗಿಂತಲೂ ಕಡಿಮೆ ಆಹಾರ ಸೇವಿಸುತ್ತಿದ್ದರೆ, ಅಂತಹವರನ್ನು ಬಡತನ ರೇಖೆಗಿಂತಲೂ ಕೆಳಗಿರುವವರು ಎಂದಿದೆ.

ಮಿತಿಮೀರಿ ವೃದ್ಧಿಯಾಗುತ್ತಿರುವ ಜನಸಂಖ್ಯೆ, ಆದಾಯದ ಅಸಮಾನತೆ, ಕಡಿಮೆ ತಲಾದಾಯ, ನಿರುದ್ಯೋಗ, ಕನಿಷ್ಠ ಅನುಭೋಗ ವೆಚ್ಚ, ಪ್ರಾದೇಶಿಕ ಅಸಮತೋಲನ, ಹಿಂದುಳಿದ ತಂತ್ರಜ್ಞಾನ ಮತ್ತು ಬಂಡವಾಳದ ಕೊರತೆ ಮುಂತಾದ ಸಾಮಾಜಿಕ ಮತ್ತು ರಾಜಕೀಯ ಅಂಶಗಳು ಬಡತನಕ್ಕೆ ಕಾರಣಗಳಾಗಿವೆ. ಅದರಲ್ಲೂ ಐದನೇ ಪಂಚವಾರ್ಷಿಕ ಯೋಜನೆಯಿಂದೀಚೆಗೆ ಬಡತನ ನಿರ್ಮೂಲನೆಯನ್ನು ಆರ್ಥಿಕ ಯೋಜನೆಯ ಒಂದು ಪ್ರಮುಖ ಧ್ಯೇಯವಾಗಿ ಅಳವಡಿಸಿಕೊಳ್ಳಲಾಗಿದೆ.

೧೯೭೦ರ ದಶಕದಲ್ಲಿ ಪ್ರಥಮವಾಗಿ ಬಡಜನರ ಅನುಕೂಲಕ್ಕಾಗಿ ಅನೇಕ ವಿಶೇಷ ಯೋಜನೆಗಳನ್ನು ಜಾರಿಗೆ ತರಲಾಯಿತು. ಆದರೆ ಅವು ಅಷ್ಟೊಂದು ಪರಿಣಾಮಕಾರಿಯಾಗಿರಲಿಲ್ಲ ಮತ್ತು ವ್ಯಾಪಕವಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಬಡತನದ ಮೇಲೆ ನೇರ ಆಕ್ರಮಣ ಮಾಡುವಂತಹ ವ್ಯಾಪಕ ಕಾರ್ಯಕ್ರಮಗಳೊಂದಿಗೆ ಕನಿಷ್ಠ ಅವಶ್ಯಕತೆ ಕಾರ್ಯಕ್ರಮ (ಎಂಎನ್‌ಪಿ), ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ (ಐಆರ್‌ಡಿಪಿ), ಗ್ರಾಮೀಣ ಭೂ–ರಹಿತ ಉದ್ಯೋಗ ದೃಢೀಕರಣ ಯೋಜನೆ (ಆರ್‌ಎಲ್‌ಜಿಇಪಿ), ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ (ಎನ್‌ಆರ್‌ಇಪಿ), ಜವಾಹರ್‌ಲಾಲ್ ನೆಹರು ರೋಜ್‌ಗಾರ್ ಯೋಜನೆ(ಜೆಆರ್‌ವೈ) ಮತ್ತು ಗ್ರಾಮೀಣ ಯುವಕರಿಗೆ ಸ್ವ–ಉದ್ಯೋಗ ತರಬೇತಿ ಯೋಜನೆ(ಟ್ರೈಸಂ), ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ, ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ, ಇಂದಿರಾ ಆವಾಸ್ ಯೋಜನೆ, ಅಂಬೇಡ್ಕರ್ ವಸತಿ ಯೋಜನೆ, ನವಗ್ರಾಮ ಯೋಜನೆ, ನಿರ್ಮಲ ಗ್ರಾಮ ಯೋಜನೆ, ಸ್ವಚ್ಛ ಗ್ರಾಮ ಯೋಜನೆ, ರಾಷ್ಟ್ರೀಯ ಸುಧಾರಿತ ಒಲೆ ಕಾರ್ಯಕ್ರಮ, ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ, ಸುವರ್ಣ ಗ್ರಾಮ ಯೋಜನೆ, ಯಶಸ್ವಿನಿ, ಅಕ್ಷರದಾಸೋಹ, ಅನ್ನಭಾಗ್ಯ, ಮನಸ್ವಿನಿ, ಭಾಗ್ಯಲಕ್ಷ್ಮಿ ಮೊದಲಾದ ಹತ್ತು ಹಲವು ಯೋಜನೆಗಳನ್ನು ಜಾರಿಗೆ ತರಲಾಯಿತು.

ತುಮಕೂರು ಜಿಲ್ಲೆಯಲ್ಲಿ ಗ್ರಾಮೀಣ ಜನತೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮ ಪಡಿಸಲು ೨೦ ಅಂಶಗಳ ಕಾರ್ಯಕ್ರಮಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಈ ದಿಸೆಯಲ್ಲಿ ತುಮಕೂರು ಜಿಲ್ಲಾ ಪಂಚಾಯತಿ ವಿವಿಧ ಯೋಜನೆಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲು ಶ್ರಮವಹಿಸಿದೆ.

ಜಿಲ್ಲೆಯಲ್ಲಿ ೨೦೦೦–೨೦೦೧ರಲ್ಲಿ ಸ್ವರ್ಣಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಲ್ಲಿ ಪ್ರಯೋಜನ ಪಡೆದವರ ಸಂಖ್ಯೆ ೩೪೪ ಆಗಿದ್ದರೆ, ಜವಾಹಾರ್ ರೋಜ್‌ಗಾರ್ ಯೋಜನೆಯಲ್ಲಿ ೯.೭೦ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಗಿತ್ತು. ಕೊಳಾಯಿ ನೀರು ಸರಬರಾಜು ಯೋಜನೆಗಳ ಸಂಖ್ಯೆ ೫೬೧, ಆಶ್ರಯ ಯೋಜನೆಯಡಿಯಲ್ಲಿ ಕಟ್ಟಿದ ಮನೆಗಳಸಂಖ್ಯೆ ೮೨೯, ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆಯಡಿಯಲ್ಲಿ ನಗರ ಮಂಜೂರಿ ಉದ್ಯೋಗ ಯೋಜನೆಯಲ್ಲಿ ೩೫೨ ಕಾಮಗಾರಿಗಳು ಪೂರ್ಣಗೊಂಡಿದ್ದು, ಇದಕ್ಕಾಗಿ ರೂ. ೧೧೩.೭೮ ಲಕ್ಷ ವೆಚ್ಚವಾಗಿತ್ತು. ದ್ವಾಕ್ರಾ ಕಾರ್ಯಾಕ್ರಮದಲ್ಲಿ ೩೨ ಫಲಾನುಭವಿಗಳಿಗೆ ರೂ. ೧೮.೩೦ ಲಕ್ಷ ವೆಚ್ಚ ಮಾಡಲಾಯಿತು.

ಜಿಲ್ಲೆಯಲ್ಲಿ ೨೦೧೧–೧೨ರಲ್ಲಿ ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನೆಯಡಿ ೭೮೭ ಮಂದಿ ಸ್ವ ಉದ್ಯೋಗ (ಉದ್ದಿಮೆಗಳು ಮತ್ತು ತರಬೇತಿ) ಪಡೆದು, ೪,೬೦೨ ಮಾನವ ದಿನಗಳನ್ನು ಸೃಷ್ಟಿಸಲಾಯಿತು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿಯಲ್ಲಿ ನಿರ್ಮಿಸಿದ ಶೌಚಾಲಯಗಳಲ್ಲಿ ೩,೭೯,೧೧೭ ವೈಯಕ್ತಿಕ ಕೌಟುಂಬಿಕ

ಶೌಚಾಲಯಗಳು, ೩೪ ಸಮುದಾಯ ಶೌಚಾಲಯಗಳು, ೧,೮೨೧ ಶಾಲಾ ಶೌಚಾಲಯಗಳು ಹಾಗೂ ೧,೮೪೨ ಅಂಗನವಾಡಿ ಶೌಚಾಲಯಗಳಾಗಿದ್ದವು. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ೨,೬೮,೮೨೯ ಮಂದಿಗೆ ಕೆಲಸದ ಚೀಟಿಗಳನ್ನು ವಿತರಿಸಲಾಗಿದೆ. ೪೦,೮೧೮ ಕೆಲಸಕ್ಕಾಗಿ ಬೇಡಿಕೆ ಸಲ್ಲಿಸಿರುವ ಕುಟುಂಬಗಳಿದ್ದವು. ೪೦,೪೫೭ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯಡಿ ಕೆಲಸ ನಿರ್ವಹಿಸಿದ ವ್ಯಕ್ತಿ ಕುಟುಂಬಗಳ ಸಂಖ್ಯೆಯಾಗಿದೆ. ೧,೪೦೭ ಕುಟುಂಬಗಳು ೧೦೦ ದಿನಗಳ ಉದ್ಯೋಗವನ್ನು ಉಪಯೋಗಿಸಿಕೊಂಡ ಕುಟುಂಬಗಳಾಗಿವೆ. ೭೦,೬೧೨ ಮಂದಿ ಸಂಧ್ಯಾ ಸುರಕ್ಷ ಯೋಜನೆಯಡಿ ಪ್ರಯೋಜನ ಪಡೆದರೆ, ೧೭,೯೧೬ ಮಂದಿ ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಪಡೆದಿದ್ದರು. ೩೮,೯೭೩ ಮಂದಿಗೆ ವಿಧವಾ ವೇತನ, ೩೦,೦೮೩ ಮಂದಿಗೆ ಅಂಗವಿಕಲರ ವೇತನ, ೧೨,೩೭೭ ಮಂದಿ ರಾಷ್ಟ್ರೀಯ ಕುಟುಂಬ ನೆರವು, ೨೩,೦೮೪ ಮಂದಿ ಅಂತ್ಯ ಸಂಸ್ಕಾರದ ನೆರವು ಪಡೆದಿದ್ದಾರೆ. ೨೦೧೨ರ ಮಾರ್ಚ ಅಂತ್ಯದವರೆಗೆ ೧೦,೨೫೦ ಇಂದಿರಾ ಆವಾಸ್ ಯೋಜನೆಯ ಮನೆಗಳು, ೫೩೫ ಡಾ॥ಬಿ.ಆರ್.ಅಂಬೇಡ್ಕರ್ ವಸತಿ ಯೋಜನೆಯಡಿ ನಿರ್ಮಿಸಿದ ಮನೆಗಳಾಗಿದ್ದವು. ತುಮಕೂರು ಜಿಲ್ಲೆಯಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯು ಜಾರಿಗೆ ತಂದಿರುವ ಪ್ರದೇಶಾಭಿವೃದ್ಧಿ ಯೋಜನೆಯ (ಎಡಿಪಿ)ಕಾರ್ಯಕ್ರಮಗಳ ಸಂಕ್ಷಿಪ್ತ ವಿವರಗಳನ್ನು ಮುಂದೆ ನೀಡಲಾಗಿದೆ.

### ೧.ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ(ಎಸ್.ಜಿ.ಎಸ್.ವೈ)

ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ (ಐ.ಆರ್.ಡಿ.ಪಿ), ಗ್ರಾಮೀಣ ಯುವಕರಿಗೆ ಸ್ವಂತ ಉದ್ಯೋಗ ತರಬೇತಿ ಕಾರ್ಯಕ್ರಮ (ಟ್ರೈಸಂ), ಗ್ರಾಮೀಣ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ(ಡ್ವಾಕ್ರಾ), ಗಂಗಾಕಲ್ಯಾಣ, ಸುಧಾರಿತ ಉಪಕರಣಗಳ ಸರಬರಾಜು, ದಶಲಕ್ಷ ಬಾವಿಯೋಜನೆ ಮುಂತಾದ ಯೋಜನೆಗಳನ್ನು ವಿಲೀನಗೊಳಿಸಿ ಒಂದನೇ ಏಪ್ರಿಲ್ ೧೯೯೯ ರಿಂದ ಈ ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿತು. ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಪ್ರದೇಶದ ಬಡಜನರಿಗೆ ಸ್ವಯಂ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಟ್ಟು ಅವರ ಜೀವನ ಮಟ್ಟವನ್ನು ಉನ್ನತೀಕರಿಸಿ, ಅವರನ್ನು ಬಡತನ ರೇಖೆಯಿಂದ ಮೇಲೆ ತರುವುದು ಈ ಯೋಜನೆಯ ಮೂಲ ಉದ್ದೇಶವಾಗಿದೆ. ಇದಕ್ಕಾಗಿ ೨೦೧೧–೧೨ ರಲ್ಲಿ ರೂ. ೧೦೬೪.೯೪೩ ಲಕ್ಷಗಳನ್ನು ವೆಚ್ಚ ಮಾಡಿ ೬೭೯ ಸ್ವರೋಜ್‌ಗಾರ್ ಗುಂಪುಗಳಿಗೆ ಸಹಾಯಧನವನ್ನು, ೬೦೦ ಸ್ವರೋಜ್‌ಗಾರ್ ಗುಂಪುಗಳಿಗೆ ಸುತ್ತು ನಿಧಿಯನ್ನು, ೨೨೦ ಸ್ವರೋಜ್‌ಗಾರಿಗಳಿಗೆ ವೈಯಕ್ತಿಕವಾಗಿ ಸಹಾಯಧನ ನೀಡಲಾಗಿದೆ.

### ೨. ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ (ಎನ್.ಪಿ.ಡಿ.ಬಿ)

ಗ್ರಾಮೀಣ ಇಂಧನ ಕಾರ್ಯಕ್ರಮಗಳಲ್ಲಿ ಈ ಯೋಜನೆಯು ಮಹತ್ವ ಪಡೆದಿದ್ದು ಅಸಂಪ್ರದಾಯಿಕ ಇಂಧನ ಮೂಲಗಳ ಉಪಯೋಗವನ್ನು ಜನಪ್ರಿಯಗೊಳಿಸಲು ಅಡುಗೆಗಾಗಿ ಉಪಯೋಗಿಸಲಾಗುತ್ತಿರುವ ಸೌದೆ ಬಳಕೆಯ ನಿಯಂತ್ರಣ, ಅರಣ್ಯ ನಾಶ ಹಾಗೂ ಭೂ ಸವಕಳಿ ತಡೆಗಟ್ಟುವ ಉದ್ದೇಶಗಳೊಂದಿಗೆ ಈ ಯೋಜನೆಯನ್ನು ೧೯೮೨–೮೩ರಿಂದ ಜಾರಿಗೆ ತರಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಲಭ್ಯವಿರುವ ಜಾನುವಾರುಗಳ ಸಗಣಿಯನ್ನು ಉಪಯೋಗಿಸಿ ಅದರಿಂದ ಜೈವಿಕ ಅನಿಲ ಸ್ಥಾವರಗಳನ್ನು ವೈಜ್ಞಾನಿಕವಾಗಿ ನಿರ್ಮಿಸಿ ಗೃಹಬಳಕೆ ಅಡುಗೆ ಹಾಗೂ ದೀಪಕ್ಕೆ ಬೇಕಾಗುವ ಇಂಧನವನ್ನು ಉತ್ಪಾದಿಸಬಹುದು.

ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿಯಲ್ಲಿ ದೀನಬಂಧು ಜೈವಾನಿಲ ಸ್ಥಾವರ ಮತ್ತು ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳ ಕಮಿಷನ್(ಕೆ.ವಿ.ಐ.ಸಿ.) ಮಾದರಿ ಜೈವಾನಿಲ ಸ್ಥಾವರಗಳನ್ನು ಜಿಲ್ಲೆಯಲ್ಲಿ ನಿರ್ಮಿಸಲಾಗುತ್ತಿದ್ದು, ದೀನಬಂಧು ಜೈವಾನಿಲ ಸ್ಥಾವರದ ಘಟಕ ಬೆಲೆಯು ಕಡಿಮೆ ಇರುವುದರಿಂದ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸ್ಥಾವರಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ ಯೋಜನೆಯನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕನಿಷ್ಠ ನಾಲ್ಕರಿಂದ ಐದು ದನಕರುಗಳನ್ನು ಹೊಂದಿರುವ ಹಾಗೂ ಜೈವಾನಿಲ ಸ್ಥಾವರಗಳನ್ನು ನಿರ್ಮಿಸಲು ಸ್ಥಳಾವಕಾಶ ಇರುವ ಆಯ್ದ ಫಲಾನುಭವಿಗಳನ್ನು ಗುರುತಿಸಲಾಗುತ್ತದೆ. ಪ್ರತಿ ಘಟಕಕ್ಕೆ ಸುಮಾರು ರೂ. ೧೮,೦೦೦ಗಳಿಂದ ರೂ. ೨೦,೦೦೦ಗಳ ವರೆಗೆ ವೆಚ್ಚವಾಗಲಿದ್ದು, ಇದಕ್ಕಾಗಿ ಪ್ರತಿ

ಘಟಕಕ್ಕೆ ಕೇಂದ್ರ ಸರ್ಕಾರ ರೂ. ೮,೦೦೦ಗಳನ್ನು ಹಾಗೂ ರಾಜ್ಯ ಸರ್ಕಾರ ರೂ. ೩,೫೦೦ಗಳನ್ನು ಸಹಾಯ ಧನವಾಗಿ ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ೨೦೧೧-೧೨ರಲ್ಲಿ ೧೦೦೦ ಜೈವಾನಿಲ ಸ್ಥಾವರಗಳನ್ನು ನಿರ್ಮಿಸಲು ರೂ. ೪೮.೨೦ ಲಕ್ಷ ಅನುದಾನದ ಗುರಿ ಹೊಂದಲಾಗಿದ್ದು, ೫೬೭ ಜೈವಾನಿಲ ಸ್ಥಾವರಗಳನ್ನು ನಿರ್ಮಿಸಿ, ರೂ. ೩೮.೬೫ ಲಕ್ಷ ವೆಚ್ಚ ಮಾಡಲಾಯಿತು.

## ೩. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ಈ ಯೋಜನೆಯನ್ನು ತುಮಕೂರು ಜಿಲ್ಲೆಯಲ್ಲಿ ಮೂರನೇ ಹಂತದಲ್ಲಿ ೦೧-೦೪-೨೦೦೮ರಿಂದ ಜಾರಿಗೆ ತರಲಾಗಿದೆ. ಜಿಲ್ಲೆಯ ೧೦ ತಾಲೂಕುಗಳಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಪ್ರಾರಂಭವಾಗಿದ್ದು, ಜಿಲ್ಲಾ ಮಟ್ಟದ, ತಾಲೂಕು ಮಟ್ಟದ ಹಾಗೂ ಗ್ರಾಮ ಪಂಚಾಯತ್ ಮಟ್ಟದಲ್ಲಿ ಕಾರ್ಯಗಾರಗಳನ್ನು ಹಮ್ಮಿಕೊಂಡಿದ್ದು, ಅನುಷ್ಠಾನಾಧಿಕಾರಿಗಳಿಗೆ ತರಬೇತಿ ನೀಡಲಾಗಿದೆ. ಸಾರ್ವಜನಿಕರಿಗೆ ಈ ಯೋಜನೆಯ ಮಹತ್ವದ ಬಗ್ಗೆ ತಿಳುವಳಿಕೆ ನೀಡಲಾಗಿದ್ದು, ಈಗಾಗಲೇ ೨,೧೩,೯೪೯ ಕುಟುಂಬಗಳು ಹಾಗೂ ೪,೯೦,೨೦೮ ಕೂಲಿಕಾರರು ನೋಂದಣಿ ಮಾಡಿಸಿರುತ್ತಾರೆ. ೧,೯೦,೨೨೨ ಕುಟುಂಬಗಳಿಗೆ ಉದ್ಯೋಗ ಭರವಸೆ ಚೀಟಿಗಳನ್ನು ವಿತರಿಸಲಾಗಿದೆ. ಈ ರೀತಿ ನೋಂದಣಿ ಮಾಡಿಕೊಂಡ ಕುಟುಂಬಗಳು ಹಾಗೂ ಕೂಲಿಗಾರರಿಗೆ ಕೆಲಸವನ್ನು ನೀಡುವ ಸಲುವಾಗಿ ವಾರ್ಡ್ ಸಭೆ ಹಾಗೂ ಗ್ರಾಮಸಭೆಗಳಲ್ಲಿ ಐದು ವರ್ಷಗಳಿಗೆ ಸಂಬಂಧಪಟ್ಟಂತೆ ಕಾಮಗಾರಿಗಳ ವೆಚ್ಚ ರೂ. ೨೪೮.೮೩ ಕೋಟಿಗಳಿಗೆ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ೨೦೦೮-೦೯ನೇ ಸಾಲಿಗೆ ಸದರಿ ಗುಚ್ಚ ಕಾಮಗಾರಿಗಳಲ್ಲಿ ಕಾಮಗಾರಿಗಳನ್ನು ಆಯ್ಕೆ ಮಾಡಿಕೊಂಡು ಎಂಟು ತಾಲೂಕುಗಳಲ್ಲಿ ೭೯ ಕಾಮಗಾರಿಗಳನ್ನು ಪ್ರಾರಂಭಿಸಿ ರೂ. ೨೮ ಲಕ್ಷ ವೆಚ್ಚ ಮಾಡಿ ೧೫,೬೬೦ ಮಾನವ ದಿನಗಳನ್ನು ಸೃಷ್ಟಿಸಲಾಗಿತ್ತು. ೨೦೧೧-೧೨ನೇ ಸಾಲಿಗೆ ಸರ್ಕಾರದಿಂದ ನಿಗದಿಯಾದ ಕಾರ್ಮಿಕ ಮುಂಗಡ ರೂ. ೧೦೩.೯೯ ಲಕ್ಷಗಳಾಗಿದ್ದು, ವಿತರಿಸಲಾದ ಒಟ್ಟು ಕಾರ್ಡುಗಳ ಸಂಖ್ಯೆ ೨,೬೮,೭೪೫ ಆಗಿರುತ್ತದೆ. ಇದೇ ಅವಧಿಯಲ್ಲಿ ಉದ್ಯೋಗ ಬೇಡಿಕೆ ಸಲ್ಲಿಸಿದ ಕುಟುಂಬಗಳ ಸಂಖ್ಯೆ ೪೦,೯೯೭ ಆಗಿದ್ದು, ಉದ್ಯೋಗ ಪಡೆದ ಕುಟುಂಬಗಳ ಸಂಖ್ಯೆ ೪೦,೬೮೮ ಆಗಿತ್ತು. ೧೦೦ ದಿನಗಳ ಉದ್ಯೋಗ ಪೂರೈಸಿದ ಕುಟುಂಬಗಳ ಸಂಖ್ಯೆ ೧೪೦೭ ಆಗಿದೆ. ಈ ಸಾಲಿನಲ್ಲಿ ೧೬,೩೪,೩೫೬ ಮಾನವ ದಿನಗಳನ್ನು ಸೃಷ್ಟಿಸಲಾಯಿತು ಒಟ್ಟು ೭,೨೬೯ ರಲ್ಲಿ ೬,೮೨೪ ಕಾಮಗಾರಿಗಳು ಪೂರ್ಣಗೊಂಡಿದ್ದು, ಇದಕ್ಕಾಗಿ ರೂ. ೫,೫೬೩.೦೧ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಉಳಿದ ಕಾಮಗಾ-ರಿಗಳು ನಿರ್ಮಾಣದ ಹಂತದಲ್ಲಿದೆ. ೨೦೧೩-೧೪ರಲ್ಲಿ ೧,೪೧,೩೯೯ ಕುಟುಂಬಗಳು ಕೆಲಸಕ್ಕಾಗಿ ಬೇಡಿಕೆ ಸಲ್ಲಿಸಿದ್ದು, ೩,೧೪,೩೭೧ ಕೆಲಸದ ಚೀಟಿಗಳನ್ನು ವಿತರಿಸಲಾಗಿದೆ. ಈ ಯೋಜನೆಯಡಿ ೧,೧೨,೫೯೨ ಮಂದಿ ಕೆಲಸ ನಿರ್ವಹಿಸಿದ್ದರು. ೧೮,೮೩೩ ಕುಟುಂಬಗಳು ೧೦೦ ದಿನಗಳ ಉದ್ಯೋಗವನ್ನು ಉಪಯೋಗಿಸಿಕೊಂಡ ಕುಟುಂಬಗಳಾಗಿದ್ದರು. ಹೀಗೆ ಈ ಯೋಜನೆಯಡಿಯಲ್ಲಿ ೬೮,೪೬,೭೪೪ ಮಾನವ ದಿನಗಳನ್ನು ಸೃಷ್ಟಿಸಲಾಗಿತ್ತು.

## ೪. ಸುವರ್ಣ ಗ್ರಾಮೋದಯ ಯೋಜನೆ

ಅಂದಿನ ಘನತೆವೆತ್ತ ಭಾರತದ ರಾಷ್ಟ್ರಪತಿಗಳು ೨೫-೦೨-೨೦೦೭ರಂದು ಸುವರ್ಣ ಗ್ರಾಮೋದಯ ಯೋಜನೆಗೆ ಚಾಲನೆ ನೀಡಿರುತ್ತಾರೆ. ಸುವರ್ಣ ಗ್ರಾಮೋದಯ ಯೋಜನೆಯು ಕರ್ನಾಟಕ ಸರ್ಕಾರದ ಒಂದು ವಿನೂತನ ಯೋಜನೆಯಾಗಿದ್ದು, ಗ್ರಾಮೀಣ ಅಭಿವೃದ್ಧಿಯಲ್ಲಿ ಆಳವಾದ ಮತ್ತು ಸಮಗ್ರ ದೂರದೃಷ್ಟಿತ್ವವನ್ನು ಹೊಂದುವ ಮೂಲಕ ಗ್ರಾಮ ಸಮುದಾಯಗಳನ್ನು ಅಭಿವೃದ್ಧಿ ಪಡಿಸಬಹುದಾಗಿದೆ. ವಿಶಾಲ ಕರ್ನಾಟಕವು ರಚನೆಯಾದ ನಂತರ ರಾಜ್ಯವು ಸುವರ್ಣ ಮಹೋತ್ಸವ ಆಚರಿಸುವ ಸುಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಹೆಚ್. ಡಿ. ಕುಮಾರಸ್ವಾಮಿ ರವರು ಈ ಯೋಜನೆಯನ್ನು ಜಾರಿಗೆ ತಂದರು. ಸರ್ಕಾರ, ಸರ್ಕಾರೇತರ ಸಂಸ್ಥೆಗಳು, ಖಾಸಗಿ ವಲಯದ ಪಾಲುದಾರರು ಮತ್ತು ಗ್ರಾಮ ಸಮುದಾಯಗಳ ಸಹಭಾಗಿತ್ವದ ಒಟ್ಟು ಗೂಡಿದ ಪ್ರಯತ್ನಗಳೊಂದಿಗೆ ಪ್ರತಿ ವರ್ಷ ೧,೦೦೦ ಗ್ರಾಮಗಳನ್ನು ಅಭಿವೃದ್ಧಿ ಪಡಿಸುವುದು ಈ ಯೋಜನೆಯ ಮುಖ್ಯ ಧ್ಯೇಯವಾಗಿದೆ.

### ಯೋಜನೆಯ ಧ್ಯೇಯೋದ್ದೇಶಗಳು

1. ಆಯ್ಕೆಯಾದ ಗ್ರಾಮಗಳ ಜನರ ಜೀವನ ಮಟ್ಟವನ್ನು ಉತ್ತಮಗೊಳಿಸಿ ಭೌತಿಕ ಪರಿಸರವನ್ನು ಮೇಲ್ದರ್ಜೆಗೇರಿಸುವುದು.

2. ಭೂ ಆಧಾರಿತ ಚಟುವಟಿಕೆಗಳ ಆದಾಯವನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಸಂಪೂರ್ಣವಾಗಿ ಅಭಿವೃದ್ಧಿ ಪಡಿಸುವುದು.
3. ಶಿಕ್ಷಣ, ಆರೋಗ್ಯ ಸೇವೆಗಳು, ಮಕ್ಕಳ ಯೋಗಕ್ಷೇಮ ಇತ್ಯಾದಿಗಳನ್ನು ಒಳಗೊಂಡಂತೆ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಸಾಕಷ್ಟು ಹಾಗೂ ಪೂರ್ಣ ಪ್ರಮಾಣದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
4. ವಿಶೇಷವಾಗಿ ವಿದ್ಯಾವಂತ ನಿರುದ್ಯೋಗಿ ಯುವ ಜನರಿಗೆ ಕೃಷಿಯೇತರ ಉದ್ಯೋಗಾವಕಾಶಗಳನ್ನು ಸೃಜಿಸುವುದು.
5. ಸ್ವಸಹಾಯ ಗುಂಪುಗಳು, ಸಾಂಸ್ಕೃತಿಕ ಸಂಘಗಳು ಮುಂತಾದವುಗಳ ಮೂಲಕ ಸಮುದಾಯ ಜಾಗೃತಿ ಮತ್ತು ಅಭಿವೃದ್ಧಿಗೆ ನೆರವಾಗುವುದು.
6. ಸಂಪೂರ್ಣ ಸ್ವಚ್ಚತಾ ಆಂದೋಲನ ಕಾರ್ಯಕ್ರಮ

ತುಮಕೂರು ಜಿಲ್ಲೆಯಲ್ಲಿ ೧೦ ತಾಲೂಕುಗಳಿದ್ದು, ಮೊದಲನೇ ಹಂತದಲ್ಲಿ ಒಟ್ಟು ೬೭ ಗ್ರಾಮಗಳನ್ನು ಸುವರ್ಣ ಗ್ರಾಮಗಳಾಗಿ ಆಯ್ಕೆ ಮಾಡಿರುತ್ತದೆ. ಸದರಿ ಯೋಜನೆಯಡಿ ರಸ್ತೆ, ಚರಂಡಿ, ಅಂಗನವಾಡಿ, ಸಮುದಾಯ ಭವನ, ವಿದ್ಯುತ್, ತ್ಯಾಜ್ಯ ವಸ್ತು ವಿಲೇವಾರಿ,ತರಬೇತಿ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದಕ್ಕಾಗಿ ಸರ್ಕಾರದಿಂದ ರೂ. ೬,೨೯೯.೬೪ ಲಕ್ಷಗಳನ್ನು ನಿಗದಿಪಡಿಸಿದ್ದು, ೨೦೧೨ ರ ಮಾರ್ಚಿ ಅಂತ್ಯಕ್ಕೆ ರೂ. ೪೮೬೫.೮೬ ಲಕ್ಷ ವೆಚ್ಚ ಮಾಡಲಾಗಿದೆ. ಮೂರನೇ ಹಂತದಲ್ಲಿ ೯೯ ಗ್ರಾಮಗಳು ಆಯ್ಕೆಯಾಗಿದ್ದು, ರೂ. ೪೪೪೯.೩೬೦ ಲಕ್ಷ ಬಿಡುಗಡೆಯಾಗಿದ್ದು, ರೂ. ೩೭೦೪.೬೯ ಲಕ್ಷ ವೆಚ್ಚ ಮಾಡಲಾಗಿದೆ.

### ೫. ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ(ಎಸ್.ಜಿ.ಆರ್.ವೈ)

ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿ ೨೫ನೇ ಸೆಪ್ಟೆಂಬರ್ ೨೦೦೧ರಂದು ಜಾರಿಗೆ ಬಂದಿರುತ್ತದೆ. ಎಲ್ಲಾ ಉದ್ಯೋಗ ಸೃಷ್ಟಿಸುವ ಯೋಜನೆಗಳು ಎಸ್.ಜಿ.ಆರ್.ವೈ ಯೋಜನೆಯ ಭಾಗವಾಗಿ ಮುಂದುವರೆದು ಎಲ್ಲಾ ಹಂತಗಳಲ್ಲಿ ಪಂಚಾಯತ್‌ರಾಜ್ ಸಂಸ್ಥೆ(ಐ.ಆರ್.ಐ)ಗಳ ಮೂಲಕ ಅನುಷ್ಠಾನಗೊಳ್ಳುತ್ತವೆ. ಗ್ರಾಮ ಸಮುದಾಯದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಮೂಲರಚನಾ ಸೌಕರ್ಯಗಳನ್ನು ಸ್ಥಾಪಿಸುತ್ತಾ ಗ್ರಾಮೀಣ ಪ್ರದೇಶಗಳಲ್ಲಿ ವೇತನ ಸಿಗುವ ಉದ್ಯೋಗಾವಕಾಶಗಳನ್ನು ಹಾಗೂ ಆಹಾರ ಭದ್ರತೆಯನ್ನು ಸ್ಥಾಪಿಸುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ. ಈ ಯೋಜನೆಯಡಿ ಮಹಿಳೆಯರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಪಾಯಕಾರಿ ಉದ್ಯಮಗಳಲ್ಲಿ ಕೆಲಸ ಮಾಡುತ್ತಿರುವ ಮಕ್ಕಳನ್ನು ಅಂತಹ ಕೆಲಸಗಳಿಂದ ಹಿಂತೆಗೆಸಿಕೊಂಡ ತಂದೆ ತಾಯಿಯರಿಗೆ ವೇತನ ಸಿಗುವ ಉದ್ಯೋಗಾವಕಾಶ ಒದಗಿಸುವಲ್ಲಿ ಹೆಚ್ಚಿನ ಆದ್ಯತೆ ನೀಡಲಾಗುವುದು. ಈ ಯೋಜನೆಗೆ ೭೫:೨೫ರ ಅನುಪಾತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮವಾಗಿ ಅನುದಾನ ನೀಡುತ್ತವೆ. ಈ ಯೋಜನೆಗೆ ಸರ್ಕಾರದಿಂದ ನಗದು ಅನುದಾನ ಮತ್ತು ಆಹಾರ ಧಾನ್ಯ ಬಿಡುಗಡೆಯಾಗಲಿದ್ದು, ಕೂಲಿಕಾರರಿಗೆ ಆಹಾರ ಧಾನ್ಯ ಮತ್ತು ನಗದು ಮೊತ್ತದೊಂದಿಗೆ ಸರ್ಕಾರದ ಅನುಮೋದಿತ ಕೂಲಿ ದರದಲ್ಲಿ ಕೂಲಿ ಮೊತ್ತವನ್ನು ಪಾವತಿಸಲಾಗುತ್ತದೆ. ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಕಾರ್ಯಕ್ರಮದಲ್ಲಿ ಶೇ.೨೨.೫೦ ರಷ್ಟು ಅನುದಾನವನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ವೈಯಕ್ತಿಕ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳಿಗೂ, ಉಳಿದ ಶೇ.೭೭.೫೦ರಷ್ಟನ್ನು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಲಾಗುತ್ತದೆ. ೩೧-೦೩-೨೦೦೮ರ ಅಂತ್ಯಕ್ಕೆ ರೂ. ೧೯೨೩.೪೧ ಲಕ್ಷ ಅನುದಾನ ಮತ್ತು ೮೩೦೩.೮೨೦ ಮೆಟ್ರಿಕ್ ಟನ್ ಆಹಾರ ಧಾನ್ಯ ವಿನಿಯೋಗಿಸಿಕೊಂಡು ೪೨.೧೫ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಗಿದೆ. ಒಟ್ಟಾರೆ ಶೇ.೯೩.೬೭ ರಷ್ಟು ಪ್ರಗತಿ ಸಾಧಿಸಲಾಗಿದೆ.

### ೬. ಗ್ರಾಮೀಣ ಅಂಬೇಡ್ಕರ್ ವಸತಿ ಯೋಜನೆ

ಇದು ರಾಜ್ಯ ಸರ್ಕಾರದ ಮಹತ್ವದ ಯೋಜನೆಯಾಗಿದ್ದು, ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ಮನೆ ನಿರ್ಮಿಸಿಕೊಳ್ಳುವ ಅವಕಾಶ ಕಲ್ಪಿಸಲಾಗಿದೆ. ಗ್ರಾಮಸಭೆ, ಗ್ರಾಮ ಪಂಚಾಯತ್ ಸಭೆಯ ಮೂಲಕ ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ಜಾಗೃತ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯಲಾಗುತ್ತದೆ. ೨೦೧೦-೧೧ರಲ್ಲಿ ೭೬೮ ಫಲಾನುಭವಿಗಳ ಗುರಿ ಇದ್ದು, ೧೪೯ ಮನೆಗಳನ್ನು ನಿರ್ಮಿಸಲಾಗಿದೆ. ಇನ್ನುಳಿದ ಮನೆಗಳು ನಿರ್ಮಾಣದ ವಿವಿಧ ಹಂತಗಳಲ್ಲಿದ್ದವು.

### ೭. ಗ್ರಾಮೀಣ ಇಂದಿರಾ ಆವಾಸ್ ಯೋಜನೆ

ಇಂದಿರಾ ಆವಾಸ್ ಯೋಜನೆಯು ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾಗಿದ್ದು, ಶೇ.೭೫:೨೫ರ ಅನುಪಾತದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ರಮವಾಗಿ ಅನುದಾನ ನೀಡುತ್ತವೆ. ಈ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಶೇ.೬೦ರಷ್ಟು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಶೇ.೪೦ರಷ್ಟು ಇತರೆ ವರ್ಗದ ಫಲಾನುಭವಿಗಳಿಗೆ ಮನೆಗಳನ್ನು ಕಟ್ಟಿಸಿಕೊಳ್ಳಲು ಆರ್ಥಿಕ ನೆರವು ಒದಗಿಸಲಾಗುತ್ತದೆ. ಫಲಾನುಭವಿಗಳನ್ನು ಗ್ರಾಮಸಭೆಗಳ ಮೂಲಕ ಆಯ್ಕೆ ಮಾಡಲಾಗುತ್ತದೆ. ೨೦೧೧-೧೨ನೇ ಸಾಲಿನಲ್ಲಿ ಜಿಲ್ಲೆಗೆ ೧೨,೩೫೬ ಫಲಾನುಭವಿಗಳ ಗುರಿ ಹೊಂದಲಾಗಿದ್ದು, ಇದುವರೆವಿಗೂ ೨,೦೬೨ ಮನೆಗಳು ಪೂರ್ಣಗೊಂಡಿವೆ. ಇನ್ನುಳಿದ ಮನೆಗಳು ವಿವಿಧ ಹಂತದಲ್ಲಿದ್ದವು. ಸದರಿ ಯೋಜನೆಯಲ್ಲಿ ರೂ. ೫೦,೦೦೦ ಅನುದಾನ ನೀಡಲಾಗುವುದು. ಇದರಲ್ಲಿ ಪರಿಶಿಷ್ಟ ಜಾತಿ/ಪ-ರಿಶಿಷ್ಟ ಪಂಗಡದವರಿಗೆ ಪೂರ್ತಿ ಸಹಾಯಧನವಾಗಿದ್ದರೆ, ಇತರರಿಗೆ ರೂ. ೨೫,೦೦೦ ಸಾಲದ ರೂಪದಲ್ಲೂ, ಉಳಿದ ರೂ. ೨೫,೦೦೦ ಸಹಾಯಧನದ ರೂಪದಲ್ಲೂ ನೀಡಲಾಗುತ್ತದೆ.

### ೮. ಬಸವ (ಗ್ರಾಮೀಣ) ವಸತಿ ಯೋಜನೆ

ಈ ಯೋಜನೆಯಡಿ ೨೦೧೦-೧೧ರಲ್ಲಿ ೨೮,೫೪೫ ಮನೆಗಳ ಗುರಿ ಹೊಂದಲಾಗಿದ್ದು, ೪,೫೬೬ ಮನೆಗಳು ಪೂರ್ಣಗೊಂಡಿದ್ದು, ಉಳಿದ ಮನೆಗಳು ನಿರ್ಮಾಣದ ವಿವಿಧ ಹಂತದಲ್ಲಿದ್ದವು. ಸದರಿ ಯೋಜನೆಯಲ್ಲಿ ರೂ. ೫೦,೦೦೦ ಗಳ ಅನುದಾನ ನೀಡಲಾಗುವುದು. ಇದರಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಪೂರ್ಣವಾಗಿ ಸಹಾಯಧನವಾಗಿದೆ. ಇತರರಿಗೆ ರೂ. ೨೫,೦೦೦ ಗಳನ್ನು ಸಾಲದ ರೂಪದಲ್ಲೂ, ಉಳಿದ ರೂ. ೨೫,೦೦೦ಗಳನ್ನು ಸಹಾಯಧನ ರೂಪದಲ್ಲಿ ನೀಡಲಾಗುತ್ತದೆ.

### ೯. ಸ್ವಚ್ಛ ಗ್ರಾಮ ಯೋಜನೆ

ಗ್ರಾಮಗಳ ಸಂಪೂರ್ಣ ನೈರ್ಮಲೀಕರಣಕ್ಕಾಗಿ ರಾಜ್ಯ ಸರ್ಕಾರ ಕೆಳಗಿನ ಉದ್ದೇಶಗಳೊಂದಿಗೆ ಈ ಯೋಜನೆಯನ್ನು ೨೦೦೦-೦೧ರಿಂದ ಜಾರಿಗೆ ತಂದಿದೆ.

ಅ) ಗ್ರಾಮದ ಒಳರಸ್ತೆ ಮತ್ತು ಬೀದಿಗಳ ಮೇಲ್ಮೈಯನ್ನು ಉತ್ತಮ ಪಡಿಸುವುದು

ಆ) ಕೊಳೆ ಮತ್ತು ಮಳೆ ನೀರಿನ ವಿಲೇವಾರಿಗಾಗಿ ಪ್ರತೀ ಬೀದಿಯಲ್ಲಿ ಚರಂಡಿಗಳ ನಿರ್ಮಾಣ

ಇ) ಸಾಮೂಹಿಕ ಮಿಶ್ರಗೊಬ್ಬರದ ಅಂಗಳ(ಕಮ್ಯೂನಿಟಿ ಕಾಂಪೋಸ್ಟ್)ಗಳನ್ನು ಒದಗಿಸಿ ವಾಸಸ್ಥಳಗಳಿಂದ ತಿಪ್ಪೆಗುಂಡಿಗಳನ್ನು ಸ್ಥಳಾಂತರಿಸುವುದು.

ಈ) ಗ್ರಾಮದ ಎಲ್ಲಾ ಮನೆಗಳಿಗೂ ಹೊಗೆ ರಹಿತ ಸುಧಾರಿತ ಅಸ್ತ್ರ ಒಲೆಗಳನ್ನು ಒದಗಿಸುವುದು.

ಉ) ಗ್ರಾಮದ ಎಲ್ಲಾ ಜನರಿಗಾಗಿ, ಕುಟುಂಬಗಳಿಗಾಗಿ ಸಾಮೂಹಿಕ ಶೌಚಾಲಯಗಳು, ಕೌಟುಂಬಿಕ ಶೌಚಾಲಯಗಳು ಹಾಗೂ ಶಾಲೆಗಳಲ್ಲಿ ಶೌಚಾಲಯಗಳ ನಿರ್ಮಾಣ ಮಾಡುವುದು ಮುಂತಾದವು.

ಜಿಲ್ಲೆಯಲ್ಲಿ ಸ್ವಚ್ಛಗ್ರಾಮ ಯೋಜನೆಯ ೩ನೇ ಹಂತದಡಿ ೨೩ ಗ್ರಾಮಗಳು ಆಯ್ಕೆಗೊಂಡಿದ್ದು, ಈ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗಾಗಿ ಸರ್ಕಾರದಿಂದ ರೂ. ೪೩೭ ಲಕ್ಷ ಅನುದಾನ ಬಿಡುಗಡೆಯಾಗಿದೆ. ಸದರಿ ಗ್ರಾಮಗಳಿಂದ ತಲಾ ರೂ. ಒಂದು ಲಕ್ಷದಂತೆ ಒಟ್ಟು ರೂ. ೨೩ ಲಕ್ಷಗಳನ್ನು ಸಾರ್ವಜನಿಕ ವಂತಿಕೆ ಸಂಗ್ರಹಿಸಲಾಗಿದ್ದು, ಒಟ್ಟು ರೂ. ೪೬೦ ಲಕ್ಷಗಳು ಲಭ್ಯವಿರುತ್ತದೆ. ೨೦೦೮ ಮಾರ್ಚಿ ಅಂತ್ಯಕ್ಕೆ ೨೩ ಗ್ರಾಮಗಳಲ್ಲೂ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿದೆ.

### ೧೦. ಸಂಪೂರ್ಣ ಸ್ವಚ್ಛತಾ ಆಂದೋಲನ ಯೋಜನೆ

ಜಿಲ್ಲೆಯಲ್ಲಿ ಸ್ವಚ್ಛತಾ ಆಂದೋಲನ ಯೋಜನೆ ೨೦೦೫ರಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ೨೦೧೧ರ ಏಪ್ರಿಲ್ ಅಂತ್ಯಕ್ಕೆ ಕೇಂದ್ರ ಸರ್ಕಾರದಿಂದ ರೂ. ೨೧೬೦.೮೭ ಲಕ್ಷಗಳು ಹಾಗೂ ರಾಜ್ಯ ಸರ್ಕಾರದಿಂದ ರೂ. ೬೫೫.೦೨ ಲಕ್ಷಗಳು ಸೇರಿ ಒಟ್ಟು ರೂ. ೨೮೧೫.೮೯ ಲಕ್ಷಗಳು ಬಿಡುಗಡೆಯಾಗಿದ್ದು, ರೂ. ೧೭೪೭.೪೮೬ ಲಕ್ಷ ವೆಚ್ಚ ಮಾಡಿ ೧,೪೭,೬೫೩ ಭೌತಿಕ ಸಾಧನೆ ಮಾಡಲಾಗಿತ್ತು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೩೨ ಅನ್ನು ನೋಡಿ

**ಕೋಷ್ಟಕ: ೮.೩೨, ಸಂಪೂರ್ಣ ಸ್ವಚ್ಚತಾ ಆಂದೋಲನ ಯೋಜನೆಯ ವಿವರ**

| ಕ್ರ.ಸಂ | ಶೌಚಾಲಯಗಳು | ಭೌತಿಕ ಸಾಧನೆ (ಸಂಖ್ಯೆಗಲ್ಲಿ) | ಆರ್ಥಿಕ ಸಾಧನೆ (ರೂ. ಲಕ್ಷ ಗಳಲ್ಲಿ) |
|---|---|---|---|
| ೧ | ವೈಯಕ್ತಿಕ ಶೌಚಾಲಯಗಳು(ಎ.ಪಿ.ಎಲ್) | ೧೦,೯೬೩ | – |
| ೨ | ವೈಯಕ್ತಿಕ ಶೌಚಾಲಯಗಳು(ಬಿ.ಪಿ.ಎಲ್) | ೧,೩೨,೮೧೨ | ೧,೧೦೨.೫೮೦ |
| ೩ | ಶಾಲಾ ಶೌಚಾಲಯಗಳು | ೨,೨೪೨ | ೩೫೮.೯೮೦ |
| ೪ | ಅಂಗನವಾಡಿ ಶೌಚಾಲಯಗಳು | ೧,೮೭೫ | ೮೮.೬೫೫ |
| ೫ | ಸಮುದಾಯ ಶೌಚಾಲಯಗಳು | ೩೦ | ೬೬.೨೫೬ |
| ೬ | ಆರ್.ಎಸ್.ಎಂ/ಪಿ.ಸಿ | ೦೧ | – |
| ೭ | ಇತರೆ ವೆಚ್ಚ | – | ೧೫೧.೧೦೫ |
| **ಒಟ್ಟು** | | **೧,೪೭,೯೭೩** | **೧,೭೪೭.೪೮೬** |

**ಆಧಾರ: ವಾರ್ಷಿಕ ಆಡಳಿತ ವರದಿ, ತುಮಕೂರು.**

## ೧೧. ಮುಖ್ಯಮಂತ್ರಿಗಳ ಗ್ರಾಮ ಸಡಕ್ ಯೋಜನೆ(ಸಿ.ಎಂ.ಜಿ.ಎಸ್.ವೈ)

ಸದರಿ ಯೋಜನೆಯಲ್ಲಿ ೨೦೧೧–೧೨ನೇ ಸಾಲಿಗೆ ಸರ್ಕಾರದಿಂದ ಲಿಂಕ್ ಡಾಕ್ಯುಮೆಂಟ್‌ನಂತೆ ಎಂಟು ಎಸ್.ಡಿ.ಪಿ ತಾಲೂಕುಗಳಿಗೆ ರೂ. ೮೦೧.೬೬ ಲಕ್ಷ ನಿಗದಿಗೊಂಡಿದ್ದು, ಎರಡು ನಾನ್ ಎಸ್.ಡಿ.ಪಿ ತಾಲೂಕುಗಳಾದ ತುಮಕೂರು ಮತ್ತು ತಿಪಟೂರುಗಳಿಗೆ ರೂ.೧೦೦ ಲಕ್ಷ ನಿಗದಿ ಪಡಿಸಲಾಗಿತ್ತು. ಸದರಿ ಸಾಲಿನಲ್ಲಿ ಬಿದ್ದ ಭಾರಿ ಮಳೆಯಿಂದ ಹಾನಿಗೊಳಗಾದ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಗ್ರಾಮೀಣ ರಸ್ತೆ, ಚರಂಡಿ, ತುರ್ತು ದುರಸ್ತಿ ಹಾಗೂ ನಿರ್ವಹಣೆಗಾಗಿ ರೂ. ೧೮೮.೦೯ ಲಕ್ಷ ಬಿಡುಗಡೆಗೊಂಡಿತ್ತು. ಹೀಗೆ ಸರ್ಕಾರದಿಂದ ಒಟ್ಟಾರೆಯಾಗಿ ಅನುಮೋದನೆಗೊಂಡ ೬೨೪ ಕಾಮಗಾರಿಗಳ ಅನುಷ್ಠಾನಕ್ಕಾಗಿ ರೂ. ೧೪೬೭.೩೧ ಲಕ್ಷ ಬಿಡುಗಡೆಯಾಗಿದ್ದು, ೨೦೧೨ರ ಮಾರ್ಚ್ ಅಂತ್ಯಕ್ಕೆ ರೂ. ೧೩೯೪.೨೩೦ ಲಕ್ಷ ವೆಚ್ಚ ಮಾಡಿ ೫೮೨ ಕಾಮಗಾರಿಗಳನ್ನು ಪೂರ್ಣಗೊಳಿಸಿ ೨೪೪.೭೫ ಕಿ.ಮೀ.ರಸ್ತೆ ಅಭಿವೃದ್ಧಿ ಪಡಿಸಲಾಗಿತ್ತು.

## ೧೨. ಅಕ್ಷರ ದಾಸೋಹ

ಅಕ್ಷರ ದಾಸೋಹ ಕಾರ್ಯಕ್ರಮವು ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿ ಊಟವನ್ನು ಒದಗಿಸುವ ಸರ್ಕಾರದ ಮಹತ್ತರವಾದ ಕಾರ್ಯಕ್ರಮವಾಗಿ ಆರಂಭಗೊಂಡಿತು. ಜಿಲ್ಲೆಯಲ್ಲಿ ೧೦ ತಾಲೂಕುಗಳಿದ್ದು, ೨೦೧೧–೧೨ನೇ ಸಾಲಿಗೆ ಒಂದರಿಂದ ಏಳನೇ ತರಗತಿಯವರೆಗೆ ೩೪೮೭ ಸರ್ಕಾರಿ ಶಾಲೆಗಳಿದ್ದು, ೩೩೯೫ ಅಡುಗೆ ಕೇಂದ್ರಗಳಿದ್ದವು. ೬೧ ಅನುದಾನಿತ ಶಾಲೆಗಳಿದ್ದು, ೫೧ ಅಡುಗೆ ಕೇಂದ್ರಗಳಿದ್ದವು. ೨,೦೫,೦೨೦ ಮಕ್ಕಳು ಪ್ರಯೋಜನ ಪಡೆದಿದ್ದರು. ಎಂಟನೇ ತರಗತಿಯಿಂದ ೧೦ನೇ ತರಗತಿಯವರೆಗಿನ ೨೨೬ ಸರ್ಕಾರಿ ಶಾಲೆಗಳಿದ್ದು, ೧೪೧ ಅಡುಗೆ ಕೇಂದ್ರಗಳಿದ್ದವು. ೨೯೬ ಅನುದಾನಿತ ಶಾಲೆಗಳಿದ್ದು, ೨೮೯ ಅಡುಗೆ ಕೇಂದ್ರಗಳಿದ್ದು, ೯೯,೮೮೯ ಮಕ್ಕಳು ಪ್ರಯೋಜನ ಪಡೆದಿದ್ದರು.

# ಬರ ಮತ್ತು ಪ್ರವಾಹ

ಜಿಲ್ಲೆಯಲ್ಲಿ ೧೮೭೭–೭೮ರಲ್ಲಿ ಸಂಭವಿಸಿದ ಬರ ತೀವ್ರತರವಾಗಿದ್ದು, ಜಿಲ್ಲೆಗೆ ಆ ವರ್ಷ ಅತ್ಯಂತ ಕೆಟ್ಟ ವರ್ಷವಾಗಿತ್ತು. ೧೮೯೧–೯೨, ೧೯೦೮–೦೯ ಹಾಗೂ ೧೯೨೩–೨೪ರಲ್ಲಿ ಕೂಡ ಅತಿ ತೀಕ್ಷ್ಣವಾದ ಬರ ಸಂಭವಿಸಿದ್ದರಿಂದ ಸರ್ಕಾರ ಅಗತ್ಯ ಪರಿಹಾರ ಕೈಗೊಂಡಿತ್ತು. ಆಗಾಗ್ಗೆ ಮುಂಗಾರು ಮಳೆ ವಿಫಲಗೊಂಡಿದ್ದರಿಂದ ರೈತರು ವ್ಯವಸಾಯವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು. ವಿಶೇಷವಾಗಿ ಈಶಾನ್ಯ ಮಾನ್‌ಸೂನ್ ರೈತರೊಂದಿಗೆ ಜೂಜಾಡತೊಡಗಿತು. ಹಿಂಗಾರು ಮಳೆಯು ವಿಫಲವಾದರೆ ಕೆರೆಗಳ ನೀರಿನ ಮಟ್ಟ ಕುಸಿಯುವ ಸಂಭವವಿತ್ತು. ಮಳೆಯ ವಿಫಲತೆಯಿಂದಾಗಿ ೧೯೦೪–೦೫ರಲ್ಲಿ ಜಿಲ್ಲೆಯ ಪರಿಸ್ಥಿತಿ ತುಂಬಾ ಕ್ಲಿಷ್ಟಕರವಾಗುವ ಸಂಭವವಿತ್ತು. ನೈರುತ್ಯ ಮಾನ್‌ಸೂನ್ ನಿಂದಾಗಿ ೧೯೦೫–೦೬ರಲ್ಲೂ

ಈ ಸ್ಥಿತಿಯಲ್ಲಿ  ಬದಲಾವಣೆ ಇರಲಿಲ್ಲ. ಮುಂದಿನ ವರ್ಷಗಳಲ್ಲೂ ಈಶಾನ್ಯ ಮಾರುತ ನಿರಾಶೆಯನ್ನುಂಟುಮಾಡಿತ್ತು. ೧೯೦೮–೦೯ರಲ್ಲಿ ಸಂಭವಿಸಿದ ಕ್ಷಾಮ ಜಿಲ್ಲೆಯಾದ್ಯಂತ ಹರಡಿ ೧೮೯೧–೯೨ಕ್ಕಿಂತಲೂ ತೀವ್ರವಾಗಿತ್ತು. ಅದರಲ್ಲೂ ಕುಣಿಗಲ್, ಗುಬ್ಬಿ, ತುರುವೇಕೆರೆ, ತಿಪಟೂರು ಹಾಗೂ ಪಾವಗಡ ತಾಲೂಕುಗಳಲ್ಲಿ ತೀವ್ರತರವಾಗಿತ್ತು.

ಸ್ವಾತಂತ್ರ್ಯ ನಂತರದಲ್ಲಿ ಸಾರಿಗೆ–ಸಂಪರ್ಕ ಕ್ಷೇತ್ರದಲ್ಲಾದ ಸುಧಾರಣೆ ತೀವ್ರತರವಾದ ಕ್ಷಾಮ ಡಾಮರಗಳು ಸಂಭವಿಸಿದ ಪ್ರದೇಶಗಳಿಗೆ ಅದರಲ್ಲೂ ಕುಗ್ರಾಮದಂತಹ ದೂರದ ಪ್ರದೇಶಗಳಿಗೆ ಆಹಾರ ಪದಾರ್ಥಗಳ ಕೊರತೆ ಉಂಟಾದರೆ ಆಹಾರ ಪದಾರ್ಥಗಳನ್ನು ತರುವ ಅಥವಾ ಕಳುಹಿಸುವ ಕೆಲಸ ವೇಗವಾಯಿತು. ಬರ ಸರ್ವೇ ಸಾಮಾನ್ಯ ಪ್ರದೇಶವಾದ ಅದರಲ್ಲೂ ವಿಶೇಷವಾಗಿ ಮಧುಗಿರಿ ಉಪವಿಭಾಗದಲ್ಲಿ ಮಾನ್‌ಸೂನ್ ವಿಫಲಗೊಂಡಿತ್ತು. ಇದರಿಂದ ಗೊತ್ತಾಗುವುದೇನೆಂದರೆ ಸಾಮಾನ್ಯವಾಗಿ ಎರಡು ಅಥವಾ ಐದು ವರ್ಷಗಳಿಗೊಂದಾವರ್ತಿ ಎಡೆಬಿಡದೆ ದೀರ್ಘಕಾಲದ ಕೊರತೆ ಉಂಟಾಗುತ್ತಿತ್ತು. ಇದು ಬರಗಾಲವಾಗಿರಬಹುದು ಅಥವಾ ಬರಗಾಲದ ಸ್ಥಿತಿಗೆ ಹತ್ತಿರವಾಗಿರಬಹುದು. ಪರಿಣಾಮವಾಗಿ ಬರಗಾಲದ ಸ್ಥಿತಿಯನ್ನು ಅಥವಾ ಬರಗಾಲದ ಸಂದರ್ಭದಲ್ಲಿ ಉಂಟಾಗಬಹುದಾದ ಕೊರತೆಯನ್ನು ಹೋಗಲಾಡಿಸಲು, ಶಾಶ್ವತವಾದ ದಿಟ್ಟ ಕ್ರಮ ಕೈಗೊಳ್ಳಬೇಕು. ಬರ ಸಂಭವಿಸಿದರೆ, ಸಾಮಾನ್ಯವಾಗಿ ಆಹಾರ ಪದಾರ್ಥಗಳ ಉತ್ಪಾದನೆ ಕುಂಠಿತಗೊಳ್ಳುತ್ತದೆ. ಆಹಾರ ಪದಾರ್ಥಗಳ ಕೊರತೆ ಸಂಭವಿಸಿದರೆ ಹಸಿವಿನಿಂದ ಬಳಲುವವರಿಗೆ ಅಗತ್ಯ ವಸ್ತುಗಳ ಸರಬರಾಜನ್ನು ತಕ್ಷಣದಿಂದಲೇ ಜಾರಿ ಮಾಡಬೇಕು. ನೀರಾವರಿ ಬಾವಿಗಳ ಹಾಗೂ ಕೊಳವೆ ಬಾವಿಗಳ ಅಂತರ್ಜಲವನ್ನು ಉನ್ನತೀಕರಿಸುವುದು ಸಹ ಒಂದು ಶಾಶ್ವತ ಪರಿಹಾರ ಮಾರ್ಗ. ಜಿಲ್ಲೆಯಾದ್ಯಂತ ೧೯೬೮ರಲ್ಲೂ ಸಹ ಆಹಾರ ಪದಾರ್ಥಗಳ ಕೊರತೆ ಉಂಟಾಯಿತು. ಹಸಿವಿನಿಂದ ಬಳಲುವ ಜನರ ಹಸಿವನ್ನು ಶಮನಗೊಳಿಸಲು ರಾಜ್ಯ ಸರ್ಕಾರ ೧೨೦೩ ಬರಪರಿಹಾರ ಕಾರ್ಯಗಳನ್ನು ಕೈಗೊಂಡು, ಇದಕ್ಕಾಗಿ ರೂ. ೨೫ ಲಕ್ಷಗಳನ್ನು ವೆಚ್ಚ ಮಾಡಿ ೩೫,೪೯೦ ಮಂದಿಗೆ ಉದ್ಯೋಗ ಒದಗಿಸಿತ್ತು. ಜಿಲ್ಲೆಯಲ್ಲಿ ಪ್ರವಾಹದ ಭೀತಿ ಇರುವುದಿಲ್ಲ. ಕಾರಣ ಇಲ್ಲಿನ ನದಿಗಳು, ಹಳ್ಳ–ಕೊಳ್ಳಗಳು ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತವೆ. ಉಳಿದಂತೆ ವರ್ಷದ ಹಲವು ತಿಂಗಳುಗಳು ಬರಿದಾಗುತ್ತಿದ್ದವು. ಕೆಲವೊಮ್ಮೆ ಮಳೆಗಾಲದಲ್ಲೂ ಒಣಗಿ ಹೋಗುತ್ತಿದ್ದುದ್ದರಿಂದ ಇವು ಸಾಮಾನ್ಯವಾಗಿ ಪ್ರವಾಹ ರಹಿತವಾಗಿದ್ದವು.

ಜಿಲ್ಲೆಯಲ್ಲಿ ೧೯೮೨ ರಿಂದ ೧೯೮೫ರ ವರೆಗಿನ ವರ್ಷಗಳಲ್ಲಿ ಮುಂಗಾರು (ಜೂನ್ ನಿಂದ ಸೆಪ್ಟೆಂಬರ್) ಅವಧಿಯಲ್ಲಿ ಸಂಭವಿಸಿದ ತೀವ್ರ ಬರಗಾಲ ಪರಿಸ್ಥಿತಿಯ ಮೇರೆಗೆ ವರ್ಗೀಕರಿಸಲಾದ ತಾಲೂಕುಗಳ ವಿವರವನ್ನು ಇಲ್ಲಿ ನೀಡಲಾಗಿದೆ. ೧೯೮೪ರಲ್ಲಿ ಒಂದು ತಾಲೂಕು ತೀವ್ರ ಬರಗಾಲಕ್ಕೆ ತುತ್ತಾಗಿದ್ದರೆ, ೧೯೮೨, ೧೯೮೩ ಹಾಗೂ ೧೯೮೫ರಲ್ಲಿ ತೀವ್ರ ಬರಗಾಲಕ್ಕೆ ಯಾವುದೇ ತಾಲೂಕುಗಳು ತುತ್ತಾಗಿರಲಿಲ್ಲ. ಹಾಗೆಯೇ ಸಾಧಾರಣ ಬರಗಾಲಕ್ಕೆ ೧೯೮೨ರಲ್ಲಿ ನಾಲ್ಕು ತಾಲೂಕುಗಳು, ೧೯೮೪ರಲ್ಲಿ ಎರಡು ತಾಲೂಕುಗಳು ಹಾಗೂ ೧೯೮೫ರಲ್ಲಿ ನಾಲ್ಕು ತಾಲೂಕುಗಳು ತುತ್ತಾಗಿದ್ದವು. ಕಡಿಮೆ ಬರಗಾಲಕ್ಕೆ ತುತ್ತಾದ ತಾಲೂಕುಗಳಲ್ಲಿ ೧೯೮೨ರಲ್ಲಿ ಮೂರು ತಾಲೂಕುಗಳು ಹಾಗೂ ೧೯೮೫ ರಲ್ಲಿ ಎರಡು ತಾಲೂಕುಗಳು ಸೇರಿದ್ದವು. ಒಟ್ಟು ಬರಪೀಡಿತ ತಾಲೂಕುಗಳ ಸಂಖ್ಯೆ ೧೯೮೨ರಲ್ಲಿ ಏಳು, ೧೯೮೪ರಲ್ಲಿ ಮೂರು ಹಾಗೂ ೧೯೮೫ರಲ್ಲಿ ಆರು ತಾಲೂಕುಗಳು ಸೇರಿದ್ದವು.

ಇದೇ ಅವಧಿಯಲ್ಲಿ ಹಿಂಗಾರು (ಅಕ್ಟೋಬರ್ ನಿಂದ ಡಿಸೆಂಬರ್‌ವರೆಗೆ) ಅವಧಿಯಲ್ಲಿ ತೀವ್ರ ಬರಗಾಲ ಪರಿಸ್ಥಿತಿಯ ಮೇರೆಗೆ ವರ್ಗೀಕರಿಸಲಾದ ತಾಲೂಕುಗಳ ವಿವರ ಹೀಗಿದೆ. ೧೯೮೨ರಲ್ಲಿ ಮೂರು ತಾಲೂಕುಗಳು ತೀವ್ರ ಬರಗಾಲಕ್ಕೆ ತುತ್ತಾಗಿದ್ದರೆ, ೧೯೮೩ರಲ್ಲಿ ನಾಲ್ಕು, ೧೯೮೪ರಲ್ಲಿ ಎರಡು ಹಾಗೂ ೧೯೮೫ರಲ್ಲಿ ಎಂಟು ತಾಲೂಕುಗಳು ಸೇರಿದ್ದವು. ಹಾಗೆಯೇ ಸಾಧಾರಣ ಬರಗಾಲಕ್ಕೆ ೧೯೮೨ರಲ್ಲಿ ಮೂರು, ೧೯೮೩ರಲ್ಲಿ ನಾಲ್ಕು ಹಾಗೂ ೧೯೮೪ರಲ್ಲಿ ಎರಡು ತಾಲೂಕುಗಳು ತುತ್ತಾಗಿದ್ದವು. ಕಡಿಮೆ ಬರಗಾಲಕ್ಕೆ ೧೯೮೨ರಲ್ಲಿ ಎರಡು, ೧೯೮೪ರಲ್ಲಿ ಒಂದು ಹಾಗೂ ೧೯೮೫ ಎರಡು ತಾಲೂಕುಗಳು ತುತ್ತಾಗಿದ್ದವು. ಒಟ್ಟು ಬರಪೀಡಿತ ತಾಲೂಕುಗಳ ಸಂಖ್ಯೆ ೧೯೮೨ರಲ್ಲಿ ಏಳು ತಾಲೂಕುಗಳು, ೧೯೮೩ರಲ್ಲಿ ಎಂಟು ತಾಲೂಕುಗಳು, ೧೯೮೪ರಲ್ಲಿ ಐದು ತಾಲೂಕುಗಳು ಹಾಗೂ ೧೯೮೫ರಲ್ಲಿ ಹತ್ತು ತಾಲೂಕುಗಳು ಬರಗಾಲಕ್ಕೆ ತುತ್ತಾಗಿದ್ದವು. ೧೯೮೨ರಿಂದ ೧೯೮೫ರವರೆಗೆ ತುತ್ತಾದ ಬರಪೀಡಿತ ಪ್ರದೇಶಗಳಲ್ಲಿ ಕುಡಿಯುವ ನೀರು, ಅಗತ್ಯ ಆಹಾರ ಧಾನ್ಯ, ದನಕರುಗಳಿಗೆ ಮೇವು ಹಾಗೂ ಬಡ ಕೃಷಿ ಕುಟುಂಬಗಳಿಗೆ ಜೀವನ ನಡೆಸಲು ಅಗತ್ಯವಾದ ವಸ್ತುಗಳನ್ನು ಕೊಳ್ಳುವ ಸಾಮರ್ಥ್ಯ ನೀಡುವುದಕ್ಕಾಗಿ ಉದ್ಯೋಗಾವಕಾಶಗಳನ್ನು ಸರ್ಕಾರ ಒದಗಿಸಿತ್ತು.

ಜಿಲ್ಲೆಯ ತಿಪಟೂರು ತಾಲೂಕಿನಲ್ಲಿ ೨೦೧೦–೧೧ರಲ್ಲಿ ೩೩ ಕುಟುಂಬಗಳು ಬೆಳೆ ನಾಶಕ್ಕೊಳಗಾಗಿದ್ದು, ಇವ–ರಿಗೆ ರೂ. ೨೨,೨೫೨ ಪರಿಹಾರ ವಿತರಿಸಲಾಗಿತ್ತು. ಹಾಗೆಯೇ ನಾಲ್ಕು ಕುಟುಂಬಗಳು ಜಾನುವಾರು ನಷ್ಟ ಹೊಂದಿದ್ದು,

ಸದರಿ ಕುಟುಂಬಗಳಿಗೆ ರೂ. ೨೭,೦೦೦ ಪರಿಹಾರ, ಒಂದು ಕುಟುಂಬ ಬೆಂಕಿ ಅನಾಹುತದಿಂದ ನಷ್ಟ ಹೊಂದಿದ್ದು, ರೂ. ೧,೦೦೦ಗಳ ಪರಿಹಾರ ನೀಡಲಾಗಿತ್ತು. ೨೦೧೨–೧೩ರಲ್ಲಿ ಏಳು ಕುಟುಂಬಗಳು ಬೆಳೆನಾಶಕ್ಕೊಳಗಾಗಿದ್ದು, ರೂ. ೧೩,೬೩೭ ಪರಿಹಾರ, ನಾಲ್ಕು ಕುಟುಂಬಗಳು ಜಾನುವಾರು ನಷ್ಟಕ್ಕೊಳಗಾಗಿದ್ದು, ರೂ. ೩೨,೪೦೦ ಪರಿಹಾರ, ೧೨ ಕುಟುಂಬಗಳು ಬೆಂಕಿ ಅನಾಹುತಕ್ಕೊಳಗಾಗಿದ್ದು, ರೂ. ೩೧,೮೦೦ಗಳ ಪರಿಹಾರ ನೀಡಲಾಗಿತ್ತು.

ತುರುವೇಕೆರೆ ತಾಲೂಕಿನಲ್ಲಿ ೨೦೧೦–೧೧ರಲ್ಲಿ ೧೫ ಕುಟುಂಬಗಳು ಬೆಳೆ ನಾಶಕ್ಕೊಳಗಾಗಿದ್ದು,ರೂ. ೩೩,೯೬೬ ಪರಿಹಾರ ವಿತರಣೆ ಮಾಡಲಾಗಿತ್ತು. ಆರು ಕುಟುಂಬಗಳು ಜಾನುವಾರು ನಷ್ಟಕ್ಕೊಳಗಾಗಿದ್ದು, ರೂ. ೧೯,೮೦೦ ಪರಿಹಾರ, ನಾಲ್ಕು ಕುಟುಂಬಗಳು ಬೆಂಕಿ ಅನಾಹುತಕ್ಕೊಳಗಾಗಿದ್ದು, ರೂ. ೫,೦೦೦ ಪರಿಹಾರ, ೧೫೫ ಕುಟುಂಬಗಳು ಮಳೆ ಅನಾಹುತಕ್ಕೊಳಗಾಗಿದ್ದು ರೂ. ೧,೯೮,೨೫೦ ಪರಿಹಾರ ಹಾಗೂ ಒಬ್ಬರು ಮೃತಪಟ್ಟಿದ್ದು, ಅವರಿಗೆ ರೂ. ೧,೦೦,೦೦೦ಗಳ ಪರಿಹಾರ ವಿತರಿಸಲಾಗಿತ್ತು. ೨೦೧೨–೧೩ರಲ್ಲಿ ೧೯ ಕುಟುಂಬಗಳು ಬೆಳೆನಾಶಕ್ಕೊಳಗಾಗಿದ್ದು ರೂ. ೪೫,೫೩೯ ಪರಿಹಾರ ನೀಡಲಾಗಿದ್ದರೆ, ಒಂದು ಕುಟುಂಬ ಜಾನುವಾರು ನಷ್ಟ ಅನುಭವಿಸಿದ್ದು, ರೂ. ೫,೦೦೦ ಪರಿಹಾರ, ಎರಡು ಕುಟುಂಬಗಳು ಬೆಂಕಿ ಅನಾಹುತದಿಂದ ನಷ್ಟಕ್ಕೊಳಗಾಗಿದ್ದು, ರೂ. ೨೮೦೦ ಪರಿಹಾರ, ಐದು ಕುಟುಂಬಗಳು ಮಳೆ ಅನಾಹುತಕ್ಕೆ ಒಳಗಾಗಿದ್ದು, ರೂ. ೧೦,೭೦೦ ಪರಿಹಾರ ವಿತರಿಸಲಾಗಿತ್ತು.

ಕುಣಿಗಲ್ ತಾಲೂಕಿನಲ್ಲಿ ೨೦೧೦–೧೧ರಲ್ಲಿ ೪೪ ಕುಟುಂಬಗಳು ಬೆಳೆನಾಶಕ್ಕೊಳಗಾಗಿದ್ದು, ರೂ. ೪೪,೨೫೨ ಪರಿಹಾರ ವಿತರಿಸಲಾಗಿತ್ತು. ಎರಡು ಕುಟುಂಬಗಳು ಜಾನುವಾರು ನಷ್ಟ ಅನುಭವಿಸಿದ್ದು, ರೂ. ೧೨,೦೦೦ ಪರಿಹಾರ, ೧೬ ಕುಟುಂಬಗಳು ಬೆಂಕಿ ಅನಾಹುತಕ್ಕೊಳಗಾಗಿದ್ದು, ರೂ. ೪೭,೭೧೨ ಪರಿಹಾರ ಹಾಗೂ ಒಬ್ಬರು ಮೃತಪಟ್ಟಿದ್ದು, ರೂ. ೧,೦೦,೦೦೦ ಪರಿಹಾರ ವಿತರಿಸಲಾಗಿತ್ತು. ಹಾಗೆಯೇ ೨೦೧೨–೧೩ರಲ್ಲಿ ೮೧ ಕುಟುಂಬಗಳು ಬೆಳೆ ನಾಶಕ್ಕೊಳಗಾಗಿದ್ದು, ರೂ. ೮,೦೦೦ ಪರಿಹಾರ ಹಾಗೂ ೧೫ ಕುಟುಂಬಗಳು ಬೆಂಕಿ ಅನಾಹುತಕ್ಕೊಳಗಾಗಿದ್ದು ರೂ. ೨೫,೮೫೬ ಪರಿಹಾರ ವಿತರಿಸಲಾಗಿತ್ತು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೩೩ ರಲ್ಲಿ ನೀಡಲಾಗಿದೆ.

**ಕೋಷ್ಟಕ: ೮.೩೩ ೨೦೧೦–೧೧ ಹಾಗೂ ೨೦೧೨–೧೩ರಲ್ಲಿ ತಾಲೂಕುಗಳಲ್ಲಿ ಸಂಭವಿಸಿದ ಬರ ಮತ್ತು ಪ್ರವಾಹ ಹಾಗೂ ವಿತರಿಸಿದ ಪರಿಹಾರಗಳ ವಿವರ**

| ಕ್ರ. ಸಂ. | ತಾಲೂಕುಗಳು | ವರ್ಷಗಳು | ಬೆಳೆ ನಾಶಕ್ಕೊಳಗಾದ ಕುಟುಂಬಗಳ ಸಂಖ್ಯೆ | ಬೆಳೆ ನಷ್ಟ ಹೊಂದಿದ ಕುಟುಂಬಗಳಿಗೆ ನೀಡಲಾದ ಪರಿಹಾರ (ರೂ.ಗಳಲ್ಲಿ) | ಜಾನುವಾರು ನಷ್ಟ ಹೊಂದಿದ ಕುಟುಂಬಗಳ ಸಂಖ್ಯೆ | ಜಾನುವಾರು ನಷ್ಟ ಹೊಂದಿದ ಕುಟುಂಬಗಳಿಗೆ ನೀಡಲಾದ ಪರಿಹಾರ (ರೂ.ಗಳಲ್ಲಿ) |
|---|---|---|---|---|---|---|
| ೧ | ತುಮಕೂರು | ೨೦೧೦–೧೧ | – | – | – | – |
| | | ೨೦೧೨–೧೩ | ೦೧ | ೪೧೨೧ | ೦೩ | ೫೭೪೦೦ |
| ೨ | ಕೊರಟಗೆರೆ | ೨೦೧೦–೧೧ | ೧೫ | ೫೪೯೭೮ | ೦೭ | ೫೬೫೦೦ |
| | | ೨೦೧೨–೧೩ | ೦೭ | ೧೫೫೮೦ | ೩ | ೨೭೦೦೦ |
| ೩ | ಮಧುಗಿರಿ | ೨೦೧೦–೧೧ | ೦೪ | ೨೦೦೦೦ | ೦೨ | ೨೮೦೦೦ |
| | | ೨೦೧೨–೧೩ | ೦೮ | ೩೦೩೪೮ | ೪ | ೪೯೨೦೦ |
| ೪ | ಪಾವಗಡ | ೨೦೧೦–೧೧ | ೧೫೪ | ೨೭೫೪೪ | ೧೩ | ೨೨೦೦೦ |
| | | ೨೦೧೨–೧೩ | ೫೮ | ೮೪೨೦೦ | ೦೨ | ೧೦೦೦೦ |
| ೫ | ಗುಬ್ಬಿ | ೨೦೧೦–೧೧ | ೧೦೮ | ೩೩೦೦೦ | ೦೧ | ೧೦೦೦೦ |
| | | ೨೦೧೨–೧೩ | ೧೩ | – | – | – |
| ೬ | ಚಿಕ್ಕನಾಯಕನ ಹಳ್ಳಿ | ೨೦೧೦–೧೧ | – | – | – | – |
| | | ೨೦೧೨–೧೩ | – | – | – | – |

**ಕೋಷ್ಟಕ: ೮.೩೩** (ಮುಂದು.....)

| ಕ್ರ. ಸಂ. | ತಾಲೂಕುಗಳು | ವರ್ಷಗಳು | ಬೆಳೆ ನಾಶಕ್ಕೊಳಗಾದ ಕುಟುಂಬಗಳ ಸಂಖ್ಯೆ | ಬೆಳೆ ನಷ್ಟ ಹೊಂದಿದ ಕುಟುಂಬಗಳಿಗೆ ನೀಡಲಾದ ಪರಿಹಾರ (ರೂ.ಗಳಲ್ಲಿ) | ಜಾನುವಾರು ನಷ್ಟ ಹೊಂದಿದ ಕುಟುಂಬಗಳ ಸಂಖ್ಯೆ | ಜಾನುವಾರು ನಷ್ಟ ಹೊಂದಿದ ಕುಟುಂಬಗಳಿಗೆ ನೀಡಲಾದ ಪರಿಹಾರ (ರೂ.ಗಳಲ್ಲಿ) |
|---|---|---|---|---|---|---|
| ೭ | ತುರುವೇಕೆರೆ | ೨೦೧೦-೧೧ | ೧೫ | ೩೫೯೬೬ | ೦೬ | ೧೯೮೦೦ |
| | | ೨೦೧೨-೧೩ | ೧೯ | ೫೫೨೨೦ | ೦೧ | ೫೦೦೦ |
| ೮ | ತಿಪಟೂರು | ೨೦೧೦-೧೧ | ೩೩ | ೨೨೨೫೨ | ೦೪ | ೨೭೦೦೦ |
| | | ೨೦೧೨-೧೩ | ೦೭ | ೧೩೬೩೭ | ೦೪ | ೩೨೪೦೦೦ |
| ೯ | ಕುಣಿಗಲ್ | ೨೦೧೦-೧೧ | ೪೪ | ೪೪೨೫೨ | ೦೨ | ೧೨೦೦೦ |
| | | ೨೦೧೨-೧೩ | ೮೧ | ೮೦೦೦ | | |
| ೧೦ | ಶಿರಾ | ೨೦೧೦-೧೧ | – | – | – | – |
| | | ೨೦೧೨-೧೩ | – | – | – | – |

| ಕ್ರ. ಸಂ. | ತಾಲೂಕುಗಳು | ವರ್ಷಗಳು | ಬೆಂಕಿ ಅನಾಹುತದಿಂದ ನಷ್ಟ ಹೊಂದಿದ ಕುಟುಂಬಗಳ ಸಂಖ್ಯೆ | ಬೆಂಕಿ ಅನಾಹುತಕ್ಕೆ ನೀಡಲಾದ ಪರಿಹಾರಗಳು (ರೂ.ಗಳಲ್ಲಿ) | ಮೃತಪಟ್ಟವರ ಸಂಖ್ಯೆಗಳು | ಮೃತಪಟ್ಟವರಿಗೆ ವಿತರಿಸಿದ ಪರಿಹಾರ (ರೂ.ಗಳಲ್ಲಿ) | ಮಳೆ ಅನಾಹುತದಿಂದ ನಷ್ಟ ಹೊಂದಿದ ಕುಟುಂಬಗಳ ಸಂಖ್ಯೆ | ಮಳೆ ಅನಾಹುತಕ್ಕೆ ನೀಡಲಾದ ಪರಿಹಾರ (ರೂ.ಗಳಲ್ಲಿ) |
|---|---|---|---|---|---|---|---|---|
| ೧ | ತುಮಕೂರು | ೨೦೧೦-೧೧ | – | – | – | – | ೫೨ | ೫೨೦೦೦ |
| | | ೨೦೧೨-೧೩ | ೦೫ | ೧೩೪೦೮ | – | – | ೨೭ | ೨೭೦೦೦ |
| ೨ | ಕೊರಟಗೆರೆ | ೨೦೧೦-೧೧ | ೦೩ | ೩೫೬೦೧ | ೦೧ | ೧,೦೦,೦೦೦ | – | – |
| | | ೨೦೧೨-೧೩ | ೦೬ | ೯೦೦೦ | – | – | – | – |
| ೩ | ಮಧುಗಿರಿ | ೨೦೧೦-೧೧ | ೦೪ | ೪೬೧೬ | – | – | ೧೫೦ | ೨೮೫೦೦೦ |
| | | ೨೦೧೨-೧೩ | ೧೦ | ೧೯೦೦೦ | – | – | ೧೧೫ | ೨೧೮೦೦೦ |
| ೪ | ಪಾವಗಡ | ೨೦೧೦-೧೧ | ೧೨೦ | ೬೦೨೫ | – | – | – | – |
| | | ೨೦೧೨-೧೩ | ೦೫ | ೧೪೩೫೦ | – | – | – | – |
| ೫ | ಗುಬ್ಬಿ | ೨೦೧೦-೧೧ | ೦೮ | ೮೦೦೦ | – | – | – | – |
| | | ೨೦೧೨-೧೩ | ೦೮ | ೮೦೦೦೦ | – | – | – | – |
| ೬ | ಚಿಕ್ಕನಾಯಕನಹಳ್ಳಿ | ೨೦೧೦-೧೧ | – | – | – | – | – | – |
| | | ೨೦೧೨-೧೩ | – | – | – | – | – | – |
| ೭ | ತುರುವೇಕೆರೆ | ೨೦೧೦-೧೧ | ೦೪ | ೫೦೦೦ | ೦೧ | ೧೦೦೦೦೦ | ೧೫೫ | ೧೯೮೨೫೦ |
| | | ೨೦೧೨-೧೩ | – | – | – | – | ೦೫ | ೧೦೭೦೦ |
| ೮ | ತಿಪಟೂರು | ೨೦೧೦-೧೧ | ೦೧ | ೧೦೦೦ | – | – | – | – |
| | | ೨೦೧೨-೧೩ | ೧೨ | ೩೧೮೦೦ | – | – | – | – |
| ೯ | ಕುಣಿಗಲ್ | ೨೦೧೦-೧೧ | ೧೬ | ೪೭೭೧೨ | ೦೧ | ೧೦೦೦೦೦ | – | – |
| | | ೨೦೧೨-೧೩ | ೧೫ | ೨೫೮೫೬ | – | – | – | – |
| ೧೦ | ಶಿರಾ | ೨೦೧೦-೧೧ | – | – | – | – | – | – |
| | | ೨೦೧೨-೧೩ | – | – | – | – | – | – |

ಆಧಾರ: ಜಿಲ್ಲೆಯ ಆಯಾ ತಾಲೂಕು ಕಛೇರಿಗಳು.

## ಅಭಿವೃದ್ಧಿ ಸಾಧ್ಯತೆಗಳು

ಜಿಲ್ಲೆಯಲ್ಲಿ ೨೦೦೯–೧೦ರಲ್ಲಿ ೨,೪೭,೯೧ಹೆ. (೩,೯೨,೮೦೩ ಟನ್) ಏಕದಳ ಮತ್ತು ಉಪತೃಣ ಧಾನ್ಯಗಳನ್ನೂ, ೬೫,೦೪೦ ಹೆ. (೩೬,೧೩೬ ಟನ್) ಪ್ರದೇಶದಲ್ಲಿ ದ್ವಿದಳ ಧಾನ್ಯಗಳನ್ನೂ, ೩,೧೨,೨೩೧ ಹೆ. (೪,೨೮,೯೩೯ ಟನ್) ಒಟ್ಟು ಆಹಾರ ಧಾನ್ಯಗಳನ್ನೂ, ೧,೧೪,೫೩೨ ಹೆ. (೪೫,೩೩೯ ಟನ್) ಒಟ್ಟು ಎಣ್ಣೆ ಕಾಳುಗಳನ್ನು ಬೆಳೆಯಲಾಗಿತ್ತು. ಆವರಣದಲ್ಲಿ ನೀಡಿರುವ ಅಂಕಿ ಅಂಶಗಳು ಅವುಗಳ ಉತ್ಪಾದನೆಯನ್ನು ಸೂಚಿಸುತ್ತವೆ. ೨೦೧೦–೧೧ರಲ್ಲಿ ೩೪,೪೭೧ ಹೆ.ನಲ್ಲಿ ಭತ್ತ, ೪೦೦ ಹೆ.ನಲ್ಲಿ ಜೋಳ, ೨೧,೭೫೭ ಹೆ.ನಲ್ಲಿ ಮುಸುಕಿನ ಜೋಳ, ೧,೪೯,೭೩೪ ಹೆ.ನಲ್ಲಿ ರಾಗಿ ಬೆಳೆಯಲಾಗಿತ್ತು. ೧೬,೭೯೬ ಹೆ.ನಲ್ಲಿ ತೊಗರಿ, ೧೮,೭೭೧ ಹೆ.ನಲ್ಲಿ ಹುರಳಿ, ೫೪೬ ಹೆ.ನಲ್ಲಿ ಉದ್ದು, ೭,೬೫೫ ಹೆ.ನಲ್ಲಿ ಹೆಸರು, ೭,೨೮೭ ಹೆ.ನಲ್ಲಿ ಅವರೆ, ೩,೫೭೦ ಹೆ.ನಲ್ಲಿ ಅಲಸಂದೆ ಹಾಗೂ ೭೪೩ ಹೆ. ನಲ್ಲಿ ಕಡಲೆ ಹೀಗೆ ಒಟ್ಟು ೫೫,೩೬೮ ಹೆ.ನಲ್ಲಿ ದ್ವಿದಳ ಧಾನ್ಯಗಳನ್ನೂ, ೧,೨೯,೧೧೭ಹೆ.ನಲ್ಲಿ ಶೇಂಗಾ, ೪,೧೯೭ ಹೆ.ನಲ್ಲಿ ಸೂರ್ಯಕಾಂತಿ, ೨೭೩ ಹೆ.ನಲ್ಲಿ ಹರಳು, ೬೦೯ ಹೆ.ನಲ್ಲಿ ಎಳ್ಳು, ೧,೦೩೩ ಹೆ.ನಲ್ಲಿ ಹುಚ್ಚೆಳ್ಳು ಮೊದಲಾದ ಎಣ್ಣೆಕಾಳುಗಳನ್ನು ಬೆಳೆಯಲಾಗಿತ್ತು. ಜಿಲ್ಲೆಯಲ್ಲಿ ೨೦೧೧ರ ಜನಗಣತಿಯಂತೆ ೧೩,೫೪,೬೪೬ ಮಂದಿ ಒಟ್ಟು ಕೆಲಸಗಾರರಿದ್ದು, ಅದರಲ್ಲಿ ೮,೩೭,೫೧೨ ಮಂದಿ ಪುರುಷರು ಹಾಗೂ ೫,೧೭,೧೩೪ ಮಂದಿ ಮಹಿಳೆಯರು ಸೇರಿದ್ದರು. ಒಟ್ಟು ಕೆಲಸಗಾರರಲ್ಲಿ ೫,೦೫,೯೧೦ ಮಂದಿ ವ್ಯವಸಾಯಗಾರರು, ೩,೫೨,೨೮೬ ಮಂದಿ ಕೃಷಿ ಕಾರ್ಮಿಕರು, ೫೪,೫೨೩ ಮಂದಿ ಗೃಹ ಕೈಗಾರಿಕೆ ಕೆಲಸಗಾರರು ಹಾಗೂ ೪,೪೧,೯೨೭ ಇತರೆ ಕೆಲಸಗಾರರು ಸೇರಿದ್ದರು. ಜಿಲ್ಲೆಯಲ್ಲಿ ಒಟ್ಟು ಕೆಲಸಗಾರರಲ್ಲಿ ೧೯೬೧ರಲ್ಲಿ ಶೇ.೭೯.೯೬ರಷ್ಟು, ೧೯೭೧ರಲ್ಲಿ ಶೇ.೭೭.೮೦ರಷ್ಟು, ೧೯೮೧ರಲ್ಲಿ ಶೇ.೭೯.೧೭ರಷ್ಟು, ೧೯೯೧ ರಲ್ಲಿ ಶೇ.೭೫.೭೮ರಷ್ಟು, ೨೦೦೧ರಲ್ಲಿ ಶೇ ೬೯.೧೨ ರಷ್ಟು ಹಾಗೂ ೨೦೧೧ರಲ್ಲಿ ಶೇ.೬೩.೩೫ ರಷ್ಟು ಮಂದಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದರು.

ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಗ್ರಾಮೀಣ ಪ್ರದೇಶದಲ್ಲಿ ಕೃಷಿಯೇತರ ಚಟುವಟಿಕೆಗಳ ಅಭಿವೃದ್ಧಿಗೆ ಅಗತ್ಯ ಪ್ರೋತ್ಸಾಹ ನೀಡಿದರೆ, ಕಡಿಮೆ ಬಂಡವಾಳ ಹೂಡಿಕೆ, ಹೆಚ್ಚೆಚ್ಚು ಉದ್ಯೋಗ ಸೃಷ್ಟಿ, ಕಡಿಮೆ ಪ್ರಮಾಣದ ಶಕ್ತಿ ಸಂಪನ್ಮೂಲಗಳು ಹಾಗೂ ಕಡಿಮೆ ಪ್ರಮಾಣದ ಮೂಲಭೂತ ಸೌಕರ್ಯಗಳು ದೊರಕಿದರೂ ಸಹ ನಗರ ಪ್ರದೇಶದ ಕೈಗಾರಿಕೆಗಳಿಗಿಂತ ಹೆಚ್ಚಾಗಿ ಗ್ರಾಮೀಣ ಕೈಗಾರಿಕೆಗಳು ಬೆಳವಣಿಗೆ ಹೊಂದಬಹುದಾಗಿದೆ.

ಜಿಲ್ಲೆಯಲ್ಲಿ ಒಂದು ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ಇದ್ದು, ಇದರಲ್ಲಿ ೨೦೧೨ರ ಮಾರ್ಚ್ ಅಂತ್ಯಕ್ಕೆ ೧೪೩೯ ಎಸ್.ಎಸ್.ಎಲ್.ಸಿ., ಯಲ್ಲಿ ಉತ್ತೀರ್ಣರಾಗಿದ್ದವರು, ೧೨೩೫ ಮಂದಿ ಪದವಿ ಪೂರ್ವ ಶಿಕ್ಷಣದಲ್ಲಿ ತೇರ್ಗಡೆಗೊಂಡವರು, ೨೮೯ ಮಂದಿ ಪದವೀಧರರು, ೧೦ ಮಂದಿ ಶೀಘ್ರಲಿಪಿಗಾರರು, ೫೩೭ ಮಂದಿ ಐಟಿಐ ಸರ್ಟಿಫಿಕೇಟ್ ಹೊಂದಿದವರು, ೧೦೬ ಮಂದಿ ಚಾಲಕ ವೃತ್ತಿಯವರು, ೬೨ ಮಂದಿ ಬಿ.ಎಡ್ ಪದವೀಧರರು, ೫೫ ಮಂದಿ ಬಿ.ಪಿ.ಎಡ್ ಪದವೀಧರರು, ೩೩೭ ಮಂದಿ ಡಿಪ್ಲೋಮಾ ಪಡೆದವರು, ೧೬೦ ಮಂದಿ ದೈಹಿಕ ಶಿಕ್ಷಕ ತರಬೇತಿ ಹೊಂದಿದ್ದವರು. ೨೦ ಮಂದಿ ಬೆರಳಚ್ಚುಗಾರರು ಹಾಗೂ ೧೪೦ ಮಂದಿ ಇತರೆಯವರು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಉದ್ಯೋಗಕ್ಕಾಗಿ ತಮ್ಮ ಹೆಸರುಗಳನ್ನು ನೋಂದಾಯಿಸಿ ಕೊಂಡಿದ್ದರು. ನಿರುದ್ಯೋಗ ಸಮಸ್ಯೆಯ ಪರಿಹಾರಾರ್ಥವಾಗಿ ಉದ್ದಿಮೆಗಳ ಸೃಷ್ಟಿ ತನ್ಮೂಲಕ ಉದ್ಯೋಗಾವಕಾಶದ ಹೆಚ್ಚಳ, ಜಿಲ್ಲಾದಾಯ ತಲಾದಾಯಗಳ ಹೆಚ್ಚಳಗಳ ಮೂಲಕ ಜನರ ಜೀವನ ಮಟ್ಟ ಸುಧಾರಿಸಬಹುದಾಗಿದೆ.

ಜಿಲ್ಲೆಯಲ್ಲಿ ಬತ್ತ, ಜೋಳ, ಸಜ್ಜೆ, ಮುಸುಕಿನ ಜೋಳ, ಗೋಧಿ, ರಾಗಿ, ಮೊದಲಾದ ಏಕದಳ ಹಾಗೂ ಉಪತೃಣ ಬೆಳೆಗಳನ್ನೂ, ತೊಗರಿ, ಹುರಳಿ, ಉದ್ದು, ಹೆಸರು, ಅವರೆ, ಅಲಸಂದೆ, ಕಡಲೆ ಮೊದಲಾದ ದ್ವಿದಳ ಧಾನ್ಯಗಳನ್ನೂ, ಕಬ್ಬು, ಅಡಿಕೆ, ತೆಂಗು, ಹತ್ತಿ ಮೊದಲಾದ ವಾಣಿಜ್ಯ ಬೆಳೆಗಳನ್ನೂ, ಎಣ್ಣೆ ಕಾಳುಗಳನ್ನು ಬೆಳೆಯಲಾಗುತ್ತಿರುವುದರಿಂದ ಕೃಷಿ ಆಧಾರಿತ ಕೈಗಾರಿಕೆಗಳ ಸ್ಥಾಪನೆಗೆ ಜಿಲ್ಲೆಯಲ್ಲಿ ವಿಪುಲ ಅವಕಾಶವಿದೆ, ಆಧುನಿಕ ಅಕ್ಕಿ ಗಿರಣಿಗಳು, ಅವಲಕ್ಕಿ ಗಿರಣಿಗಳು, ಬತ್ತದ ಹೊಟ್ಟಿನಿಂದ ಹಲ್ಲುಪುಡಿ ತಯಾರಿಕೆ, ಆಯುರ್ವೇದಿಕ್ ಔಷಧಿಗಳು, ಬಾಳೆಹಣ್ಣಿನ ಚಿಪ್ಸ್ ಹಾಗೂ ಪೌಡರ್, ಮಾವಿನ ಹಣ್ಣಿನ ಜೂಸ್ ಮತ್ತು ತಿರುಳು, ಉಪ್ಪಿನಕಾಯಿ, ಜಾಮ್, ಲೇಹ್ಯ, ಹಲಸಿನ ಚಿಪ್ಸ್, ಹಲಸಿನ ಹಣ್ಣುಗಳನ್ನು ಡಬ್ಬಿಗಳಲ್ಲಿ ತುಂಬಿ ಸಂಸ್ಕರಿಸುವುದು, ತೆಂಗಿನಕಾಯಿ ಪೌಡರ್, ಸುಗಂಧ ಭರಿತ ಅಡಿಕೆ, ಅಡಿಕೆ ಪಟ್ಟೆಯಿಂದ ಕಪ್ಸ್ ಮತ್ತು ತಟ್ಟೆಗಳ ತಯಾರಿಕೆ ಮಾಡಬಹುದಾಗಿದೆ.

ಜಿಲ್ಲೆಯಲ್ಲಿ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಶೇ.೪.೨೨ ರಷ್ಟು ಅರಣ್ಯ ಪ್ರದೇಶವಿದ್ದು, ಅರಣ್ಯಾಧಾರಿತ ಕೈಗಾರಿಕೆಗಳ ಸ್ಥಾಪನೆಗೆ ಅವಕಾಶವಿದೆ. ಅಲ್ಲದೆ ಸೀಗೆಕಾಯಿಪುಡಿ, ಜೇನು, ಗೊಂದು, ಉರುವಲು ಕಟ್ಟಿಗೆ ಮೊದಲಾದವುಗಳಿಗೂ ಅವಕಾಶವಿದೆ. ೨೦೦೭ರ ಜಾನುವಾರು ಗಣತಿಯಂತೆ ಜಿಲ್ಲೆಯಲ್ಲಿ ೧೦,೬೭,೭೧೯ ಜಾನುವಾರುಗಳಿದ್ದು, ಚರ್ಮೋದ್ಯಮದ ಸ್ಥಾಪನೆಗೂ ವಿಪುಲ ಅವಕಾಶವಿದೆ.

ಜಿಲ್ಲೆಯಲ್ಲಿ ೨೦೧೫ರ ಮಾರ್ಚ್ ಅಂತ್ಯಕ್ಕೆ ೨೯ ಬೃಹತ್ ಪ್ರಮಾಣದ ಕೈಗಾರಿಕೆಗಳಿದ್ದು, ಇವುಗಳಲ್ಲಿ ರೂ. ೧೮೯೬.೫೭ ಕೋಟಿ ಬಂಡವಾಳ ತೊಡಗಿಸಲಾಗಿದ್ದು, ೫,೬೯೨ ಮಂದಿಗೆ ಉದ್ಯೋಗ ಒದಗಿಸಿವೆ. ಒಂಬತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿದ್ದು, ರೂ. ೮೪.೩೩ ಕೋಟಿ ಬಂಡವಾಳ ತೊಡಗಿಸಲಾಗಿತ್ತು. ಇವು ೧೪೫೯ ಮಂದಿಗೆ ಉದ್ಯೋಗ ಒದಗಿಸಿವೆ. ೨೭,೩೨೨ ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದು, ರೂ. ೯೨.೨೧ ಕೋಟಿ ಬಂಡವಾಳ ತೊಡಗಿಸಿ, ರೂ.೧೫೦೬೫೬ ಮಂದಿಗೆ ಉದ್ಯೋಗ ಒದಗಿಸಿವೆ. ಜಿಲ್ಲೆಯಲ್ಲಿ ಮತ್ತಷ್ಟು ಉದ್ಯಮಗಳನ್ನು ಸ್ಥಾಪಿಸಲು ಅವಕಾಶವಿದೆ.

ತುಮಕೂರು ಜಿಲ್ಲೆಯಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಅವಕಾಶವಿದ್ದು, ಅವುಗಳನ್ನು ಬೇಡಿಕೆ ಆಧಾರಿತ ಹಾಗೂ ಸಂಪನ್ಮೂಲ ಆಧಾರಿತ ಕೈಗಾರಿಕೆಗಳೆಂದು ಗುರುತಿಸಲಾಗಿದೆ. ಅವುಗಳಲ್ಲಿ ಪ್ರಮುಖವಾದವು ಕೆಳಗಿನಂತಿವೆ.

**೧. ಸಂಪನ್ಮೂಲ ಆಧಾರಿತ ಕೈಗಾರಿಕೆಗಳು**

ಹಲಸಿನ ಹಣ್ಣಿನ ಉತ್ಪನ್ನಗಳು, ಉಪ್ಪಿನಕಾಯಿ, ಮಸಾಲೆ ಪುಡಿಗಳು, ಶಾವಿಗೆ, ಹಣ್ಣು ಸಂಸ್ಕರಣೆ, ಪೀಠೋಪಕರಣಗಳು, ಕೇನ್ ಫರ್ನಿಚರ್, ತೆಂಗಿನ ಕಾಯಿಪುಡಿ, ಕೊಬ್ಬರಿ ಎಣ್ಣೆ, ಅಣಬೆ ಬೇಸಾಯ ಹಾಗೂ ಸಂಸ್ಕರಣೆ, ಆಲೂಗೆಡ್ಡೆ ಚಿಪ್ಸ್, ಆಯುರ್ವೇದಿಕ್ ಔಷಧಿಗಳು, ಸಿಮೆಂಟ್ ಇಟ್ಟಿಗೆಗಳು, ಜೇನು ಸಾಕಾಣಿಕೆ, ಸುಗಂಧ ಭರಿತ ಅಡಿಕೆ, ಅಡಿಕೆ ಎಲೆಗಳಿಂದ ಪ್ಲೇಟ್ ಮತ್ತು ಕಪ್ಸ್‌ಗಳು, ಹಲ್ಲರ್ ಅಂಡ್ ಷೆಲ್ಲರ್ ಮಿಲ್‌ಗಳು, ಒಣಗಿಸಿದ ತೆಂಗಿನ ಕಾಯಿ ಪುಡಿ ಇತ್ಯಾದಿ ಕೈಗಾ–ರಿಕೆಗಳನ್ನು ಸ್ಥಾಪಿಸಬಹುದಾಗಿದೆ.

**೨. ಬೇಡಿಕೆ ಆಧಾರಿತ ಕೈಗಾರಿಕೆಗಳು**

ಬೇಕರಿ ಉತ್ಪನ್ನಗಳು, ಐಸ್‌ಕ್ರೀಮ್, ಹಪ್ಪಳ, ಸಂಡಿಗೆ, ನೋಟ್ ಪುಸ್ತಕ, ಕಾಗದದ ಬ್ಯಾಗ್ ಹಾಗೂ ಕವರ್ಸ್, ವಾಹನಗಳಿಗಾಗಿ ಭಟ್ಟಿ ಇಳಿಸಿದ ನೀರು, ಫಿನಾಯಿಲ್, ಕರ್ಪೂರ, ಸ್ಟೀಲ್ ಫ್ಯಾಬ್ರಿಕೇಶನ್, ವಾಹನಗಳ ರಿಪೇರಿ ಹಾಗೂ ಸರ್ವಿಸಸ್, ಸ್ಕೂಲ್ ಬ್ಯಾಗ್ಸ್, ರೋಲಿಂಗ್ ಶಟರ್ಸ್, ಸಾಫ್ಟ್‌ವೇರ್ ಅಭಿವೃದ್ಧಿ, ಡಿ.ಟಿ.ಪಿ., ಇಂಟರ್‌ನೆಟ್, ವೆಬ್‌ಸೆಂಟರ್, ಆಫ್‌ಸೆಟ್ ಪ್ರಿಂಟಿಂಗ್, ಡಾಟ–ಪ್ರಿಂಟಿಂಗ್, ಡಾಟಾ ಪ್ರೋಸೆಸಿಂಗ್, ಸ್ಕ್ರೀನ್ ಪ್ರಿಂಟಿಂಗ್, ವಾಹನಗಳ ಹೊರಕವಚ ನಿರ್ಮಾಣ, ವಿದ್ಯುತ್ ಲಾಂಡ್ರಿ, ಟೈಯರ್ ರೀ–ಟ್ರೇಡಿಂಗ್ ಮುಂತಾದ ಉದ್ಯಮಗಳನ್ನು ಸ್ಥಾಪಿಸಲು ಜಿಲ್ಲೆಯಲ್ಲಿ ವಿಪುಲ ಅವಕಾಶಗಳಿವೆ.

***